MYSORE LEGISLATIVE ASSEMBLY

Friday, 8th April 1966.

The House met in the Assembly Chamber, Vidhana Soudha, Bangalore, at Ten of the Clock.

MR. DEPUTY SPEAKER (SRI A. R. PANCHAGAVI B.A., LL.B.) in the Chair.

PAPERS LAID ON THE TABLE

Sri VEERENDRA PATIL,—(Minister for Public Works).—I beg to lay on the Table the Revised Budget for 1965-66 and the Budget Estimates of the Mysore State Electricity Board for 1966-67 as required under section 61 (3) and the Annual Accounts for the year 1957-58 of the Mysore State Electricity Board as required under section 69 (5) of the Electricity (Supply) Act, 1948.

1 lay on the Table—

(i) the Annual Report and Accounts of the Mysore State Financial Corporation for the year ended 31st March 1965 as required under sub-section (3) of Section 38 of the State Financial Corporations Act, 1951.

(ii) the Report of the Comptroller and Auditor General of India thereon as required under sub-section (7) of Section 37 of the State Financial Corporations Act, 1951".

SPECIAL MOTION

re. Utilisation of waters of the Cauvery Basin.

Sri H. D. DEVE GOWDA (Holenarasipura).—I beg to move :

"That this House urges upon the Government to devise all ways and means of utilising fully before 1974 the waters of the Cauvery Basin."

Mr. DEPUTY SPEAKER.— Motion moved :

"That this House urges upon the Government to devise all ways and means of utilising fully before 1974 the waters of the Cauvery Basin."

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಈ ಕಾವೇರಿ ನದಿ ಪಾತ್ರದ ಪೂರ್ಣ ನೀರನ್ನು ರಾಜ್ಯ ಸರ್ಕಾರದವರು ಉಪಯೋಗಿಸಿಕೊಳ್ಳುವುದರ ಬಗ್ಗೆ ರಾಜ್ಯ ಸರ್ಕಾರವನ್ನು ಒತ್ತಾಯಪಡಿಸುವುದಕ್ಕೋಸ್ಕರ ಈ ಮಾನ್ಯ ಸಭೆಯ ಮುಂದೆ ಈ ಒಂದು ಸೂಚನೆಯನ್ನು ತಂದಿದ್ದೇನೆ. ಸ್ವಾತಂತ್ರ ಬಂದಮೇಲೆ ಈ 18 ವರ್ಷಗಳಲ್ಲಿ ಈ ನೀರನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ನಮ್ಮ ರಾಜ್ಯ ಯಾವ ಆಸಕ್ತಿಯನ್ನು ತೋರಿಸಿದೆ ಎನ್ನುವುದನ್ನು ನಾವು ಯೋಚನೆ ಮಾಡತಕ್ಕ ಪರಿಸ್ಥಿತಿ ಈ ದಿವಸ ಆಡಳಿತದ ಒಂದು ಅನಾದರಣೆಯಿಂದ ಬಂದಿದೆ. ಮದ್ರಾಸ್ ಮತ್ತು ಮೈಸೂರು ರಾಜ್ಯಕ್ಕೆ ಆದಂಥ ಒಪ್ಪಂದದ ಪರಿಣಾಮವಾಗಿ ನಮಗೆ ಆಗಿರತಕ್ಕ ಅನಾಹುತ ಮತ್ತು ಒಪ್ಪಂದದ ಪರಿಮಿತಿಯೊಳಗೆ ಉಪಯೋಗಿಸಿಕೊಳ್ಳಬೇಕಾಗಿರತಕ್ಕ ನೀರಿನ ಪರಿಮಿತಿ ಹಾಗೂ ಒಪ್ಪಂದ ಮೆರಿಟ್ ಏನು ಇದೆ ಅದರ ಬಗ್ಗೆ ಸ್ವಲ್ಪ ವಿಮರ್ಶೆ ಮಾಡತಕ್ಕ ಒಂದು ಕಾಲ ಈ ದಿವಸ ಬಂದಿದೆ. 1956ನೇ ಇಸವಿಯಲ್ಲಿ ಸ್ಟೇಟ್ ರೀ ಆರ್ಗನೈಸೇಷನ್ ಆದಮೇಲೆ ನಮಗೆ ಈ ಸರ್ಕಾರದಿಂದ ಒದಗಿರತಕ್ಕ ಸೌಲಭ್ಯ ಏನು ಇದೆ ಅದರ ಬಗ್ಗೆ ನಮಗೆ ಸ್ವಲ್ಪ ಅಸಮಾಧಾನವಾಗಿದೆ. ಏಕೆಂದರೆ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಯೋಜನೆಗಳನ್ನು ತಯಾರು ಮಾಡಿದ್ದರೂ ಅವುಗಳನ್ನು ಕಾರ್ಯಗತ ಮಾಡುವುದರಲ್ಲಿ ಸರ್ಕಾರ ತನ್ನ ಆಸಕ್ತಿಯನ್ನು ತೋರಿಸಿಲ್ಲ ಎಂದು ಹೆಚ್ಚು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರಕ್ಕೆ ಪ್ರಾಯಶಃ ನೀರನ್ನು ಉಪಯೋಗಿಸಿಕೊಳ್ಳತಕ್ಕ ಬಗ್ಗೆ ಪೂರ್ಣವಾದ ಮನಸ್ಸು ಇಲ್ಲವೇನೋ ಎನ್ನುವುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ನಾನು ಒಂದು ಪ್ರಶ್ನೆಯನ್ನು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ದಿವಸ ಅಪ್ಪರ್ ಕೃಷ್ಣಾ ನೀರನ್ನು ಉಪಯೋಗಿಸುವುದರ ಬಗ್ಗೆ ಶ್ರೀ ಎಂ. ಆರ್. ಪಾಟೀಲ್ ಅವರ ನಿರ್ಣಯಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುವುದಾದರೂ ಇಷ್ಟೆ. 1924ನೇ ಇಸವಿ ಅಗ್ರಿಮೆಂಟಿನ ಪ್ರಕಾರ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ನಮ್ಮ ರಾಜ್ಯ ಸರ್ಕಾರದ ಒಂದು ನಿಲುವು ಏನು ಇದೆ ಅದನ್ನು ಈ ಅಪ್ಪರ್ ಕೃಷ್ಣಾ ನೀರನ್ನು ಉಪಯೋಗಿಸುವ ಬಗ್ಗೆ ನಿಲುವು ಏನು ಇದೆ ಈ ಎರಡನ್ನೂ ಹೊಂದಾವಣಿಕೆಯಿಂದ ಯೋಚನೆ ಮಾಡುವುದಾದರೆ ಪ್ರಾಯಶಃ ಸರ್ಕಾರಕ್ಕೆ ಕಾವೇರಿ ನದಿ ನೀರನ್ನು ಉಪಯೋಗಿಸುವ ವಿಚಾರದಲ್ಲಿ ಅನಾಸಕ್ತಿ ಇದೆಯೋ ಏನೋ ಎಂದು ವ್ಯಕ್ತವಾಗುತ್ತದೆ. ಕೃಷ್ಣಾ ನದಿಯ ಪೂರ್ಣ ನೀರನ್ನು ಉಪಯೋಗಿಸುವ ಬಗ್ಗೆ ನಾನು ಅಡ್ಡಿ ಬರುವುದಿಲ್ಲ. 600 ಟಿ. ಎಂ. ಸಿ. ಫೀಟ್ ಕೊಟ್ಟಿದ್ದಾರೆ ಅದರಲ್ಲಿ 226 ಟಿ. ಎಂ. ಸಿ. ಫೀಟ್ (ಫಸ್ಟ್‌ಸ್ಟೇಜ್ ಮತ್ತು ಸೆಕೆಂಡ್ ಸ್ಟೇಜ್) ಅಪ್ಪರ್ ಕೃಷ್ಣಾ ಯೋಜನೆಯಿಂದ ಉಪಯೋಗಿಸಲು ಅಂದಾಜು ಮಾಡಲಾಗಿದೆ. ಆದರೆ ಉಳಿದ ಎಲ್ಲಾ ನೀರು ಉಪಯೋಗಿಸಲು ಈಗಿನ ಹಣದ ಪರಿಸ್ಥಿತಿಯಿಂದ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಕಾವೇರಿ ನೀರನ್ನು ಉಪಯೋಗಿಸುವ ಬಗ್ಗೆ ಸಾಕಷ್ಟು ಸಾಮರ್ಥ್ಯ ತೋರಿಸಿಲ್ಲ. ಏನೋ ಒಂದು ಮೋಷನ್ ಸಭೆಯ ಮುಂದೆ ತರುವ ಸನ್ನಿವೇಶ ಬಂದಿದೆ. ಇದರ ಜೊತೆಗೆ ಕೇಂದ್ರದಲ್ಲಿ ನಮ್ಮ ರಾಜ್ಯದ ಪಾರ್ಲಿಮೆಂಟ್ ಸದಸ್ಯರು ಕೂಡ ಕಾವೇರಿ ನೀರನ್ನು ಉಪಯೋಗಿಸುವ ಬಗ್ಗೆ ಒತ್ತಾಯಪಡಿಸಿ ನಮ್ಮ ರಾಜ್ಯದ ಹಿತಾಶಕ್ತಿಯನ್ನು ಕಾಪಾಡತಕ್ಕ ಬಗ್ಗೆ ಅವರು ತಮ್ಮ ಕರ್ತವ್ಯ ಮಾಡಿಲ್ಲ, ಎಂದರೆ ಅವರ ಬಗ್ಗೆ ಯಾವುದೇ ವಿಧವಾದ ಟೀಕೆ ಮಾಡುವುದಕ್ಕೆ ಹೇಳುತ್ತಾ ಇಲ್ಲ. ಕಾವೇರಿ ವಾಟರ್ ಉಪಯೋಗಿಸುವ ಬಗ್ಗೆ ನಮ್ಮ ಸಂಸ್ಥಾನದ ಪ್ರತಿನಿಧಿಗಳಾದ ಪಾರ್ಲಿಮೆಂಟ್ ಸದಸ್ಯರಲ್ಲಿ ಸಾಕಷ್ಟು ಅನಾದರಣೆ ಇದೆ ಎಂದು ಒತ್ತಿ ಹೇಳುತ್ತೇನೆ. 600 ಟಿ. ಎಂ. ಸಿ. ಎಫ್. ಟಿ. ಕೃಷ್ಣಾ ಗೋದಾವರಿ ವಾಟರ್ಸ್ ಉಪಯೋಗಿಸುವ ಬಗ್ಗೆ ನಮ್ಮ ಸರ್ಕಾರ ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದೆ. ಶ್ರೀ ನಿಜಲಿಂಗಪ್ಪನವರು ಒಂದು ಮುಖಂಡತ್ವ ಮತ್ತು ಪ್ರಭಾವದಿಂದ, ಪ್ಲಾನ್‌ನಲ್ಲಿ ಸೇರದೇ ಇರತಕ್ಕ ಯೋಜನೆಯನ್ನು ಅವರು ಪುನಃ ಪರಿಶೀಲನೆ ಮಾಡಿ ಪ್ಲಾನನ್ನು ರಿವೈಸ್‌ಮಾಡಿ ಕೃಷ್ಣಾ ನೀರನ್ನು ಉಪಯೋಗಿಸುವ ಬಗ್ಗೆ ಅಪ್ಪರ್ ಕೃಷ್ಣಾಗೆ ಅನುಮತಿ ದೊರಕಿಸಿಕೊಂಡು ಬಂದಿದ್ದಾರೆ. ಅದು ಸಾಹಸದ ಕಾರ್ಯ. ಯಾವ ಯೋಜನೆಗಳು ಪ್ಲಾನ್‌ನಲ್ಲಿ ಅಡಕವಾಗಿವೆ ಅವುಗಳನ್ನು ಕಾರ್ಯಗತ ಮಾಡಲು ನಿಮಗೆ ಆಸಕ್ತಿ ಇಲ್ಲದೇ ಇರಲು ಕಾರಣ ಏನು ಎಂದು ನಾನು ಕೇಳಬೇಕಾಗಿದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಒಂದು ದೊಡ್ಡ ಪ್ರಾಜೆಕ್ಟ್. ಅದನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರಕ್ಕೆ ಹಣವಿಲ್ಲವೆಂದು ಈ ಸಭೆಯಲ್ಲಿ ನಿನ್ನೆ ಹೇಳಿದ್ದೀರಿ. ಆದರೆ ಸುಮಾರು 120 ಕೋಟಿ ರೂಪಾಯಿ ಬೇಕು ಎಂದು ಅದು 200 ಕೋಟಿ ರೂಪಾಯಿಯವರೆಗೆ ರೈಸ್ ಆಗಬಹುದು. ಅಂತಹ ಸ್ಕೀಮನ್ನು ಸ್ಟೇಟ್ ರಿಸೋರ್ಸಸ್‌ನಿಂದ ಮಾಡುವ ಶಕ್ತಿ ಸರ್ಕಾರಕ್ಕೆ ಇಲ್ಲದ ಕಾಲದಲ್ಲಿ, ತಾವು ಅದಕ್ಕೆ ಕೈಹಾಕಿ 70 ಲಕ್ಷ 50 ಲಕ್ಷ, 20 ಲಕ್ಷ ಖರ್ಚು ಮಾಡಿದರೆ 100 ವರ್ಷಗಳಾದರೂ ಆ ಪ್ರಾಜೆಕ್ಟನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಕೇಂದ್ರ ಪೂರ್ಣ ನೆರವುಕೊಟ್ಟು ನ್ಯಾಷನಲ್ ಪ್ರಾಜೆಕ್ಟ್ ಮಾಡಬೇಕು ಎನ್ನುವ ಬಗ್ಗೆ ಈ ಸಭೆ ಅಭಿಪ್ರಾಯ ಪಡೆಯತಕ್ಕದ್ದು ಎಂದು $4\frac{1}{2}$ ವರ್ಷ ಆದಮೇಲೆ ತಮಗೆ ಅನುಭವ ಬಂದಿದೆ. ಸರ್ಕಾರಕ್ಕೆ ಹಣಕಾಸಿನ ಶಕ್ತಿ ಇಲ್ಲ, ಎಂದು ತನ್ನ ಒಂದು ಸೋಲನ್ನು ಒಪ್ಪಿಕೊಳ್ಳತಕ್ಕ ಧಾಟಿ

ಯಿಂದು ನಿನ್ನೆ ಸಭೆಯಲ್ಲಿ ನಮ್ಮ ಮುಂದೆ ಮಾತನ್ನು ಹೇಳಿದ್ದೀರಿ. ನಾನು ಪ್ರಶ್ನೆ ಮಾಡುವುದು ಇಷ್ಟೇ. ಸ್ಟೇಟ್ ರಿಸೋರ್ಸಸ್‌ನಿಂದ ಬೃಹತ್ ಪ್ರಾಜೆಕ್ಟ್ ತೆಗೆದುಕೊಳ್ಳಲಿಕ್ಕೆ ಕಷ್ಟವಾದ ಕಾಲದಲ್ಲಿ ಸ್ಮಾಲ್ ಪ್ರಾಜೆಕ್ಟ್ಸ್ ಅಂದರೆ 5, 10, 15 ಕೋಟಿ ರೂಪಾಯಿಗಳ ಪ್ಲಾನ್ ಪ್ರಾಜೆಕ್ಟ್‌ಗಳನ್ನು ಉಪೇಕ್ಷೆ ಮಾಡಿದ್ದಾರೆ ಎನ್ನುವ ಆರೋಪಣೆಯನ್ನು ಸರ್ಕಾರದ ಮೇಲೆ ಹೊರಿಸುವ ಬಗ್ಗೆ ನನ್ನ ವಾದ ಸರಣಿಯನ್ನು ಮುಂದುವರಿಸುತ್ತೇನೆ. ಸ್ವಾಮಿ, ಇದೇ ಮಾನ್ಯ ಸಭೆಯಲ್ಲಿ 1964ನೇ ಇಸವಿಯಲ್ಲಿ ಖಾಸಗೀ ನಿರ್ಣಯವನ್ನು ತೆಗೆದುಕೊಂಡು ಬಂದಂಥ ಕಾಲದಲ್ಲಿ ಈ ಸಭೆಯಲ್ಲಿ ಉತ್ತರ ಕೊಡುವಾಗ ಸರ್ಕಾರದ ವತಿಯಿಂದ ಈ ಸಭೆಯ ಮುಖಂಡರಾದ ಶ್ರೀ ನಿಜಲಿಂಗಪ್ಪನವರು ಹೇಳಿದ್ದಾರೆ. ಈ ಒಂದು ನಿರ್ಣಯ ಒಪ್ಪಿಕೊಳ್ಳಬಹುದು, ಬಹಳ ಸಾಧುವಾಗಿದೆ, ಆ ಕಾರ್ಯ ಮೂರನೇ ಪಂಚವಾರ್ಷಿಕ ಯೋಜನೆ ಒಳಗೆ ಕೈಕೊಂಡಿದ್ದರೆ ಅದನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸುತ್ತಿದ್ದೆವೋ ಏನೋ, ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಸೇರಿಸದೇ ಇದ್ದರೆ ನಾನೂ ಕೂಡ ಒಪ್ಪಿಕೊಳ್ಳುತ್ತಿದ್ದೆ ಎಂದು ಶ್ರೀ ನಿಜಲಿಂಗಪ್ಪನವರು ಕೊಟ್ಟಂತ ಉತ್ತರದಿಂದ ಹೇಳುತ್ತಿದ್ದೇನೆ. ಈ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ, ಮೈಸೂರಿನ ಐದು ಜಿಲ್ಲೆಗಳಿಗೆ ತೊಂದರೆಯಾಗುತ್ತಿದೆ. ಈ ತರದ ದಾಕ್ಷಿಣ್ಯಕ್ಕೆ ಒಳಗಾಗಿ, ಇದರ ಫಲಿತಾಂಶದಿಂದ ನಮ್ಮ ಹಳೆಯ ಮೈಸೂರಿಗೆ ಬಹಳ ಕಟುತರವಾದ ಅನ್ಯಾಯವಾಗಿದೆ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಇದಕ್ಕಾಗಿ, 1974ರ ಒಳಗೆ ಆ ನೀರಿನ ಉಪಯೋಗವನ್ನು ಪೂರ್ಣವಾಗಿ ಮಾಡಬೇಕು, ಮತ್ತು ಅದಕ್ಕೆ ಬೇಕಾದ ಸಮರ್ಥತೆಯನ್ನು ಮತ್ತು ಪ್ರಯತ್ನವನ್ನು ಮಾಡಬೇಕೆಂದು ಸರ್ಕಾರದವರಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಈ ನಮ್ಮ ಅಗ್ರಿಮೆಂಟ್ ಏನಿದೆ, ಅದನ್ನು ನಾನು ವೈಯಕ್ತಿಕವಾದ ಅಭಿಪ್ರಾಯದಿಂದ ಹೇಳುವುದಾದರೆ, ಇದನ್ನು ಪುನರ್ವಿಮರ್ಶೆ ಮಾಡತಕ್ಕ ಕಾಲ ಬಂದಿದೆ. ಇದಕ್ಕೆ ಅನೇಕ ಕಾರಣಗಳಿವೆ. ಅವನ್ನು ಒಂದೊಂದಾಗಿ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇವತ್ತು ಕೆ. ಆರ್. ಎಸ್. ಮೇಲೆ ಇರತಕ್ಕ ಶೆಡ್ಯೂಲ್ಡ್ ರಿವರ್ಸ್ ಏನಿವೆ, ಅಲ್ಲಿಂದ ಬರತಕ್ಕ ನೀರನ್ನೂ ಮತ್ತು ನಾನ್ ಶೆಡ್ಯೂಲ್ಡ್ ರಿವರ್ಸ್ ಏನಿವೆ, ಅವುಗಳಿಂದ ಬರತಕ್ಕ ನೀರನ್ನೂ ಮದ್ರಾಸ್ ಸರ್ಕಾರದವರು ಉಪಯೋಗಿಸುತ್ತಿದ್ದಾರೆ. ಈ ಶೆಡ್ಯೂಲ್ಡ್ ಮತ್ತು ನಾನ್ ಶೆಡ್ಯೂಲ್ಡ್ ರಿವರ್‌ಗಳ ನೀರನ್ನು ಉಪಯೋಗಿಸುತ್ತಿದ್ದಾರೆ. ಇದರಲ್ಲಿ ನಮಗಾಗತಕ್ಕ ತೊಂದರೆಗಳನ್ನು ನಾವು ಬಹಳ ತೀವ್ರವಾಗಿ ವಿಮರ್ಶೆಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಶೆಡ್ಯೂಲ್ಡ್ ರಿವರ್ಸ್ ಪ್ರದೇಶ ಎಷ್ಟು ಚದರ ಮೈಲಿಗಳು ಎನ್ನತಕ್ಕಂತದ್ದನ್ನು ಸುಮ್ಮನೆ ಅಂಕಿಅಂಶಗಳಲ್ಲಿ ಕೊಡುತ್ತೇನೆ. ಈಗ ನಾನ್ ಶೆಡ್ಯೂಲ್ಡ್ ಮತ್ತು ಶೆಡ್ಯೂಲ್ಡ್ ರಿವರ್ಸ್ ಕವರ್ ಆಗತಕ್ಕ ಏರಿಯಾ ಒಟ್ಟು 13 ಸಾವಿರದ 500 ಚದರ ಮೈಲಿ. ಶೆಡ್ಯೂಲ್ಡ್ ರಿವರ್ಸ್ ಕವರ್ ಆಗತಕ್ಕದ್ದು ಕೇವಲ 4100 ಚದರ ಮೈಲಿಗಳು. 9400 ಚದರ ಮೈಲಿ ನಾನ್ ಶೆಡ್ಯೂಲ್ಡ್ ರಿವರ್ಸಿನ ನೀರು ಹರಿಯತಕ್ಕ ಪ್ರದೇಶ. ಈ ನೀರನ್ನು ಮದ್ರಾಸ್ ಸರ್ಕಾರದವರು ಅನುಭವಿಸುತ್ತಾ ಇದ್ದಾರೆ. ಆದರ ಫಲಿತಾಂಶ ಏನಾಗಿದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಅದಲ್ಲದೆ ಈ ನೀರಿನ ಹಕ್ಕು ಏನಿದೆ, ಅದನ್ನು ನಮಗೆ ಉಪಯೋಗಿಸಲು ಸಮರ್ಥತೆ ಇಲ್ಲದೆ, ಶಕ್ತಿ ಇಲ್ಲದೆ ಅವರಿಗೆ ಬಿಟ್ಟು ಕೊಟ್ಟಿದ್ದೇವೆ. ಇವೆಲ್ಲವನ್ನೂ ನಾವು ಯೋಚನೆ ಮಾಡಬೇಕು. ಏಕೆಂದರೆ ಪ್ರಿನ್ಸ್‌ಲೀ ಸ್ಟೇಟ್ ಆಗಿದ್ದ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಆಗಿದ್ದ ಒಪ್ಪಂದವನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ಈಗ ನಲವತ್ತು ವರ್ಷದ ಅವಧಿ ಕಳೆದು ಹೋಗಿದೆ, ಅದನ್ನು ಈಗ ಪ್ರಶ್ನೆ ಮಾಡುವುದಕ್ಕೆ ನಮ್ಮ ಸರ್ಕಾರದವರು ಸಮರ್ಥತೆಯನ್ನು ಶಕ್ತಿಯನ್ನು ಹೊಂದಿಲ್ಲವೇ ಎಂದು ನಾನು ಇಲ್ಲಿ ವೈಯಕ್ತಿಕವಾಗಿ ಪ್ರಶ್ನೆ ಮಾಡಬೇಕಾಗಿದೆ. ಇದಕ್ಕೆ ಕಾರಣಕರ್ತರು ಯಾರೇ ಇರಲಿ, ಈ ಅಗ್ರಿಮೆಂಟ್ ಮೈಸೂರು ರಾಜ್ಯಕ್ಕೆ ಬಹಳ ಹಾನಿಕಾರಕವಾದುದು. ಇದರ ಬಗ್ಗೆ ನಮ್ಮ ಸರ್ಕಾರದವರು ಬಹಳ ಆಳವಾದ ನಿಲುವನ್ನು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ತೆಗೆದುಕೊಳ್ಳಬೇಕಾಗಿದೆ. ಇದನ್ನೆಲ್ಲಾ ಒಂದು, national point of view ನಿಂದ ತೀರ್ಮಾನ ಮಾಡಬೇಕೆಂದು ಇಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಮಗೆ ಆರ್ಥಿಕ ಪ್ರಗತಿಯಾಗಬೇಕಾದರೆ, ನಮ್ಮ ನೀರಾವರಿ ಏನಿವೆ, ಅದರ ಹಕ್ಕು ಏನಿವೆ, ಅವನ್ನೆಲ್ಲಾ ಸರಿಪಡಿಸಿಕೊಂಡು ಬೇರೆ ಯಾವ ರಾಜ್ಯಗಳ ಪ್ರಭಾವಕ್ಕೆ ಒಳಗಾಗದೆ. ಮದ್ರಾಸಿನವರು ಮಾಡಿರತಕ್ಕ ಅನ್ಯಾಯದ ಬಗ್ಗೆ ಬಹಳ ತೀಕ್ಷ್ಣವಾದ ನಿಲುವನ್ನು ಮೈಸೂರು ಸರ್ಕಾರದವರು ತಾಳತಕ್ಕದ್ದನ್ನು ಯೋಚನೆ ಮಾಡಬೇಕಾಗಿದೆ.

ಈಗ ಮದ್ರಾಸ್ ಸರ್ಕಾರದವರು ಕೆ. ಆರ್. ಎಸ್. ನಲ್ಲಿ ಒಬ್ಬ ಆಫೀಸರನ್ನು ಇಟ್ಟಿದ್ದಾರೆ. ನಿಮ್ಮ ಸರ್ಕಾರದ ಇಂಜಿನಿಯರು ಬರೆದ ಕಾಗದಕ್ಕೆ ಮದ್ರಾಸ್ ಸರ್ಕಾರದವರು ಉತ್ತರ ಕೊಡುವುದಿಲ್ಲ. ಅಲ್ಲಿಯ ಅಧಿಕಾರಿಯು ಪ್ರತಿನಿತ್ಯವೂ ಅವರಿಗೆ ರಿಪೋರ್ಟ್ ಮಾಡುತ್ತಿರುತ್ತಾನೆ. ಈ ವಿಷಯದಲ್ಲಿ ನಮ್ಮ ರಾಜ್ಯಕ್ಕೆ ಶಕ್ತಿ ಇಲ್ಲವೇ, ಅಥವಾ ಸಾಮರ್ಥ್ಯವಿಲ್ಲವೇ ಎಂಬುದನ್ನು ಪರಿಶೀಲಿಸ

(ಶ್ರೀ ಹೆಚ್. ಡಿ. ದೇವೇಗೌಡ)

ಬೇಕು. ಇವತ್ತು ಅವರು ಅಭಿವೃದ್ಧಿ ಮಾಡಿರತಕ್ಕ ಪ್ರದೇಶವನ್ನು ನೋಡಿದರೆ, ನಮ್ಮ ಸರ್ಕಾರದವರು ಏನೂ ಮಾಡಿಲ್ಲ ಎನ್ನುವ ರೀತಿಯಲ್ಲಿ ಕಾಣುತ್ತದೆ. ನಮ್ಮ ಅಗ್ರಿಮೆಂಟ್ ಇದೆ. ಆದರೆ ಇದನ್ನೆಲ್ಲಾ ಅವರು ಬಹಳ ಉದಾಸೀನ ಮನೋಭಾವದಿಂದ ಬಹಳ ತಾತ್ಸಾರ ಮನೋಭಾವದಿಂದ ನೋಡತಕ್ಕ ಅವಕಾಶವನ್ನು ನಮ್ಮ ಸರ್ಕಾರದವರೇ ಕಲ್ಪಿಸಿಕೊಟ್ಟಿದ್ದಾರೆ. ಇದಕ್ಕೆ ಕಾರಣರು ಯಾರು? ಇವತ್ತಿನ ದಿವಸ ನಮ್ಮ ದೇಶದಲ್ಲಿ ನೋಡುವುದಾದರೆ ಮುಖಂಡರ ಕೊರತೆಯೇನೂ ಕಡಿಮೆ ಇಲ್ಲ. ನಾನು ಇಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಸಾಮರ್ಥ್ಯವನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ನಡೆಯತಕ್ಕ ವ್ಯವಹಾರಗಳನ್ನು ಆಡಳಿತ ಸೂತ್ರವನ್ನು ನೋಡಿದರೆ, ನಮ್ಮ ಸರ್ಕಾರಕ್ಕೆ ಏನು ಶಕ್ತಿ ಎಂಬುದು ಕಾಣುತ್ತದೆ. ಇವತ್ತಿನ ದಿವಸ ಮದ್ರಾಸಿನವರು ಈ ನಮ್ಮ ಅಗ್ರಿಮೆಂಟ್ ಏನಿದೆ, ಅದನ್ನು ಉಲ್ಲಂಘನೆ ಮಾಡತಕ್ಕ ಕಾಲದಲ್ಲಿ ಅದನ್ನು ತಡೆಗಟ್ಟತಕ್ಕ ಶಕ್ತಿ ನಮ್ಮ ರಾಜ್ಯಕ್ಕೆ ಇದೆಯೇ, ನಮ್ಮ ರಾಜ್ಯದ ಹಕ್ಕನ್ನು ಕಾಪಾಡತಕ್ಕ ಧೈರ್ಯ ಇದೆಯೇ ಮತ್ತು ಅವರು ಅಗ್ರಿಮೆಂಟನ್ನು ಮುರಿದು ಮುಂದೆ ಎಷ್ಟು ಹೋಗಿದ್ದಾರೆ ಎನ್ನುವುದನ್ನೆಲ್ಲಾ ನಾವು ಯೋಚನೆ ಮಾಡಬೇಕು. ಇವತ್ತು ಕಾವೇರಿ ಬೇಸಿನ್‌ನಲ್ಲಿ ಅವರು ಸುಮಾರು 19 ಲಕ್ಷ ಎಕರೆಯಷ್ಟು ಪ್ರದೇಶದಲ್ಲಿ ನೀರಾವರಿ ಮಾಡಿದ್ದಾರೆ. ಆದರೆ ನಮ್ಮ ಮೈಸೂರು ರಾಜ್ಯದವರು ಕೇವಲ ಒಂದು ಲಕ್ಷ 20 ಸಾವಿರ ಚಿಲ್ಲರೆ ಎಕರೆ ಮಾತ್ರ ಮಾಡಿದ್ದಾರೆ ಎಂದು ಹೇಳಿದರೆ, ನಾವು ತಲೆತಗ್ಗಿಸಬೇಕಾಗುತ್ತದೆ. ಈ ಜಲಾಶಯದ ಯೋಜನೆ ಸರ್. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮಾಡಿದ್ದು. ಹೀಗೆ ಅವರು ಇಷ್ಟು ನೀರಾವರಿ ಮಾಡತಕ್ಕ ಕಾಲದಲ್ಲಿ ನಾವು ಏನು ಮಾಡುತ್ತಿದ್ದೆವು, ಎಂಬುದನ್ನೆಲ್ಲಾ ಪ್ರಶ್ನೆಮಾಡಬೇಕಾಗಿದೆ. ನಮ್ಮ ನೀರನ್ನು ಅವರು ಉಪಯೋಗಿಸಿಕೊಳ್ಳುವಾಗ ನೀವು ಏನು ಮಾಡುತ್ತಿದ್ದೀರಿ? ನಿಮಗೆ ಸಾಮರ್ಥ್ಯತೆ ಇದ್ದರೆ, ನೀವು ಕೇಂದ್ರಕ್ಕೆ ಹೋಗಿ ಅವರು ಒಪ್ಪಿಗೆ ಕೊಡಲಿ, ಕೊಡದಿರಲಿ ನೀವು ಮುಂದುವರಿಯಲೇಬೇಕು. ಇದಕ್ಕೆ ನಿಮಗೆ ಶಕ್ತಿ ಇಲ್ಲವಾದರೆ, ಈ ರಾಜ್ಯವನ್ನೂ ಮದ್ರಾಸಿಗೆ ವಿಲೀನ ಮಾಡಿ ಅವರ ಕೈಕೆಳಗೆ ಇರಲು ಸಿದ್ಧರಾಗಿ. ಇದಕ್ಕಿಂತ ಹೇಯಕರವಾದುದು ಬೇರೆ ಯಾವುದೂ ಇಲ್ಲ ಎಂದು ನಾನಾದರೂ ಹೇಳುತ್ತೇನೆ. ಇವತ್ತು ನಮ್ಮ ಪ್ರಾಜೆಕ್ಟುಗಳ ಪರಿಸ್ಥಿತಿ ಏನಾಗಿದೆ. ಇವತ್ತು ಸಿ.ಡಬ್ಲ್ಯೂ.ಪಿ.ಸಿ.ಯಲ್ಲಿ ನಮ್ಮ ಹಿತಾಸಕ್ತಿಗಳನ್ನು ಕಾಪಾಡತಕ್ಕ ಜನರು ಯಾರಿದ್ದಾರೆ? ಕೇಂದ್ರ ಮಂತ್ರಿಮಂಡಲದಲ್ಲಿ ಯಾರಿದ್ದಾರೆ? ಮತ್ತು ಪ್ಲಾನಿಂಗ್ ಕಮಿಷನಿನಲ್ಲಿ ಯಾರಿದ್ದಾರೆ? ಇದನ್ನೆಲ್ಲಾ ತುಲನಾತ್ಮಕವಾಗಿ ಯೋಚನೆ ಮಾಡಬೇಕು. ನಮ್ಮ ಮೈಸೂರು ದೇಶದ ಹಿತವನ್ನು ಕಾಪಾಡತಕ್ಕ ಪರಿಸ್ಥಿತಿ ಇಲ್ಲವೇನೋ, ಇದು ನಮ್ಮ ದುರ್ದೈವವೋ ಎನ್ನುವುದನ್ನು ನಾನು ಇಲ್ಲಿ ಬಹಳ ಮನನೊಂದು ಹೇಳಬೇಕಾಗಿದೆ. ಈ ನಾಲ್ಕು ವರ್ಷದಲ್ಲಿ ಕಾವೇರಿ ನದಿ ನೀರನ್ನು ಉಪಯೋಗಮಾಡತಕ್ಕ ವಿಚಾರದಲ್ಲಿ ಹತ್ತಾರು ಇಂಟರ್‌ಪೆಲ್ಲೇಶನ್ಸ್ ಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಯವರ ಆಶ್ವಾಸನೆಯ ಮೇಲೆ ಅದನ್ನು ವಾಪಸು ತೆಗೆದುಕೊಂಡಿದ್ದೇವೆ. ಆದರೆ ಇಷ್ಟು ವರ್ಷಗಳಲ್ಲಿ ಆದದ್ದೇನು? ಅದನ್ನು ಯಾವುದಾದರೂ ಕಾರ್ಯ ರೂಪಕ್ಕೆ ತಂದಿದ್ದೀರಾ ಎಂಬುದನ್ನು ತಿಳಿಸಬೇಕು. ಉದಾಹರಣೆಗೆ ಮಾನ್ಯ ಮಂತ್ರಿಯವರು ಹಾಸನ ಜಿಲ್ಲೆಯಲ್ಲಿ ಒಂದೆರಡು ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ಆದರೆ ಅದು ಆಗಿ ಇಷ್ಟು ಕಾಲವಾದರೂ, ಇಲ್ಲಿಯವರೆಗೆ ಅಲ್ಲಿ ಆದದ್ದೇನೆಂಬುದನ್ನು ನಾವು ಯೋಚನೆ ಮಾಡಬೇಕು. ಇವತ್ತಿನ ದಿವಸ ನಿಜವಾಗಿ ಹೇಳುವುದಾದರೆ, ಮೈಸೂರು ದೇಶ ತನ್ನ ಒಂದು ಜಡತ್ವದಿಂದ ಹೊರಬರಬೇಕು. ಯಾರೇ ಬೇಕಾದರೂ ಇರಲಿ, ಇವತ್ತು ಶ್ರೀ ವೀರೇಂದ್ರ ಪಾಟೀಲರಿರಬಹುದು, ನಾಳೆ ಇನ್ನೊಬ್ಬರಿರಬಹುದು, ನಾವು ಒಂದು ವಿಷಯದಲ್ಲಿ ಹಿಂದಿನ ಮಂತ್ರಿಯವರಾದ ಶ್ರೀಮಾನ್ ಚನ್ನಬಸಪ್ಪನವರನ್ನು ಶ್ಲಾಘನೆ ಮಾಡಬೇಕು. ಅವರು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೆಂಟ್ರಲ್‌ನವರು ಸಹಾಯ ಕೊಡಲಿ, ಬಿಡಲಿ, ನಾವು ಯೋಜನೆಯನ್ನು ತೆಗೆದುಕೊಳ್ಳುವ ಸಮರ್ಥತೆಯನ್ನು ಮಾಡಿಯೇ ಮಾಡುತ್ತೇವೆ ಎಂಬುದನ್ನು ಹೇಳಿದ್ದಾರೆ. ಆದರೆ, ವ್ಯೆಯಕ್ತಿಕ ಭಿನ್ನಾಭಿಪ್ರಾಯಗಳಿಂದ ಪ್ರಾಜೆಕ್ಟುಗಳೆಲ್ಲಾ ಮುಂದುವರಿಯಲೇ ಇಲ್ಲ. ಇದರ ಪ್ರತಿಫಲವೇನು? ಯಾರೇ ಆಗಲಿ, ಚನ್ನಬಸಪ್ಪನವರೇ ಆಗಲಿ, ವೀರೇಂದ್ರ ಪಾಟೀಲರೇ ಆಗಲಿ, ನಿಜಲಿಂಗಪ್ಪನವರೇ ಆಗಲಿ, ಇದನ್ನು ಒಂದು ದೇಶದ ಹಿತದೃಷ್ಟಿಯಿಂದ ಜನತೆಯ ಹಿತಾಸಕ್ತಿಗಳಿಗೋಸ್ಕರ ಮಾಡಬೇಕೇ ಹೊರತು, ಬೇರೆ ಯಾವ ವ್ಯೆಯಕ್ತಿಕ ಉದ್ದೇಶಗಳಿಂದ ಮಾಡಬಾರದು. ಇದಕ್ಕೆಲ್ಲಾ ಕಾರಣಕರ್ತರು ಯಾರು ಎಂಬುದನ್ನು ಕೂಡ ಯೋಚನೆ ಮಾಡಬೇಕು.

ಸ್ವಾಮಿ, ಇವತ್ತಿನ ದಿವಸ ನಾನು ಬಹಳ ಕಟುವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ದೇಶದ ಎಲ್ಲರ ಹಿತಾಸಕ್ತಿಯನ್ನೂ ಕಾಪಾಡುವಂಥದ್ದು ಮುಖ್ಯ. ಸರ್ಕಾರದವರು ಉತ್ತರ

ಕೊಡುವಾಗ ಅವರ ದೃಢವಾದ ನಿಲುವೇನು ಎಂದು ಹೇಳಬೇಕು. ಮದ್ರಾಸ್ ಸರ್ಕಾರ ಹೊಸದಾಗಿ 19 ಲಕ್ಷ ಎಕರೆಯನ್ನು ಅಭಿವೃದ್ಧಿ ಮಾಡಿರುವ ಸನ್ನಿವೇಶದಲ್ಲಿ ಅಗ್ರಿಮೆಂಟಿನ ಪರಿಮಿತಿ ಏನಿದೆ ಅದನ್ನು ಮೀರಿ, ಅದನ್ನು ಪ್ರತಿಭಟಿಸಿ ಏಳು ಲಕ್ಷ ಎಕರೆ ಹೆಚ್ಚು ನೀರಾವರಿ ಮಾಡಿದ್ದಾರೆ. ಆ ವಿವರಗಳನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮೆಟ್ಟೂರು ಪ್ರದೇಶದಲ್ಲಿ ಮೂರು ಲಕ್ಷ ಎಕರೆ, ಭವಾನಿ ಪ್ರಾಜೆಕ್ಟ್‌ನಲ್ಲಿ 2·1 ಲಕ್ಷ ಎಕರೆ, ಅಮರನಾಥ 25 ಸಾವಿರ, ನಿಯೋಲ್ ಪ್ರಾಜೆಕ್ಟ್ 30 ಸಾವಿರ ಎಕರೆ, ಎಕ್ಸ್‌ಪ್ಯಾನಷನ್ ಆಫ್ ಮೆಟ್ಟೂರ್ ಹೈ ಲೆವಲ್ ಕೆನಾಲ್ 50 ಸಾವಿರ ಎಕರೆ, ಕಟ್ಟಾಳಿ ಯಲ್ಲಂಬಾಡಿ 80 ಸಾವಿರ ಎಕರೆ. ಇದರ ಜೊತೆಗೆ ಲಿಫ್ಟ್ ಇರಿಗೇಷನ್ನಿಗೆ ಎಲ್ಲ ಭಾಗಗಳಲ್ಲಿಯೂ ಅವಕಾಶವನ್ನು ಕೊಟ್ಟಿದ್ದಾರೆ. ಹೀಗಿರುವಾಗ ನಾವು ಇಲ್ಲಿ ಭಾಷಣ ಮಾಡುತ್ತಿದ್ದೇವೆ. ಆಲೂರು ಹನುಮಂತಪ್ಪನವರನ್ನು ಒಬ್ಬ ಉಪಮಂತ್ರಿಗಳಾಗಿ ಇಟ್ಟಿದ್ದಾರೆ. ಅವರು ಉಪಮಂತ್ರಿಗಳಾಗಿರಲಿ, ಅದಕ್ಕೆ ನಾನು ಬೇಡ ಎನ್ನುವುದಿಲ್ಲ. ಯಾರಾದರೂ ಅನುಭವವಿರುವವರನ್ನು ಇಟ್ಟರೆ ಕೆಲಸಕಾರ್ಯಗಳು ಚೆನ್ನಾಗಿ ನಡೆದುಕೊಂಡು ಹೋಗಬಹುದು ಅಷ್ಟೆ. ನಾವು ಕಾವೇರಿ ನದಿ ನೀರನ್ನು ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಇನ್ನೂ ಯೋಚನೆ ಮಾಡುತ್ತಿದ್ದೇವೆ. ನಮ್ಮಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮನ್ನು ತೆಗೆದುಕೊಳ್ಳುವುದಕ್ಕೆ ಇನ್ನೂ ಯೋಚನೆ ಮಾಡುತ್ತಿದ್ದೇವೆ. ಪಬ್ಲಿಕ್ ವರ್ಕ್ಸ್ ಇಲಾಖೆ ಲಿಫ್ಟ್ ಇರಿಗೇಷನ್ ಸ್ಕೀಮನ್ನು ತೆಗೆದುಕೊಂಡಿದೆ ಎಂದು ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬರುತ್ತದೆ. ಆದರೆ 10 ಎಕರೆಯಷ್ಟು ಪ್ರದೇಶದಲ್ಲಿ ಲಿಫ್ಟ್ ಇರಿಗೇಷನ್ ಮಾಡಿದ್ದೇವೆ ಕಾವೇರಿ ಬೇಸಿನ್‌ನಲ್ಲಿ ಎಂದು ಹೇಳುವುದಾದರೆ ನನ್ನ ಟೀಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಮಾಡುವ ಕೆಲಸ ಕಡಮೆಯಾದರೂ ಅದು ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ. ಇವತ್ತು ಮದ್ರಾಸ್ ಸರ್ಕಾರದವರು ಪತ್ರಿಕೆಗಳಲ್ಲಿ ಬರತಕ್ಕ ಪ್ರತಿಯೊಂದು ಅಂಶವನ್ನೂ ಓದಿ ಯೋಚನೆ ಮಾಡುತ್ತಿದ್ದಾರೆ. ನಾವು ಇಲ್ಲಿ ಏನು ಮಾಡುತ್ತಿದ್ದೇವೆ, ಯಾವ ಹಂತದಲ್ಲಿ ಹೋಗುತ್ತಿದ್ದೇವೆ ಎನ್ನುವುದನ್ನು ಗಮನವಿಟ್ಟು ನೋಡುತ್ತಿದ್ದಾರೆ. ಹಣದ ವಿಷಯ ಬೇರೆ. ಅದಕ್ಕೆ ನಾನು ಆಮೇಲೆ ಬರುತ್ತೇನೆ. ನಾವು ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ರಾಜ್ಯ ಸರ್ಕಾರ ಎಷ್ಟರಮಟ್ಟಿಗೆ ತನ್ನ ಪ್ರಯತ್ನವನ್ನು ಮಾಡಿದೆ ಎನ್ನುವಂಥ ಪ್ರಶ್ನೆ ನಮ್ಮ ಮುಂದೆ ಇದೆ. ನಮ್ಮ ಇಂಜಿನಿಯರುಗಳು ತಯಾರು ಮಾಡಿ ಕಳುಹಿಸಿದ ಪ್ರಾಜೆಕ್ಟ್ ರಿಪೋರ್ಟ್‌ಗಳಲ್ಲಿ ಎಷ್ಟನ್ನು ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ? ಕೇಂದ್ರದವರಿಗೆ ನಮ್ಮ ಮೇಲೆ ಮಲತಾಯಿ ಧೋರಣೆ ಇದ್ದ ಹಾಗೆ ಇದೆ. ಅವರು ನಮ್ಮ ರಾಜ್ಯದ ವಿಷಯದಲ್ಲಿ ಇತರ ರಾಜ್ಯಗಳ ವಿಷಯದಲ್ಲಿ ಇರುವಂತೆಯೇ ಇರಬೇಕು. ಹಾಗಿಲ್ಲದೆ ಇದ್ದರೆ ಈ ರಾಜ್ಯವನ್ನು ಹರಿದು ಮಹಾರಾಷ್ಟ್ರಕ್ಕೆ ಸ್ವಲ್ಪ, ಆಂಧ್ರಕ್ಕೆ ಸ್ವಲ್ಪ ಮದ್ರಾಸ್ ರಾಜ್ಯಕ್ಕೆ ಸ್ವಲ್ಪ, ಹೀಗೆ ಹಂಚಿಕೆ ಮಾಡಲಿ, ನಾವೆಲ್ಲ ಅವರ ಗುಲಾಮರಾಗಿರೋಣ. ಕೇಂದ್ರದಲ್ಲಿ ಮದ್ರಾಸಿನವರ ಪ್ರಾಬಲ್ಯವಿದೆಯೋ; ಆಂಧ್ರದವರ ಪ್ರಾಬಲ್ಯವಿದೆಯೋ; ಇದಕ್ಕೆಲ್ಲ ಯಾರು ಹೊಣೆ? ಜನತೆ ಇದಕ್ಕೆ ಹೊಣೆಯೇ? ಇದು ಸರ್ಕಾರದ ಹೊಣೆ, ಸರ್ಕಾರಕ್ಕೆ ಜನತೆಯ ಹಿತಾಸಕ್ತಿಯನ್ನು ರಕ್ಷಿಸುವ ಶಕ್ತಿ ಇಲ್ಲದೆ ಹೋದರೆ ಅಂಥವರು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಲಾಯಖ್ ಅಲ್ಲ.

ಷೆಡ್ಯೂಲ್ ನದಿಗಳ ನೀರಿನ ಪೈಕಿ 180 ಟಿ.ಎಂ.ಸಿ. ನೀರನ್ನು ನಾವು ಉಪಯೋಗಿಸಿಕೊಳ್ಳಬಹುದಾಗಿದೆ. ಇದರ ಪೈಕಿ ಕೃಷ್ಣರಾಜಸಾಗರವೂ ಸೇರಿ 116 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡಿದ್ದೇವೆ. ಉಳಿದ 64 ಟಿ.ಎಂ.ಸಿ. ನೀರಿನಲ್ಲಿ 19 ಟಿ.ಎಂ.ಸಿ. ನೀರನ್ನು ಹೇಮಾವತಿ ಯೋಜನೆಯನ್ನು ಕೈಕೊಳ್ಳುವುದರಿಂದ ಉಪಯೋಗಿಸುವ ಪ್ರಯತ್ನವನ್ನು ಮಾಡುವುದಕ್ಕೆ ಹೊರಟಿದ್ದೇವೆ. ಈ ಪ್ರಾಜೆಕ್ಟಿಗೆ ಕೇಂದ್ರ ಜಲ ವಿದ್ಯುತ್ ಆಯೋಗ ಆಕ್ಷೇಪಣೆಯನ್ನು ಎತ್ತಿದೆ. ಇದು ನಮ್ಮ ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯನ್ನು ಇಟ್ಟುಕೊಂಡಿಲ್ಲವೆಂದು ಕಾಣುತ್ತದೆ. ಕೇಂದ್ರ ಜಲ ವಿದ್ಯುತ್ ಆಯೋಗ ರಾಷ್ಟ್ರೀಯ ಮಟ್ಟದಲ್ಲಿರುವ ಸಂಸ್ಥೆ. ಇದಕ್ಕೆ ಇಂಡಿಯಾ ದೇಶದ ಪ್ರತಿಯೊಂದು ರಾಜ್ಯದ ಹಿತಾಸಕ್ತಿಯನ್ನೂ ಕಾಪಾಡಿಕೊಂಡು ನಿಷ್ಪಕ್ಷಪಾತವಾಗಿ ತನ್ನ ತೀರ್ಮಾನವನ್ನು ಕೊಡತಕ್ಕ ಸಂಸ್ಥೆ. ಆದರೆ ಈಗ ಅಂಥ ಸಂಸ್ಥೆಯ ನಿಲುವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ ಎಂದು ಕೇಳಬೇಕಾಗುತ್ತದೆ. ನಮ್ಮಲ್ಲಿರತಕ್ಕ 64 ಟಿ.ಎಂ.ಸಿ. ನೀರಿನಲ್ಲಿ 19 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಮದ್ರಾಸ್ ಸರ್ಕಾರದ ಒಪ್ಪಿಗೆ ಬೇಕು ಎಂದು ಅವರು ಹೇಳುತ್ತಿದ್ದಾರೆ. ಅವರು ಹೇಳುವುದನ್ನು ನೋಡಿದರೆ ನಾವು ಒಂದು ಲೀಟರ್ ನೀರನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಈ ದಿವಸದ ಪತ್ರಿಕೆಯಲ್ಲಿ ಮದ್ರಾಸ್ ರಾಜ್ಯದಿಂದ ನಮಗೆ ಮೂರು ಸಾವಿರ ಟನ್ ಅಕ್ಕಿ ಬರುತ್ತದೆ ಎಂದು ನೋಡಿದೆ. ಈ ರೀತಿ ಪರದೇಶಗಳ ಮೇಲೆ ಅವಲಂಬಿಸಿಕೊಂಡಿದ್ದರೆ ಹೇಗೆ ನಡೆಯುತ್ತದೆ? ಆಂಧ್ರದವರು ಅಕ್ಕಿ ಕೊಡುತ್ತಾರೆ, ಮದ್ರಾಸಿನವರು ಅಕ್ಕಿ ಕೊಡುತ್ತಾರೆ ಎಂದು ನಾವು ಕುಳಿತರೆ ಅದರಿಂದ ಎಲ್ಲಿಯವರೆಗೆ ಪಾರಾಗಬಹುದು? ಹೇಮಾವತಿ ಪ್ರಾಜೆಕ್ಟಿಗೆ ಬೇಕಾದ 19 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಮದ್ರಾಸ್ ಸರ್ಕಾರವನ್ನು ನಾವು ಕೇಳ

(ಶ್ರೀ ಹೆಚ್. ಡಿ. ದೇವೇಗೌಡ)

ಬೇಕಾದರೆ, ಈ ಯೋಜನೆಗೆ ಮಾನ್ಯ ಮುಖ್ಯಮಂತ್ರಿಯವರಾದ ನಿಜಲಿಂಗಪ್ಪನವರು ಗುದ್ದಲಿ ಪೂಜೆ ಮಾಡಬೇಕಾಗಿತ್ತೇ ? ಗುದ್ದಲಿ ಪೂಜೆಯನ್ನು ಮಾಡಿದಾಗ ಐದು ವರ್ಷಗಳಲ್ಲಿ ಈ ಪ್ರಾಜೆಕ್ಟನ್ನು ಕಟ್ಟಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ನಮ್ಮ ರಾಜ್ಯದ ರಿಸೋರ್ಸಸ್‌ನಲ್ಲಿರುವ ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟತಕ್ಕ ಒಂದೇ ಒಂದು ಪ್ರಾಜೆಕ್ಟನ್ನು ಮಾಡುವುದಕ್ಕಾಗುವುದಿಲ್ಲ ಎಂದರೆ ಏಕೆ ಗುದ್ದಲಿಪೂಜೆ ಮಾಡಬೇಕಾಗಿತ್ತು ? ನಾವು ಏನಾದರೂ ಕೇಳಿದಾಗ ಸಣ್ಣ ನೀರಾವರಿಗೆ 200 ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನ್ ಮಾಡಿದ್ದೇವೆ ಎಂದು ಏನೇನೋ ಹೇಳುತ್ತಾರೆ. ಲಘುವಾದ ಹೇಳಿಕೆಗಳು, ವ್ಯವಹಾರಗಳು ಸರ್ಕಾರಕ್ಕೆ ಘನತೆಯನ್ನು ತರುವುದಿಲ್ಲ. ಜನ ಬಹಳ ದಿನ ಸುಮ್ಮನೆ ಕುಳಿತಿರಲಾರರು. ಪಶ್ಚಿಮ ಬಂಗಾಳದಲ್ಲಿ, ಕೇರಳದಲ್ಲಿ ಅಲ್ಲಿಯ ಜನರ ಹಿತಾಸಕ್ತಿಗಳನ್ನು ಸರ್ಕಾರ ಕಾಪಾಡಲಿಲ್ಲ. ಅದರ ಪರಿಣಾಮ ಏನಾಯಿತು ಎನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇವತ್ತು ನಾವು ಕೇಂದ್ರ ಸರ್ಕಾರದ ನಿಲುವಿನ ಮೇಲೆ ಹೋರಾಟ ಮಾಡಬೇಕಾಗಿದೆ. ಇದಕ್ಕೆ ನಮ್ಮ ಸರ್ಕಾರಕ್ಕೆ ಶಕ್ತಿ ಇಲ್ಲ ಎಂದು ಮನವರಿಕೆಯಾದರೆ ಜನತೆ ಸರ್ಕಾರದ ವಿರುದ್ಧ ಏಳಬೇಕಾಗುತ್ತದೆ. ಆಗ ಕೇಂದ್ರ ಸರ್ಕಾರಕ್ಕೆ ಬಹಳ ಕೆಟ್ಟದಾದ ಕಾಲ ಬರುತ್ತದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ನೀರಾವರಿ ಬೋರ್ಡಿನಲ್ಲಿ ಇರಿಗೇಷನ್ ಮಿನಿಸ್ಟರಿದ್ದಾರೆ. ಅವರು ಎಷ್ಟು ದೊಡ್ಡವರೇ ಆಗಲಿ ಅವರ ವಿಷಯದಲ್ಲಿ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ—ಆಂಧ್ರ ಮತ್ತು ಮದ್ರಾಸ್ ಸರಕಾರಗಳ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ತಯಾರಾಗಿದ್ದಾರೆ, ದೇಶದ ಬೊಕ್ಕಸದಿಂದ ಆ ರಾಜ್ಯಗಳು ಬೇಕಾದ ಸವಲತ್ತುಗಳನ್ನು ಪಡೆಯುತ್ತಿವೆ. ತನ್ನ ಅಧಿಕಾರಿದಲ್ಲಿ ಎಲ್ಲ ಸಂಸ್ಥಾನಗಳ ಹಿತಾಸಕ್ತಿಯನ್ನೂ ಒಂದೇಸಮನೆ ಕಾಪಾಡಬೇಕಾದ್ದು ಅವರ ಧರ್ಮ. ಆದರೆ ಅಲ್ಲಿ ಆಗುತ್ತಿರವುದಾದರೂ ಏನು ? ಕೇಂದ್ರ ಜಲ ವಿದ್ಯುತ್ ಆಯೋಗದಲ್ಲಿ ಎರಡು ರಾಜ್ಯಗಳು ಮಾತ್ರ ಆಸಕ್ತಿಯನ್ನು ಪಡೆಯುವುದಕ್ಕೆ ಅವಕಾಶವಾಗಿದೆ. ಇದಕ್ಕಿಂತಲೂ ಹೇಯಕರವಾದ ವ್ಯವಹಾರ ಬೇಕೇ ! ನಮ್ಮ ರಾಜ್ಯದ ಅಭಿವೃದ್ಧಿಯ ಬಗ್ಗೆ ಅವರು ತೋರಿಸಿರತಕ್ಕ ಅನಾದರಣೆ ಅವರಿಗೆ ಯೋಗ್ಯವಾದುದಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೇಂದ್ರ ಜಲ ವಿದ್ಯುತ್ ಆಯೋಗದಲ್ಲಿ ಇವತ್ತು ಆಂಧ್ರ ಮತ್ತು ಮದ್ರಾಸಿನವರು ಇದ್ದಾರೆ, ಪ್ಲಾನಿಂಗ್ ಕಮಿಷನ್‌ನಲ್ಲಿ ಕೂಡ ಆಂಧ್ರ ಮತ್ತು ಮದ್ರಾಸಿನವರಿದ್ದಾರೆ. ನಮ್ಮ ರಾಜ್ಯವನ್ನು ಪ್ರತಿನಿಧಿಸುವವರು ಅಲ್ಲಿ ಯಾರೂ ಇಲ್ಲ. ನಮ್ಮ ರಾಜ್ಯದ ಎಂ.ಪಿ.ಗಳು ಯಾರೂ ಇದರಲ್ಲಿಲ್ಲ. ನಮ್ಮ ರಾಜ್ಯ ಸರ್ಕಾರ, ನಮ್ಮ ಮಂತ್ರಿಮಂಡಲ ಏನು ಕೆಲಸ ಮಾಡುತ್ತಿದೆ ? ಇಷ್ಟೊಂದು ನಿರ್ವೀರ್ಯತೆ ಈ ಸರ್ಕಾರಕ್ಕೆ ಬರಬಾರದು. ಅವರು ಪ್ರತಿಭಟನೆ ಮಾಡಬೇಕು. ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಲು ಇನ್ನು ಉಳಿದಿರುವುದು ಕೇವಲ ಎಂಟೇ ವರ್ಷಗಳು. ಆ ಅವಧಿಯೊಳಗೆ ನಮ್ಮ ರಾಜ್ಯದ ನೀರಿನ ಹಕ್ಕನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಅವರಿಗೆ ಇಲ್ಲ. ನಮಗೆ ಬರಬೇಕಾದ ನೀರಿನ ಪಾಲು ಹೋಗುತ್ತದೆ, 1974ನೇ ಇಸವಿ ಆದಮೇಲೆ ನಮ್ಮ ನೀರಿನ ಪರಿಸ್ಥಿತಿ ಏನಾಗುತ್ತದೆಯೋ ಎಂದು ನಾವು ಭಯಪಡಬೇಕಾಗಿಲ್ಲ. ನಮ್ಮ ಮುಖ್ಯಮಂತ್ರಿಗಳು ಆಶಾವಾದಿಗಳು ಈ ರೀತಿ ಹೇಳಿರುವುದನ್ನು ನಾನು ಕೇಳಿದ್ದೇನೆ. ಇವರ ಲೀಗಲ್ ಕಾನ್‌ಸೀಕ್ವೆನ್ಸಸ್ ಏನೇ ಇರಲಿ, ಮಳೆ ಬೀಳುತ್ತದೆ, ನಮ್ಮ ನದಿಗಳು ನೀರನ್ನು ಕೊಡುತ್ತವೆ, ನಾವು ಅಣೆಕಟ್ಟೆಗಳನ್ನು ಶತಾಯಗತಾಯ ಕಟ್ಟುತ್ತೇವೆ ಎನ್ನುವ ವಿಚಾರವನ್ನು ಸರ್ಕಾರ ಧೈರ್ಯವಾಗಿ ಹೇಳಬೇಕು. ಮದ್ರಾಸಿನಲ್ಲಿರುವ ಅಣೆಕಟ್ಟುಗಳು ಬತ್ತಿಹೋಗುತ್ತವೆ, ಅವರಿಗೆ ನೀರು ಒದಗುವುದಿಲ್ಲ, ಎನ್ನುವ ವಿಚಾರಗಳು ನಮಗೆ ಬೇಕಾಗಿಲ್ಲ. ಅದು ಅವರ ಫ್ಯೂನರಲ್. ಅವರು ಕಟ್ಟಬೇಕಾದ ಪ್ರಾಜೆಕ್ಟ್‌ಗಳ ರಿಪೋರ್ಟನ್ನು ನಮಗೆ ಕಳಿಸಿದ್ದಾರೆಯೇ, ಅವರು ಕಟ್ಟುವುದಕ್ಕೆ ಮುಂಚೆ ನಮ್ಮ ಅನುಮತಿಯನ್ನು ಕೇಳಿದ್ದಾರೆಯೇ ? ಅವರು ಮಾಡಿರುವುದನ್ನು ನಾವು ಉಲ್ಲಂಘನೆ ಮಾಡಬೇಕಾದರೆ ನಮ್ಮ ಷೆಡ್ಯೂಲ್ಡ್ ಮತ್ತು ನಾನ್ ಷೆಡ್ಯೂಲ್ಡ್ ರಿವರ್ಸ್ ಏನಿವೆ ಆ ಎಲ್ಲ ನದಿಗಳ ನೀರನ್ನೂ ಉಪಯೋಗಿಸಿಕೊಳ್ಳುವ ಅವಕಾಶವನ್ನು ನಾವು ತೆಗೆದುಕೊಳ್ಳಬೇಕು. ಅವರು ನಮ್ಮ ಮೇಲೆ ಕೋರ್ಟಿಗೆ ಹೋದರೂ ಚಿಂತೆ ಇಲ್ಲ ಎನ್ನುವ ಧೈರ್ಯ ನಮ್ಮಲ್ಲಿ ಬರಬೇಕು ಎಂದು ಮಾನ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

10-30 A.M.

ಅದಕ್ಕೆ ಕೇಂದ್ರ ಸರ್ಕಾರದವರನ್ನು ಕೇಳಬೇಕಾದ್ದಿಲ್ಲ. ಅವರಿಗೆ ಅದನ್ನು ಕೊಡುವುದಕ್ಕೆ ಸಾಧ್ಯವಾಗದೇ ಇದ್ದರೆ ನಮ್ಮ ರಾಜ್ಯ ಸರ್ಕಾರದವರು ಸಣ್ಣ ಸಣ್ಣದಾಗಿ 50 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಾವೇರಿ ನದಿಯ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವಿದೆ. ನಮ್ಮ

ರಾಜ್ಯದಲ್ಲಿ ಪ್ರತಿ ವರ್ಷ ಬಡ್ಜೆಟ್ಟಿನಲ್ಲಿ 153 ಕೋಟಿ ರೂಪಾಯಿಗಳನ್ನೇನು ಖರ್ಚುಮಾಡುತ್ತಾರೆಯೋ ಅದರಲ್ಲಿ ನೂರಾರು ಪ್ರಾಜೆಕ್ಟುಗಳಿಗೆ ಒದಗಿಸಿರತಕ್ಕ ಹಣದಲ್ಲಿ 50 ಸಾವಿರ, ಒಂದು ಲಕ್ಷ, ಒಂದು ಲಕ್ಷ 25 ಸಾವಿರ ರೂಪಾಯಿಗಳು ಹೀಗೆ ಹಣವನ್ನು ಉಳಿಸಿ ಅದನ್ನು ಕಾವೇರಿ ನದಿಯ ನೀರನ್ನು ಉಪಯೋಗಿಸಿಕೊಳ್ಳತಕ್ಕ ಯೋಜನೆಗೆ ಖರ್ಚುಮಾಡಬಹುದು.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಹಳೆಯ ಮೈಸೂರಿನ ಮಂತ್ರಿಗಳು ಏನಿದ್ದಾರೆಯೋ ಅವರ ಪ್ರಾತಿನಿಧ್ಯವನ್ನು ಮಂತ್ರಿಮಂಡಲದಲ್ಲಿ ವಜಾ ಮಾಡಿಬಿಡಿ. ಅವರು ನಮ್ಮ ದೇಶಕ್ಕೆ ಏನೂ ಅನುಕೂಲವನ್ನು ಮಾಡುವ ಮಟ್ಟದಲ್ಲಿ ಇಲ್ಲ. ಮಂತ್ರಿಮಂಡಲದಲ್ಲಿ ಹಳೆಯ ಮೈಸೂರಿನ ಪ್ರಾತಿನಿಧ್ಯ ಇಲ್ಲದೇ ಇದ್ದರೆ ಮಂತ್ರಿಮಂಡಲದವರು ಜನರು ನಮ್ಮನ್ನು ಬೈಯುತ್ತಾರೆಂದು ಹಳೇ ಮೈಸೂರಿನ ಕೆಲಸವನ್ನು ಕರೆಕ್ಟಾಗಿ ಮಾಡಬೇಕು ಎಂಬ ಒಂದು ಭಯ ಅವರಿಗೆ ಬರುತ್ತದೆ. 5 ಜನ ಹಳೆಯ ಮೈಸೂರಿನ ಮಂತ್ರಿಗಳು ಕುಳಿತುಕೊಂಡು ಏನೂ ಕೆಲಸವನ್ನು ಮಾಡುತ್ತಿಲ್ಲ. ಕಾರಿನಲ್ಲಿ ಚೆನ್ನಾಗಿ ತಿರುಗಾಡುತ್ತಾರೆ. ಭೂಷಣವಾಗಿ ಫೋಟೋಗಳನ್ನು ತೆಗೆಸಿಕೊಳ್ಳುತ್ತಾರೆ. ದೇಶದ ಹಿತವನ್ನು ಕಾಪಾಡುವುದರಲ್ಲಿ ಇವರಿಗೆ ಆಸಕ್ತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇವೊತ್ತು ಸಂಸ್ಥಾನದ ಒಂದು ನಿಜವಾದ ಸಮಸ್ಯೆ ಏನಿದೆ ಆ ಸಮಸ್ಯೆಯ ಕಡೆಗೆ ತಮ್ಮ ಒಂದು ಗಮನವನ್ನು ಹರಿಸುತ್ತಿದ್ದೀರಾ ಎಂದು ನಾನು ಕೇಳುತ್ತೇನೆ. ನನ್ನ ವೈಯ್ಯಕ್ತಿಕ ಅಭಿಪ್ರಾಯವೇನೆಂದರೆ ಮಂತ್ರಿಮಂಡಲದಲ್ಲಿ ಹಳೆಯ ಮೈಸೂರಿಗೆ ಪ್ರಾತಿನಿಧ್ಯ ಬೇಡ ಎಂದು. ಈಗ ಮಂತ್ರಿಮಂಡಲದಲ್ಲಿ ಹಳೇ ಮೈಸೂರಿಗೆ ಪ್ರಾತಿನಿಧ್ಯ ಇದೆ ಎಂದು ಹೇಳತಕ್ಕ ವಾದ ಏನಿದೆ ಅದರಲ್ಲಿ ಏನೂ ತಿರುಳು ಇಲ್ಲ. ಮಂತ್ರಿಗಳಿಗೆ ಕೆಲಸ ಮಾಡುವುದಕ್ಕೆ ಆಸಕ್ತಿ ಇಲ್ಲ, ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವಿಷಯದಲ್ಲಿ ನಾನು ಮನನೊಂದು ಹೇಳುತ್ತಿದ್ದೇನೆ. ನನಗೆ ವೇದನೆ ಆಗುತ್ತಿದೆ. ಈ ಮಾತನ್ನು ನಾನು ಬಹಳ ಕಟುವಾಗಿ ಹೇಳುತ್ತಿದ್ದೇನೆ. ಕಾವೇರಿ ನದಿಯ ನೀರಿನ್ನು ಉಪಯೋಗ ಮಾಡಿಕೊಳ್ಳತಕ್ಕ ಬಗ್ಗೆ ಇರತಕ್ಕಂಥ ಅಗ್ರಿಮೆಂಟ್ ಏನಿದೆ ಇದರಲ್ಲಿರತಕ್ಕ ಲೋಪದೋಷಗಳನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ಗ್ರಾಂಡ್ ಅಣೆಕಟ್ಟಿನಲ್ಲಿ 6·5 ಫೀಟ್ ನೀರು ಏನು ಹರಿಯುತ್ತದೆ ಅದು ಈ ಅಗ್ರಿಮೆಂಟಿನ ಪರಿಮಿತಿಯೊಳಗೆ ಇಲ್ಲ. ಕೆ. ಆರ್. ಎಸ್ ನ ಅಳತೆಯನ್ನು ತೆಗೆದುಕೊಂಡರೆ, ಅದರ ಬೌಂಡರಿಯಲ್ಲಿ ನಮಗೆ ಬರಬೇಕಾದ ನೀರಿನ ಪ್ರಮಾಣವನ್ನೆಲ್ಲಾ ಮದ್ರಾಸ್ ಸರ್ಕಾರದವರು ಕೊಡುತ್ತೇವೆ ಎಂದು ಹೇಳುತ್ತಾರೆ. ಅದಕ್ಕೆ ನಾವು ಭಯಪಡಬೇಕಾಗಿಲ್ಲ. ಕಾನೂನು ಪ್ರಕಾರ ಅದರ ಬಗ್ಗೆ ನಾವು ಅವರೊಡನೆ ವ್ಯವಹಾರವನ್ನು ಮಾಡಬೇಕು. 6·5 ಫೀಟ್ ನೀರು ಏನು ಹರಿಯುತ್ತದೆಯೋ ಅದನ್ನು ನಮ್ಮ ಬೌಂಡರಿಯವರೆಗೂ ಅಲೋ ಮಾಡಬೇಕು. ನಾನ್ ಷೆಡ್ಯೂಲ್ ರಿವರ್‍ಸ್‌ನಲ್ಲಿ 9400 ಚದುರ ಮೈಲಿಯಲ್ಲಿ ಹರಿಯತಕ್ಕ ನೀರು ಏನಿದೆ ಅದನ್ನು ಮದ್ರಾಸ್ ಸರ್ಕಾರದವರು ಉಪಯೋಗಿಸುತ್ತಿದ್ದಾರೆ. ಅದರಿಂದ ಅವರ 19 ಲಕ್ಷ ಎಕರೆ ಜಮೀನನ್ನು ಡೆವಲಪ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕಾಗಿತ್ತು ಎಂದು ನಾನು ಹೇಳುತ್ತೇನೆ.

ಇನ್ನು ಈ ನದಿಯ ಕ್ಯಾಚ್‌ಮೆಂಟ್ ಏರಿಯಾ ಏನಿದೆ ಅದರಲ್ಲಿ ನಮ್ಮ ಮೈಸೂರಿಗೆ ಎಷ್ಟು ಸೇರಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಒಂದು ಟೆಕ್ನಿಕಲ್ ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿ ಅವರ ಒಂದು ಅಭಿಪ್ರಾಯದ ಪ್ರಕಾರ ಕಾವೇರಿ ನದಿಯಿಂದ ನಮಗೆ ನ್ಯಾಯವಾಗಿ ಎಷ್ಟು ನೀರು ಸಿಕ್ಕಬೇಕೋ ಅಷ್ಟನ್ನು ಕೂಡ ನಾವು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹಳೆಯ ಮೈಸೂರು ಹೊಸ ಮೈಸೂರು ಎನ್ನುವ ಪ್ರಶ್ನೆಗೆ ಸಂಬಂಧಪಟ್ಟ ವಾದವಲ್ಲ. ಕೃಷ್ಣಾ ನದಿಯ ನೀರು ದೇಶದ ಪ್ರಗತಿಗೆ ಎಷ್ಟು ಅವಶ್ಯಕವೋ ಹಾಗೆಯೇ ಕಾವೇರಿ ನದಿಯ ನೀರೂ ದೇಶದ ಪ್ರಗತಿಗೆ ಅಷ್ಟೇ ಅವಶ್ಯಕ. ಇದು ನಾಲ್ಕೈದು ಜಿಲ್ಲೆಗಳ ಆರ್ಥಿಕ ಪ್ರಗತಿಗೆ ಮೂಲಭೂತವಾದ ವಿಚಾರ. ಇದನ್ನು ಹಾಗೆಯೇ ಬಿಟ್ಟರೆ ಅದರಿಂದ ಬಹಳ ಅನಾಹುತವಾಗುತ್ತದೆ. ಅದಕ್ಕೆ ಯಾರು ಹೊಣೆಯಾರು ಎಂಬುದನ್ನು ನಾನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ಕೊನೆಯದಾಗಿ ಇವೊತ್ತು ಈ ಸಭೆಯಲ್ಲಿ ನಿಲುವಳಿ ಸೂಚನೆಯನ್ನು ನಾವೇನು ತಂದಿದ್ದೇವೆಯೋ ಇದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಕೇಂದ್ರ ಸರ್ಕಾರದವರು ಪೂರ್ಣವಾಗಿ ಹಣವನ್ನು ಕೊಡದೇ ಹೋದರೆ ಕೊನೆಗೆ ಪಾರ್ಷಿಯಲ್ ಆಗಿ ಆದರೂ ಅವರು 40-50 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಸಹಾಯ ಮಾಡದೇ ಇದ್ದರೆ ಅದನ್ನು ನಿಲ್ಲಿಸಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಅದಕ್ಕೆ ಕಾರಣ ಏನೆಂದರೆ ನಮ್ಮಲ್ಲಿ ಇರತಕ್ಕ ಲಿಮಿಟೆಡ್ ರಿಸೋರ್ಸಸ್ ಏನಿದೆ ಅದರಲ್ಲಿ 120 ಕೋಟಿ ರೂಪಾಯಿಗಳ ಯೋಜನೆಗೆ ಹಣವನ್ನು ಕೊಡುವುದಕ್ಕಾಗುವುದಿಲ್ಲ, ಎಂದು ನಾನು ಹೇಳುತ್ತೇನೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್, ಮಲಪ್ರಭಾ, ಹಾರಂಗಿ ಮತ್ತು ಹೇಮಾವತಿ ಈ ಯೋಜನೆಗಳೇನಿವೆ ಅವುಗಳನ್ನು ತೆಗೆದುಕೊಂಡು ಪೂರ್ತಿ ಮಾಡುತ್ತೇವೆ ಎಂದು ಹೇಳತಕ್ಕ ಸ್ಲೋಗನ್ ಏನಿದೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ

(ಶ್ರೀ ಹೆಚ್. ಡಿ. ದೇವೇಗೌಡ)

ರಾಜ್ಯದ ಆರ್ಥಿಕ ಸಂಪನ್ಮೂಲಗಳಿಂದ ಇವುಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಸಾಕಷ್ಟು ಹಣ ಸಹಾಯವನ್ನು ಮಾಡದೇ ಇದ್ದರೆ ಕೇಂದ್ರ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಮ್ಮ ರಿಸೋರ್ಸಸ್ ಏನಿದೆ ಅದನ್ನು ಯೋಚನೆ ಮಾಡಿ 1974 ನೇ ಇಸವಿಯೊಳಗಾಗಿ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. 1976 ನೇ ಇಸವಿಯ ಒಳಗಾಗಿ ಕೃಷ್ಣಾನದಿಯ 600 ಟಿ. ಎಮ್. ಸಿ. ಎಫ್. ನೀರನ್ನು ಉಪಯೋಗಿಸಿಕೊಳ್ಳಬೇಕು. ಅದಕ್ಕೆ 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಕಾವೇರಿ ನದಿ ಮತ್ತು ಕೃಷ್ಣಾ ನದಿಗಳಿಂದ 330 ಟಿ.ಎಂ.ಸಿ.ಎಫ್.ಟಿ. ನೀರನ್ನು 1974ನೇ ಇಸವಿಯ ಒಳಗೆ ಉಪಯೋಗಿಸಿಕೊಳ್ಳುವುದಕ್ಕೆ 350 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದರಲ್ಲಿ ಯಾವುದನ್ನು ಮಾಡುತ್ತಾರೋ ಗೊತ್ತಿಲ್ಲ. ಈ ವಿಷಯದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ, ಕೇಂದ್ರ ಸರಕಾರದವರು ಇದನ್ನು ಸರ್ವಾನು ಮತದಿಂದ ಧಿಕ್ಕರಿಸುತ್ತಾರೆ. ಅವರು ಅದನ್ನು ಧಿಕ್ಕರಿಸುವುದಾದರೆ ರಾಜ್ಯ ಸರ್ಕಾರದ ರಿಸೋರ್ಸಸ್‌ನಿಂದ ಆ ಬಗ್ಗೆ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಣ್ಣ ಸಣ್ಣ ಕೆಲವು ನೀರಾವರಿ ಯೋಜನೆಗನ್ನು ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಯೋಜನೆಗಳನ್ನು, ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡಿ ಆ ನೀರನ್ನ ಉಪಯೋಗ ಮಾಡಿಕೊಳ್ಳಬಹುದು. ಈ ಯೋಜನೆ ಗಳಿಗೆ ಬೇಕಾದ ಹಣದ ಪ್ರಶ್ನೆಯ ಬಗ್ಗೆ ಒಂದು ಮಾತನ್ನ ನಾನು ಹೇಳುತ್ತೇನೆ. ಸೋಷಿಯಲ್ ವೆಲ್ ಫೇರ್ ಡಿಪಾರ್ಟ್‌ಮೆಂಟಿನಿಂದಲಾಗಲೀ, ವಿದ್ಯಾ ಇಲಾಖೆಯಿಂದಲಾಗಲೀ ಅಥವಾ ಬೇರೆ ಇನ್ನಾವ ಇಲಾಖೆಯಿಂದಲಾಗಲೀ ಸ್ವಲ್ಪಮಟ್ಟಿಗೆ ಹಣವನ್ನು ಉಳಿತಾಯ ಮಾಡಿಕೊಂಡು ಈ ನೀರಾವರಿ ಯೋಜನೆಗಳಿಗೆ ಉಪಯೋಗ ಮಾಡಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಹೇಳುತ್ತಾರೆ ಅನೇಕ ಮಾನ್ಯ ಸದಸ್ಯರು ತಮ್ಮ ಹತ್ತಿರ ಬಂದು ನನ್ನ ಕ್ಷೇತ್ರದಲ್ಲಿ ರಸ್ತೆ ಆಗಬೇಕು, ನನ್ನ ಕ್ಷೇತ್ರದಲ್ಲಿ ಸೇತುವೆ ಆಗಬೇಕು ಹಾಗೆಂದು ಕೇಳುತ್ತಾರೆ ಎಂದು ಹೇಳಿದರು. ಆ ರೀತಿ ಕೇಳತಕ್ಕ Human tendency ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ನಾನು ಮಾತ್ರ ಈ ಸಭೆಯಲ್ಲಿ ಎಲ್ಲರ ಮುಂದೆಯೂ ಆಶ್ವಾಸನೆಯನ್ನ ಕೊಡುತ್ತೇನೆ. ಯಾವ ರಸ್ತೆಯ ಕೆಲಸಕ್ಕಾಗಲೀ ಅಥವಾ ಮತ್ತೊಂದಕ್ಕಾಗಲೀ ನಾನು ತಮ್ಮ ಹತ್ತಿರ ಬರುವುದಿಲ್ಲ.

ಇನ್ನು ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಕಾವೇರಿ ನದಿಯ ನೀರನ್ನು ಉಪಯೋಗ ಮಾಡತಕ್ಕ ಬಗ್ಗೆ ತಮಗೆ ಪೂರ್ಣವಾದ ಆಸಕ್ತಿ ಇದ್ದರೆ, ಕೆಲವು ಬೇರೆ ಇಲಾಖೆಗಳಿಗೆ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರತಕ್ಕ ಹಣವನ್ನು ಕಟ್ ಮಾಡಿ ಆ ಹಣವನ್ನು ಇದಕ್ಕೆ ಉಪಯೋಗಿಸಿ, ಆ ಇಲಾಖೆಗಳಲ್ಲಿ 5-10 ವರ್ಷ ಬರೀ ಸಂಬಳ ಕೊಟ್ಟರೂ ಚಿಂತೆ ಇಲ್ಲ. ಬೇರೆ ಇಲಾಖೆಗಳಿಗೆ ಖರ್ಚುಮಾಡತಕ್ಕ ಹಣವನ್ನು ಕಟ್ ಮಾಡಿ ಆ ಹಣವನ್ನು ಇರಿಗೇಷನ್ನಿಗೆ ಡೈವರ್ಟ್ ಮಾಡಿ ಈ ಕೆಲಸ ಗಳನ್ನ ಮಾಡಿ. ಯಾವುದೇ ಒಂದು ವರ್ಗಕ್ಕೆ ಯಾವುದೇ ಒಂದು ಜನಾಂಗಕ್ಕೆ ಯಾವುದೇ ಒಂದು ಭಾಗಕ್ಕೆ ಇದರಿಂದ ಅನುಕೂಲವಾಗುತ್ತದೆ ಎನ್ನುವ ವಾದವಲ್ಲ. ಇದು ದೇಶದ ಪ್ರಗತಿಯ ಪ್ರಶ್ನೆ. ಜನತೆಗೆ ಖಾಯಂ ಪರಿಹಾರ ದೊರೆಯಬೇಕಾಗಿದ್ದರೆ, ಜನತೆಯ ಆರ್ಥಿಕ ಪ್ರಗತಿ ಉತ್ತಮವಾಗ ಬೇಕಾದರೆ, ರೈತರಿಗೆ ಮತ್ತು ಜನತೆಗೆ ಅನುಕೂಲ ಆಗಬೇಕಾದರೆ ಪೂರ್ಣವಾಗಿ ಈ ನೀರಾವರಿಯ ಸೌಕರ್ಯವನ್ನು ರೈತರಿಗೆ ಒದಗಿಸಬೇಕು. ಈಗ ನಾನಾ ಇಲಾಖೆಗಳಿಗೆ ಕೊಟ್ಟಿರತಕ್ಕಂಥ ಹಣದಲ್ಲಿ ಎಷ್ಟು ಹಣವನ್ನು ಕಟ್ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಕಟ್ ಮಾಡಿ ಆ ನೀರಾವರಿ ಕಾಮ ಗಾರಿಗಳನ್ನ ಮಾಡುವ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಹಾಗಿಲ್ಲದೇ ಇದ್ದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಇವೆಲ್ಲಾ ಪ್ರಾಜೆಕ್ಟುಗಳನ್ನೂ ಸಮಾಧಾನಕರವಾದ ರೀತಿಯಲ್ಲಿ ನಡೆಸಬೇಕೆಂದು ಇಲ್ಲಿ ಹೇಳುತ್ತೇನೆ. ಇದನ್ನು ಒಬ್ಬ ಮೆಂಬರಿನ ತೃಪ್ತಿಗಾಗಿ ಮಾಡುವ ಅವಶ್ಯಕತೆ ಇಲ್ಲ. ಈ ಸಭೆಯ ಪ್ರತಿಯೊಬ್ಬ ಸದಸ್ಯರ ಹಾಗೂ ಶಾಸಕರ ಕರ್ತವ್ಯದಲ್ಲಿ ಇದೊಂದು ವೈಟಲ್ ಇಷ್ಯೂ ಈ ನೀರಾವರಿ ಸಮಸ್ಯೆ. ಇದನ್ನು ಉಪಯೋಗಿಸಿಕೊಳ್ಳುವಾಗ ನಾವು ಯಾವ ಟೀಕೆಯನ್ನೂ ಮಾಡುತ್ತಿಲ್ಲ. ಟೀಕೆಯನ್ನು ಯಾವಾಗ ಮಾಡುತ್ತೇವೆಂದರೆ, ಕೇವಲ ಒಂದು ಡಿವಿಜನ್ನಿಗೆ ಹೆಚ್ಚು ಹಣ ಕೊಟ್ಟು ಅಲ್ಲಿ ಸೇತುವೆಗಳು ಹಾಗೂ ಕಟ್ಟಡಗಳನ್ನು ಮಾಡಿದಾಗ ಬೇರೆ ಕಡೆಗಳಲ್ಲಿ ಏಕೆ ಮಾಡ ಲಾಗುತ್ತಿಲ್ಲ ಎಂದು, ಇದರಲ್ಲಿ ಬಡ್ಜೆಟ್ ಅಲೋಕೇಷನ್ನು ನೋಡಿದರೆ ಆಗ ನಾವು ಟೀಕೆ ಮಾಡಲೇ ಬೇಕಾಗುತ್ತದೆ. ಅಪ್ಪರ್ ಕೃಷ್ಣಾ ಬಿಜಾಪುರ ಗುಲ್ಬರ್ಗಾ ಹಾಗೂ ಇತರ ಪ್ರದೇಶಗಳಿಗೆ ಹೇಗೆ ಮುಖ್ಯವೋ ಅದರಂತೆ ಕಾವೇರಿ ಬೇಸಿನ್ ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಬೆಂಗಳೂರು, ಮೈಸೂರು ಮತ್ತು ಇತರ ಭಾಗಗಳಿಗೆ ಮುಖ್ಯ. ಇಷ್ಟೇ ಅಲ್ಲದೆ ಇದು ಎಲ್ಲ ಭಾಗದ ಪ್ರಶ್ನೆಯಾಗಿದೆ.

ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಮ್ಮತದಿಂದ ಸಹಾಯ ಮಾಡಲು ಸಿದ್ಧರಿದ್ದಾರೆ. ಈ ನೀರಾವರಿ ಸಮಸ್ಯೆ ಬಗ್ಗೆ ರಾಜ್ಯ ಸರಕಾರ ಪ್ರಯತ್ನ ಮಾಡತಕ್ಕದ್ದು ಬಹಳ ಅವಶ್ಯವಾಗಿದೆ ಎಂದು ಇಲ್ಲಿ ಒತ್ತಾಯ ಮಾಡಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇದರ ಜೊತೆಗೆ ಒಂದು ಸಲಹೆಯನ್ನು ಇಲ್ಲಿ ಹೇಳಬೇಕಾಗಿದೆ. ಮೈನರ್ ಇರಿಗೇಷನ್ನು ಯೋಜನೆಗಳಿಗಾಗಿ ನೀವು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೂ ಅದರಿಂದ ಅಷ್ಟು ಫಲ ಬರುತ್ತಿಲ್ಲ. ಮಳೆಯಾದರೆ ಮಾತ್ರ ಅದರಿಂದೇನಾದರೂ ನಾವು ನೀರಿಕ್ಷೆ ಮಾಡಬಹುದು. ಆದರೆ ಯಾವ ಯಾವ ಯೋಜನೆಗಳನ್ನು ಮಾಡಿದರೆ ಅದರಿಂದ ಕೂಡಲೇ ಫಲ ಬರುತ್ತದೆಯೋ ಅವುಗಳನ್ನು ಕಾರ್ಯಗತ ಮಾಡಿದರೆ ಆಹಾರದ ಸಮಸ್ಯೆಯೂ ಕಡಮೆಯಾಗುತ್ತದೆ. ಮೇಜರು ಹಾಗೂ ಮೈನರು ಇರಿಗೇಷನ್ನು ಕೆಲಸಗಳಿಂದ ಕಾವೇರಿ ಹಾಗೂ ಕೃಷ್ಣಾ ಬೇಸಿನ್‌ಗಳಲ್ಲಿ ಎಷ್ಟು ಪ್ರತಿಫಲ ದೊರೆಯಬಹುದು ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಬೇಕು ಮತ್ತು ಕಾವೇರಿ ನದಿಯ ನೀರಿನ ಪೂರ್ಣ ಉಪಯೋಗವನ್ನು ಪಡೆದುಕೊಳ್ಳಬೇಕು. ಇದನ್ನು ಪೂರ್ಣವಾಗಿ ಮಾಡಬೇಕಾದರೆ ರಾಜ್ಯಸರ್ಕಾರದವರಿಗೆ ಹಣ ಬೇಕು. ಮತ್ತು ಆಡಳಿತ ಸೂತ್ರ ಹಿಡಿದಿರುವ ಪ್ರತಿಯೊಬ್ಬ ಅಧಿಕಾರಿಗಳಿಗಾಗಲೀ ಅಥವಾ ಮಂತ್ರಿಗಳಾಗಲೀ ನಾನು ಈ ಮೊದಲೇ ಕೊಟ್ಟಿರತಕ್ಕ ಅಂಕೆ ಸಂಖ್ಯೆಗಳನ್ನು ನೋಡಿಕೊಂಡು ಕಾವೇರಿ ಒಪ್ಪಂದದ ಬಗ್ಗೆ ಹಿಂದೆ ಏನು ಅಗ್ರಿಮೆಂಟು ಆಗಿದೆಯೋ ಅದನ್ನು ಪುನಃ ರೀ ಕನ್‌ಸಿಡರ್ ಮಾಡಬೇಕು ಮತ್ತು ಇದಕ್ಕೆ ತಕ್ಕ ಲೀಗಲ್ ಒಪಿನಿಯನ್ ತೆಗೆದುಕೊಂಡು ಇದರ ಮೇಲೆ ನಮ್ಮ ರಾಜ್ಯಕ್ಕೆ ಹೇಗೆ ಅನ್ಯಾಯ ಮಾಡಬೇಕು ಮತ್ತು 1974 ರ ಒಳಗೆ ಈ ಅಗ್ರಿಮೆಂಟನ್ನು ಒಪ್ಪಬೇಕೇ ಇಲ್ಲವೇ ಎನ್ನುವುದನ್ನೂ ಪರಿಶೀಲನೆ ಮಾಡಬೇಕು. ಇದರಲ್ಲಿ ಯಾವ ಪಾರ್ಟಿಯ ಪ್ರಶ್ನೆಯೂ ಇಲ್ಲ. ಪ್ರತಿಯೊಬ್ಬರಿಗೂ ಇದರಲ್ಲಿ ಆಸಕ್ತಿ ಇದೆ ಮತ್ತು ನಾನು ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಏನು ಆಶ್ವಾಸನೆ ಕೊಟ್ಟಿದ್ದರು ಎನ್ನುವುದನ್ನೂ ಇಲ್ಲಿ ಉಲ್ಲೇಖಿಸಿದ್ದೇನೆ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ನಾನು ತಂದಿರುವ ಈ ನಿರ್ಣಯವನ್ನು ಒಮ್ಮತದಿಂದ ಒಪ್ಪಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—There are four names before me. As very little time is left out of the time allotted for the discussion of this Resolution, I request the members to co-operate with me and be brief.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸ್ವಾಮಿ, ಶ್ರೀಮಾನ್ ದೇವೇಗೌಡರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ನಾನು ಅನುಮೋದನೆ ಮಾಡುತ್ತಾ ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ಈ ನಿರ್ಣಯ ಸಭೆಯ ಮುಂದೆ ಬಂದಾಗ ನಮ್ಮ ಸದಸ್ಯರಲ್ಲಿ ಕೆಲವರು ನಿನ್ನೆ ಇಲ್ಲಿ ತಂದಿದ್ದ ಅಪ್ಪರ್ ಕೃಷ್ಣಾ ಯೋಜನೆಯನ್ನು ಕೇಂದ್ರ ಸರಕಾರದವರೇ ತೆಗೆದುಕೊಳ್ಳಬೇಕು ಎನ್ನತಕ್ಕ ನಿರ್ಣಯವನ್ನು ತೆಗೆದುಕೊಳ್ಳಕೂಡದು ಎಂದು ಅದನ್ನು ಸೈಡ್ ಟ್ರಾಕ್ ಮಾಡುವ ರೀತಿಯಲ್ಲಿ ಹೇಳುತ್ತಾರೆಂದು ಇತ್ತು. ಇದು ತಪ್ಪು ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ನಿರ್ಣಯ ಬಂದಿರತಕ್ಕದ್ದು ಕಾವೇರಿ ನೀರನ್ನುಪಯೋಗ ಮಾಡಬೇಕು ಅದರ ಬಗ್ಗೆ ವಿಶೇಷ ಪ್ರಯತ್ನವಾಗಿಲ್ಲ ಮತ್ತು ಸರಕಾರದ ನಿಲುವಿನಲ್ಲಿ ಇನ್ನೂ ಹೆಚ್ಚಿನ ಪ್ರಯತ್ನವಾಗಬೇಕಾದ್ದು ಇದೆ, ಇದನ್ನು ಸರಕಾರದ ಗಮನಕ್ಕೆ ತರತಕ್ಕದ್ದು ನಮ್ಮ ಆದ್ಯ ಕರ್ತವ್ಯ ಎಂದು ಒಂದು ದೃಷ್ಟಿಯಿಂದ ಈ ನಿರ್ಣಯವನ್ನು ಸಭೆಯ ಮುಂದೆ ತಂದಿದೆ ಎಂದು ನಾನು ಇದನ್ನು ಅನುಮೋದನೆ ಮಾಡುವುದು ಒಳ್ಳೆಯದು. ಕೃಷ್ಣ ನೀರಿನ ಬಳಕೆಯ ಬಗ್ಗೆ ಕೇಂದ್ರವನ್ನು ಒತ್ತಾಯ ಮಾಡುವುದು ಅದು ಒಂದು ಬೇರೆ ಪ್ರಶ್ನೆ. ಆ ಇಷ್ಯೂವನ್ನು ಸೈಡ್ ಟ್ರಾಕ್ ಮಾಡುವ ಉದ್ದೇಶ ಈ ನಿರ್ಣಯದಲ್ಲಿ ಇಲ್ಲ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ನಿನ್ನೆ ದಿನ ಇಲ್ಲಿ ಬಂದ ನಿರ್ಣಯವನ್ನು ಒಪ್ಪಿಕೊಂಡಿರುವಂತೆ ಕೃಷ್ಣಾ ನದಿ ನೀರಿನ ಬಳಕೆ ಬಗ್ಗೆ ಇನ್ನೂ ವಿಶೇಷ ಪ್ರಯತ್ನ ಮಾಡಬೇಕು ಮತ್ತು ಉಳಿದ ಪ್ರಾಜೆಕ್ಟುಗಳ ಬಗ್ಗೆ ಕೂಡ ಇರುವ ನೀರನ್ನೂ ಉಪಯೋಗ ಮಾಡಿಕೊಳ್ಳಲು ಸರ್ವ ಪ್ರಯತ್ನ ಮಾಡಬೇಕು ಎಂದು ನಾವು ಇಲ್ಲಿ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ ಮತ್ತು ಸರಕಾರವೂ ಕೂಡ ಪ್ರಯತ್ನ ಮಾಡುತ್ತೇವೆಂದು ಒಂದು ನಿರ್ಧಾರವನ್ನೂ ತೆಗೆದುಕೊಂಡಿದ್ದಾರೆ. ಇದಕ್ಕಾಗಿ ಸರಕಾರವನ್ನು ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಕಾವೇರಿ ನದಿಯ ನಮ್ಮ ಪಾಲಿನ ನೀರನ್ನು ಕೂಡ ಹಾಗೇ ಉಪಯೋಗ ಮಾಡಿಕೊಳ್ಳಲು ಸರ್ವ ಪ್ರಯತ್ನ ಮಾಡಲು ಪರಿಶೀಲನೆ ಮಾಡಬೇಕಾದುದು ಅವಶ್ಯಕವಾಗಿದೆ. ಈ ಕಾವೇರಿ ನೀರಿನ ಬಗ್ಗೆ ನಮ್ಮ ಸರಕಾರಕ್ಕೂ ಹಾಗೂ ಮದರಾಸು ಸರಕಾರಕ್ಕೂ 1924 ರಲ್ಲಿ ಒಂದು ಒಪ್ಪಂದವಾಗಿದೆ. ಆ ಒಪ್ಪಂದದ ಬಗ್ಗೆ ಎರಡು ಸರಕಾರಗಳ ನಿಲುವು ಹೇಗಿದೆ ಎನ್ನುವುದನ್ನು ಪರಿಶೀಲನೆ ಮಾಡಬೇಕಾದದು

† Indicates that the remarks or speeches have not been revised by the member concerned

(ಶ್ರೀ ಎಂ. ಸಿ. ಬಸಪ್ಪ)

ಅವಶ್ಯಕ ಮತ್ತು ಮದರಾಸು ಸರಕಾರದವರು ಅವರ ಆಗಿನ ನಿಲುವನ್ನು ಮರೆತು ಒಪ್ಪಂದಕ್ಕೆ ಮೀರುವಂತೆ ಕೆಲಸಗಳನ್ನು ಮಾಡುತ್ತಿದ್ದಾರೆಂದು ಶ್ರೀ ದೇವೇಗೌಡರು ಹೇಳಿದರು. ಶ್ರೀ ದೇವೇಗೌಡರು ಇಲ್ಲಿ ಮಾತನಾಡುತ್ತಾ ಮದರಾಸು ಸರಕಾರದವರು ಈಗಾಗಲೇ ನಮ್ಮಲ್ಲಿ ಆಗಿರುವ ಒಪ್ಪಂದವನ್ನು ಮೀರಿ ಸುಮಾರು 18 ಲಕ್ಷ ಎಕರೆಗಳಷ್ಟು ಭೂಮಿಯನ್ನು ನೀರಾವರಿಗೆ ತಂದಿದ್ದಾರೆ ಮತ್ತು ಅವರು ಅಗ್ರಿಮೆಂಟನ್ನು ಜ್ಞಾಪಕದಲ್ಲೇ ಇಟ್ಟುಕೊಂಡಿಲ್ಲ ಎಂದು ತೋರುತ್ತದೆ, ಆದರೆ ನಮ್ಮ ಸರಕಾರದ ಮುಂದೆ ಈ ಅಗ್ರಿಮೆಂಟು ಎನ್ನುವುದು ಒಂದು ದೊಡ್ಡ ಪೆಡಂಭೂತವಾಗಿ ನಿಂತಿದೆ ಎಂದು ಕಾಣುತ್ತೆ; ನಮ್ಮಲ್ಲಿರುವ ಅಧಿಕಾರಿಗಳೂ ಕೂಡ ಯಾವ ಒಂದು ಪಿಕ್ ಅಫ್‌ನ್ನು ತೆಗೆದುಕೊಳ್ಳಬೇಕೆಂದರೂ ಇದು ಷೆಡ್ಯೂಲ್ಡ್‌ರವರು ಇದಕ್ಕೆ ಅಗ್ರಿಮೆಂಟು ಇದೆ, ಇದನ್ನು ಮೀರುವುದಕ್ಕೆ ಸಾಧ್ಯವಿಲ್ಲ ಎನ್ನುವ ಒಂದು ಭಯವನ್ನು ವ್ಯಕ್ತಪಡಿಸುತ್ತಾರೆ; ಸರಕಾರಕ್ಕೂ ಕೂಡ ಅವರು ಇದೇ ಅಗ್ರಿಮೆಂಟನ್ನು ತೋರಿಸಿ ಯಾವ ಕೆಲಸಗಳನ್ನೂ ಮಾಡಲು ಬಿಡುತ್ತಿಲ್ಲ, ಈ ಒಂದು ಅನುಮಾನ ನಮ್ಮ ಮಂತ್ರಿಮಂಡಲಕ್ಕೆ ಕೂಡ ಬಂದು ಈ ಅಗ್ರಿಮೆಂಟು ಒಂದು ತೊಡಕಾಗಿದೆ ಎಂದು ಹೇಳಿದರು. ಸಾಮಾನ್ಯವಾಗಿ ನಮಗಿರತಕ್ಕ ರಿಪೇರಿಯನ್ ರೈಟ್ಸ್ ಹಾಗೂ ಇದರ ವ್ಯವಸ್ಥೆಯಿಂದಾಗಿ ನಮ್ಮಲ್ಲಿರತಕ್ಕ ಕಾವೇರಿ ನದಿಯ ಟ್ರಿಬ್ಯೂಟರೀಸ್‌ಗಳ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವ ಅಂಕೆ ಸಂಖ್ಯೆಗಳನ್ನು ಶ್ರೀಮಾನ್ ದೇವೇ ಗೌಡರು ಮಾತನಾಡುತ್ತಾ ತಿಳಿಸಿದರು. ನಾನೂ ಕೂಡ ಹಿಂದೆ ಬಡ್ಜೆಟ್ಟಿನ ಮೇಲೆ ಭಾಷಣಗಳನ್ನು ಮಾಡುವಾಗ ಕೆಲವು ಅಂಕಿ ಸಂಖ್ಯೆಗಳನ್ನು ಇದರ ಬಗ್ಗೆ ಹೇಳಿದ್ದೇನೆ. ಈಗ ಪುನಃ ಅದೇ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದರಂತೆ ನಾವು ಇಲ್ಲಿ ನೋಡುವಾಗ ಕೆ. ಆರ್. ಸಾಗರ ಅಚ್ಚುಕಟ್ಟಿನಲ್ಲಿ ಸುಮಾರು 1.25 ಸಾವಿರ ಎಕರೆಗಳಷ್ಟು ಡೆವಲಪ್‌ಮೆಂಟು ಮಾಡಬೇಕಾಗಿತ್ತು. ಆದರೆ ಈಗ ಸುಮಾರು 1.10 ಸಾವಿರ ಎಕರೆಗಳಷ್ಟು ಡೆವಲಪ್‌ಮೆಂಟು ಮಾಡಿದ್ದಾರೆ. ಶೇಕಡಾ 60 ರಷ್ಟು ನಮ್ಮ ದೇಶದಲ್ಲಿ ಮಾಡಬೇಕೆಂದು ಇದೆ. ಇದನ್ನು ಈಗ ನಾವು ಮಾಡುತ್ತಿದ್ದೇವೆ. ಅಗ್ರಿಮೆಂಟಿನೊಳಗೆ ಇರುವುದಕ್ಕಿಂತ ಮೀರಿ ನಾವು ಮಾಡುವುದಕ್ಕೆ ಬರುವುದಿಲ್ಲ, ಇದರಿಂದ ನಮ್ಮ ಶಕ್ತಿ ಕುಂಠಿತವಾಗಿದೆ. ಈ ಅಗ್ರಿಮೆಂಟನ್ನು ಪುನಃ ನಾವು ಪರಿಶೀಲನೆ ಮಾಡುವುದರಿಂದ ನಮ್ಮ ಸಂಸ್ಥಾನದ ಕೆಲಸಗಳು ರೂಪಿತವಾಗಬೇಕಾಗಿದೆ. ಇದೊಂದೇ ಪ್ರಶ್ನೆ ಇದರಲ್ಲಿಲ್ಲ. ಕಾವೇರಿ ನದಿಗೆ ಕೆಲವು ಉಪ ನದಿಗಳು ಇರುತ್ತವೆ; ಕಬಿನಿ, ಹೇಮಾವತಿ ಹಾಗೂ ಇನ್ನಿತರ ನದಿಗಳೂ ಬರುತ್ತದೆ ಮತ್ತು ಈಗ ಇರುವ ಅಗ್ರಿಮೆಂಟಿನಂತೆ ಕಟ್ಟೆಯ ಮೇಲೆ ಬರುವ ನೀರಿನಲ್ಲಿ ಸುಮಾರು ಆರೂವರೆ ಅಡಿಯಷ್ಟು ನೀರನ್ನು ಪ್ರವಾಹದ ಕಾಲದಲ್ಲಿ ಬರುವ ನೀರನ್ನು ಉಪಯೋಗಮಾಡಿಕೊಳ್ಳುವ ಅವಕಾಶ ಇದೆ, ಮತ್ತು ಕಾವೇರಿ ನದಿಯ ಟ್ರಿಬ್ಯೂಟರಿಗಳಿಂದ ಬರುವ ನೀರನ್ನೂ ನಮ್ಮ ಸಂಸ್ಥಾನದವರು ಉಪಯೋಗಮಾಡಿಕೊಳ್ಳುವ ಅವಕಾಶವೂ ಇದೆ. ಮತ್ತು ಪ್ರವಾಹ ಕಾಲದಲ್ಲಿ ನೀರು ಬರಲಿ ಬರದಿರಲಿ ನಾವು ಕೆ. ಆರ್. ಎಸ್. ನಿಂದ ಸುಮಾರು 25 ಸಾವಿರ ಕ್ಯೂಸೆಕ್ಸ್‌ನಷ್ಟು ನೀರನ್ನು ಬಿಡಲೇಬೇಕು ಎಂದು ಈ ಅಗ್ರಿಮೆಂಟಿನಲ್ಲಿದೆ. ನಿಜವಾಗಿಯೂ ಈ ಅಗ್ರಿಮೆಂಟಿನಂತೆ ನಮ್ಮ ಸಂಸ್ಥಾನಕ್ಕೆ ಯಾವ ರೀತಿಯಾದ ಉಪಯೋಗವನ್ನೂ ಮಾಡಲು ಆಗಲಿಲ್ಲ. ಇದಕ್ಕೆ ಏನು ಕಾರಣ ಎಂದರೆ, ಆಗಿನ ಕಾಲದಲ್ಲಿದ್ದ ರಾಜರುಗಳು ದೇಶದ ದೃಷ್ಟಿಯಿಂದ ಒಪ್ಪಿಲ್ಲದೇ ಇದ್ದರೂ ಯಾರದೋ ಒತ್ತಾಯದಿಂದ ಒಪ್ಪಿಕೊಂಡು ಬಂದಿರಬಹುದು. ದೇಶದ ಹಿತದೃಷ್ಟಿಯಿಂದ 1924ರಲ್ಲಿ ಈ ಅಗ್ರಿಮೆಂಟು ಆಗಿದ್ದರೂ ಆಗಿನಿಂದ ಇಲ್ಲಿಯವರೆಗೆ ಸರಿಯಾಗಿ ಕಾವೇರಿ ನದಿಯ ನೀರನ್ನುಪಯೋಗಿಸಿಕೊಳ್ಳಲು ಆಗಲಿಲ್ಲ. ಮತ್ತು ಯಾವುದೋ ಕಾಲದಲ್ಲಿ ಆದ ತೀರ್ಮಾನದಂತೆ ಇದನ್ನು ಮಾಡುವುದೂ ಸೂಕ್ತವಲ್ಲ ಎಂದು ಬಹಳ ವ್ಯಥೆಯಿಂದ ನಾನು ಸರಕಾರಕ್ಕೆ ಹೇಳುತ್ತೇನೆ. ಆಗ ಆಗಿರುವ ಈ ಅಗ್ರಿಮೆಂಟಿನಲ್ಲಿ ಅನೇಕ ಲೋಪದೋಷಗಳೂ ಇವೆ. ಇದನ್ನು ಪರಿಶೀಲಿಸಿ ಸರಿಮಾಡತಕ್ಕದ್ದು ಅವಶ್ಯಕವಾಗಿದೆ. ನಮಗೆ ಇನ್ನೂ ಹೆಚ್ಚು ನೀರು ಬರತಕ್ಕ ರೀತಿಯಲ್ಲಿ ಇದನ್ನು ಪುನಃ ವಿಮರ್ಶೆ ಮಾಡಬೇಕಾಗಿದೆ ಮತ್ತು ಆ ನೀರನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಸಲಹೆಯನ್ನೂ ಕೊಟ್ಟಿದ್ದಾರೆ. ಮತ್ತು ಕೇಂದ್ರ ಸರಕಾರದವರೂ ಈ ಸಲಹೆಯನ್ನು ಪರಿಶೀಲನೆ ಮಾಡಲು ಅನುಕೂಲವಾಗುವಂತೆ ಒಂದು ತಜ್ಞರ ಸಮಿತಿಯನ್ನೂ ಎಂದರೆ ಒಂದು ಟೆಕ್ನಿಕಲ್ ಕಮಿಟಿಯನ್ನು ಮಾಡತಕ್ಕದ್ದು ಅಗತ್ಯ ಇದೆ. ಕಾವೇರಿ ಬೇಸಿನ್‌ನಲ್ಲಿ ನಮಗೆ ಬರಬೇಕಾದ ನೀರಿನ ಉಪಯೋಗ ಎಷ್ಟು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಒಂದು ಹೈಪವರ್ ಕಮಿಟಿಯನ್ನು ನೇಮಕ ಮಾಡುವುದು ಸೂಕ್ತವಾಗಿದೆ. ಈ ಸಂಬಂಧದಲ್ಲಿ ಕೇಂದ್ರ ಸರ್ಕಾರ ಮುಂದೆ ಬರುವುದು ಬಹಳ ಅಗತ್ಯ ಎಂದು ಹೇಳಿ ಮನವಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಬಳಕೆ ಪ್ರಶ್ನೆಗೆ ಬಂದರೆ ಎರಡು ಮೂರು ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೆ. ನನಗೆ ಬಹಳ ಹತ್ತಿರದಲ್ಲಿರುವ ಚಾಮರಾಜನಗರದಲ್ಲಿ, ಕಬಿನಿ, ಸುವರ್ಣಾವತಿ ಮತ್ತು

ಚಿಕ್ಕಹೊಳೆ ಇವೆಲ್ಲಾ ಕಾವೇರಿ ನದಿಯ ಟ್ರಿಬ್ಯೂಟರಿಗಳು. ಸುವರ್ಣಾವತಿ ವಿಷಯ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಳೆದ ವರ್ಷ ಒಂದು ಲಕ್ಷ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇತ್ತು, ಈ ವರ್ಷ 50 ಸಾವಿರ ರೂಪಾಯಿ ಇಟ್ಟಿದ್ದೀರಿ, ಮುಂದಿನ ವರ್ಷ 25 ಸಾವಿರ ರೂಪಾಯಿ ಮಾಡುತ್ತೀರೋ ಏನೋ ಗೊತ್ತಿಲ್ಲ. ಅದೇ ರೀತಿ ಕಬಿನಿ ಪ್ರಾಜೆಕ್ಟ್‌ಗೆ 1960-61ರಲ್ಲಿ 17 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. 1961-62ರಲ್ಲಿ 20 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ, 1962-63ರಲ್ಲಿ 31 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. 1963–64ರಲ್ಲಿ 36 ಲಕ್ಷ ರೂಪಾಯಿ 1964-65ರಲ್ಲಿ 30 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ, ಇದಕ್ಕೆ ಮೂವತ್ತು ಕೋಟಿ ರೂಪಾಯಿ ಬೇಕು, ಹೀಗೆ ಕೋಟ್ಯಾಂತರ ರೂಪಾಯಿ ಬೇಕಾಗತಕ್ಕ ಯೋಜನೆಗಳಿಗೆ ಲಕ್ಷ, ಸಾವಿರ, ಕೊನೆಗೆ ನೂರು ರೂಪಾಯಿಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರೆ ಇದರ ಸಂಕೇತ ಏನು ? ದೇಶಕ್ಕೆ ಈ ರೀತಿ ಮಾಡುತ್ತಾ ಇದ್ದೇವೆ ಎಂದು ತೋರಿಸಿದರೆ ಆಯಿತು, ಕಾರ್ಯತಃ ಕೈಕೊಳ್ಳಬೇಕಾಗಿಲ್ಲ ಎಂಬ ಧೋರಣೆಯನ್ನು ತಳೆದಿದ್ದೀರಿ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮೊನ್ನೆ ತಾನೆ ಕೇಂದ್ರದ ಪ್ಲಾನಿಂಗ್ ಮಂತ್ರಿಗಳು ಶಾಸಕರನ್ನು ಉದ್ದೇಶಿಸಿ ಭಾಷಣ ಮಾಡಿದಾಗ ಹೇಳಿದರು ಇವತ್ತಿನ ದಿವಸ ಈ ಇರಿಗೇಷನ್‌ನಲ್ಲಿ ಯಾವ ಒಂದು ನೀತಿನಿಯಮವನ್ನು ಅನುಸರಿಸುತ್ತಾ ಇದ್ದೇವೆ ಆದರಲ್ಲಿರತಕ್ಕ ಲೋಪವನ್ನೂ ಕೂಡ ಎತ್ತಿ ಹಿಡಿದರು. ಎಲ್ಲಾ ಪ್ರಾಜೆಕ್ಟ್‌ಗಳನ್ನೂ ತೆಗೆದುಕೊಳ್ಳಬೇಕೆಂದು ನಮ್ಮ ಕ್ಲೈಮ್ಸ್ ಇವೆ. ಕೃಷ್ಣಾನದಿ ನೀರಿನಲ್ಲಿ ನಮಗೆ ಅಲಾಟ್ ಆಗಿರತಕ್ಕ 600 ಟಿ. ಎಂ. ಸಿ. ಎಫ್. ಟಿ. ನೀರಿನಲ್ಲಿ ಒಂದು ಟಿ. ಎಂ. ಸಿ. ಎಫ್. ಟಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ 50 ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಅಂದಾಜಾಗಿದೆ. 600 ಟಿ. ಎಂ. ಸಿ. ಎಫ್. ಟಿ. ಉಪಯೋಗ ಮಾಡಬೇಕಾದರೆ 30 ಕೋಟಿ ರೂಪಾಯಿ ಬೇಕು. ಕಾವೇರಿ ಬೇಸಿನ್‌ನಲ್ಲಿ 270 ಟಿ. ಎಂ. ಸಿ. ಎಫ್. ಟಿ. ಉಪಯೋಗ ಮಾಡಬೇಕಾದರೆ 135 ಕೋಟಿ ರೂಪಾಯಿ ಬೇಕು, ಈ ಈ ರೀತಿ ಒಟ್ಟು 500 ಕೋಟಿ ರೂಪಾಯಿಗಳ ಯೋಜನೆಯನ್ನು ಎಷ್ಟು ವರ್ಷದಲ್ಲಿ ಮಾಡಿಸುವುದಕ್ಕೆ ನಮಗೆ ಶಕ್ತಿ ಇದೆ ಎನ್ನತಕ್ಕ ಬಗ್ಗೆ ನಮಗೆ ಸಂಶಯ ಬರುತ್ತದೆ. ಅವರು ಸಲಹೆಯನ್ನೂ ಕೂಡ ಕೊಟ್ಟರು, ನಿರ್ದಿಷ್ಟವಾದ ಒಂದು ನೀತಿಯನ್ನು ಹಾಕಿಕೊಂಡು ನಿಮ್ಮ ಪ್ರಾಜೆಕ್ಟ್‌ಗಳನ್ನು ಒಂದು ಅಥವಾ ಎರಡು ಯೋಜನೆಗಳೊಳಗೆ ಮುಗಿಸತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಪ್ರಾಜೆಕ್ಟ್ ಮುಗಿದ ಮೇಲೆ ಅದರಿಂದ ಬರತಕ್ಕ ಉತ್ಪನ್ನದಿಂದ ಇತರ ಪ್ರಾಜೆಕ್ಟ್‌ಗಳಿಗೆ ಹಾಕತಕ್ಕ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಆ ರೀತಿ ಮಾಡುವಾಗ ಅನೇಕ ತರಹದ ಇನ್‌ಫ್ಲೂಯನ್ಸ್ ಬರುತ್ತವೆ ಅಂತಹ ಸಂದರ್ಭದಲ್ಲಿ ಅಲ್ಲಿನ ಅಗತ್ಯತೆ, ಮತ್ತು ಸನ್ನಿವೇಶ ಇದನ್ನೆಲ್ಲಾ ಯೋಚನೆ ಮಾಡಿ ನಿರ್ದಿಷ್ಟವಾದ ಒಂದು ನಿಲುವನ್ನು ತೆಗೆದುಕೊಳ್ಳಬೇಕು. ಆ ರೀತಿ ನಿಲುವನ್ನು ತೆಗೆದುಕೊಂಡಾಗ ಮಾತ್ರ ಇದಕ್ಕೆ ಬೆಲೆ ಬರುತ್ತದೆ, ಗುರಿಯನ್ನು ಸಾಧನೆ ಮಾಡುವುದಕ್ಕೆ ಆಗುತ್ತದೆ ಎಂದು ಘಂಟಾಘೋಷವಾಗಿ ಹೇಳಿದ್ದಾರೆ. ಸರ್ಕಾರದವರು ಇದನ್ನು ಆಲೋಚನೆ ಮಾಡಬೇಕು. 4ನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಪ್ರಾಮುಖ್ಯತೆ ಎಷ್ಟಿದೆ ಎಂಬುದನ್ನು ನೋಡುವುದಾದರೆ, ಇರಿಗೇಷನ್ ಅಂಡ್ ಪವರ್‌ಗೆ 40.70 ಇಯರ್ ಮಾರ್ಕ್ ಮಾಡಿದ್ದಾರೆ ಮುಂದೆ ಅದರ ಬ್ರೇಕ್ ಅಪ್ ಕೂಡ ಕೊಟ್ಟಿದ್ದಾರೆ ಇರಿಗೇಷನ್‌ಗೆ 16 ಪರ್ಸೆಂಟ್, ಪವರ್‌ಗೆ 24.70 ಪರ್ಸೆಂಟ್. ಇವತ್ತು ನಾವು ಶರಾವತಿ ಪವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೇ ಪರದೇಶಗಳವರಿಗೆ ಮಾರತಕ್ಕ ಸಂದರ್ಭದಲ್ಲಿ ಪವರ್‌ಗೆ 24 ಪರ್ಸೆಂಟ್ ಖರ್ಚು ಮಾಡಿ, ಮೇಜರ್ ಇರಿಗೇಷನ್‌ಗೆ 16 ಪರ್ಸೆಂಟ್ ಖರ್ಚು ಮಾಡುತ್ತೇವೆ ಎಂದರೆ, we are blind to the facts ಎಂದು ಹೇಳಬೇಕಾಗುತ್ತದೆ. ಕಣ್ಣು ಮುಚ್ಚಿಕೊಂಡು ಕೆಲಸ ಮಾಡುತ್ತೇವೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ನಾನು ಸರ್ಕಾರದವರಲ್ಲಿ ವಿನಂತಿ ಮಾಡುವುದೇನೆಂದರೆ, let us know the facts. ಯಾವುದಾದರೂ ಒಂದು ತೀರ್ಮಾನ ಮಾಡಿ, ಪವರ್‌ಗೆ ಹೆಚ್ಚು ಆದ್ಯತೆ ಕೊಟ್ಟು ಪವರ್‌ನ್ನು ವಿಶೇಷವಾಗಿ ಉತ್ಪಾದನೆ ಮಾಡಿ ಅದನ್ನು ಮಾರಾಟ ಮಾಡುತ್ತೇವೆ ಎನ್ನುವುದಾದರೆ ಅದಕ್ಕೆ ಆದ್ಯತೆ ಕೊಡಿ, ಇಲ್ಲದೇ ಹೋದರೆ ನೀರಾವರಿ ಬಹಳ ಮುಖ್ಯ ಎಂದು ಪರಿಗಣಿಸುವುದಾದರೆ ಮೇಜರ್ ಇರಿಗೇಷನ್‌ಗೆ ಪ್ರಾಮುಖ್ಯತೆ ಕೊಡುವುದಾದರೆ ಅದಕ್ಕೆ ಆದ್ಯತೆ ಕೊಡಿ. ವಿಷಯಗಳನ್ನು ತಿಳಿದುಕೊಂಡೂ ಕೂಡ ಸರಿಯಾದ ಒಂದು ನೀತಿನಿಯಮವನ್ನು ಪಾಲಿಸುತ್ತಾ ಇಲ್ಲ ಎಂದರೆ ಇದರ ಅರ್ಥವೇನು ? ಮೈಸೂರು ಸಂಸ್ಥಾನದ ಪರ್‌ಕ್ಯಾಪಿಟಾ ಇವತ್ತು ಕೆಳಗಡೆ ಒಂದು ಅಥವಾ ಎರಡನೆ ರ್‍ಯಾಂಕ್‌ನಲ್ಲಿ ಇದೆ, ನಾವಿನ್ನೂ ಅಲ್ಲಿಯೇ ಉಳಿಯಬೇಕೇ ಎಂದು ಪ್ರಶ್ನೆ ಮಾಡುತ್ತೇನೆ ? ಇರಿಗೇಷನ್ ಬಗ್ಗೆ 30-40ರಷ್ಟು ಹಣ ಖರ್ಚು ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡ ಪಕ್ಷದಲ್ಲಿ ಇನ್ನು 15 ವರ್ಷದಲ್ಲಿ 600 ಟಿ.ಎಂ.ಸಿ.ಎಫ್.ಟಿ. ಕೃಷ್ಣಾದಲ್ಲಿ 270 ಟಿ.ಎಂ.ಸಿ.ಎಫ್.ಟಿ. ಕಾವೇರಿಯಲ್ಲಿ ಸಿಕ್ಕತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾದೀತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಿರುವುದು ಶೇಕಡ 85 ಪರ್ಸೆಂಟು, ಎಷ್ಟು ಹಣವನ್ನು ತೆಗೆದಿಡಲಾಗಿತ್ತೋ ಅದನ್ನು

(ಶ್ರೀ ಎಂ. ಸಿ. ಬಸಪ್ಪ)

ಖರ್ಚು ಮಾಡುವುದಕ್ಕೆ ಆಗಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ 75 ಭಾಗ ಎಂದರೆ 45 ಕೋಟಿ ರೂಪಾಯಿ ಇಟ್ಟಿದ್ದಿರಿ ಅದರಲ್ಲಿ 30 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ, ಅದರ ಅರ್ಥವಾದರೂ ಏನು ? ಇನ್ನು 10 ಕೋಟಿ ರೂಪಾಯಿಗಳನ್ನು ಏಕೆ ಖರ್ಚುಮಾಡಲಿಲ್ಲ ? ದುಡ್ಡಿಲ್ಲ ಎನ್ನತಕ್ಕ ಪ್ರಶ್ನೆ ಎಲ್ಲರಿಗೂ ಗೊತ್ತಿದೆ. ಇದರ ಬಾಬುಗಳಲ್ಲಿ ಖರ್ಚು ಮಾಡಿರುವಷ್ಟು ಹಣ ಇದರಲ್ಲಿ ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು ? ರಸ್ತೆಗಳನ್ನು ಮಾಡಿದ್ದೇವೆ. ವಿಧಾನ ಸೌಧವನ್ನು ಕಟ್ಟಿದ್ದೇವೆ, ಅದೇ ರೀತಿ ಇದರ ಪಕ್ಕದಲ್ಲಿ ಇನ್ನೊಂದು ವಿಧಾನ ಸೌಧ ಕಟ್ಟಿದ್ದೇವೆ. ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಬಹಳ ಮುಖ್ಯವಾದಂಥ ಮೇಜರ್ ಇರಿಗೇಷನ್‌ನಲ್ಲಿ ಶೇಕಡ 75ರಷ್ಟು ಖರ್ಚು ಮಾಡಿದ್ದೇವೆ ಇನ್ನು 25ರಷ್ಟು ಖರ್ಚು ಮಾಡಲಿಲ್ಲ ಎಂದರೆ ಅದಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ ಎಂಬುದು ತಾನೇ ತಾನಾಗಿ ಗೊತ್ತಾಗುತ್ತದೆ.

ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಅದನ್ನು ನೀರಾವರಿಗೆ ಮಾತ್ರ ಖರ್ಚು ಮಾಡಿದರೆ ನಮ್ಮ ಉದ್ದೇಶ ಸಾಧನೆಯಾಗುತ್ತದೆಯೇ ಹೊರತು ಪವರ್ ಮತ್ತು ಇರಿಗೇಷನ್ ಎರಡಕ್ಕೂ ಕೂಡ ಪ್ರಾಮುಖ್ಯತೆಯನ್ನು ಕೊಟ್ಟರೆ ಖಂಡಿತವಾಗಿಯೂ ಏನೇನೂ ಕೂಡ ಪ್ರೋಗ್ರೆಸ್ ಮಾಡಿದ ಹಾಗೆ ಆಗುವುದಿಲ್ಲ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಭಾಗವನ್ನು ಭಾರಿ ನೀರಾವರಿ ಕಾಮಗಾರಿಗಳಿಗೆ ಉಪಯೋಗ ಮಾಡಿ ಕಾವೇರಿ ಬೇಸಿನ್‌ನಲ್ಲಿರತಕ್ಕ ಎಲ್ಲಾ ಯೋಜನೆಗಳನ್ನೂ ತೆಗೆದುಕೊಂಡು ತ್ವರಿತ ವಾಗಿ ಪೂರೈಸಿ ಅದರಿಂದ ಬರತಕ್ಕ ಉತ್ಪನ್ನವನ್ನು ಇತರ ಯೋಜನೆಗಳಿಗೆ ವಿನಿಯೋಗ ಮಾಡ ಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿ ಇವತ್ತು 8. 5 ಪರ್ಸೆಂಟ್ ಇರುವುದನ್ನು 30 ಪರ್ಸೆಂಟ್‌ಗೆ ಏರಿಸುವುದಕ್ಕೆ ಒಂದು ಖಚಿತವಾದ ನಿಲುವನ್ನು ತೆಗೆದುಕೊಳ್ಳಬೇಕು. ಕಾವೇರಿ ನೀರಿನ ಬಳಕೆ ಬಗ್ಗೆ ತಜ್ಞರ ಕಮಿಟಿ ಮಾಡಿ ಅವರಿಂದ ಒಂದು ವರದಿಯನ್ನು ತರಿಸಿಕೊಂಡು ಕೇಂದ್ರಸರ್ಕಾರದವರೊಡನೆ ಪರ್ಯಾಲೋಚನೆ ಮಾಡಬೇಕೆಂದು ಎಂದು ಹೇಳಿ ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ.

ಕಾವೇರಿ ಕನ್‌ಸ್ಟ್ರಕ್ಷನ್ ಸರ್ಕಲ್ ಅಂತ ಹೇಳಿ ಒಂದು ಸರ್ಕಲ್‌ನ್ನು ನಿರ್ಮಾಣ ಮಾಡಬೇಕೆಂದು ಬಹಳ ದಿವಸದಿಂದ ಮಾನ್ಯ ಮಂತ್ರಿಗಳಲ್ಲಿ ಹೇಳುತ್ತಾ ಇದ್ದೇವೆ. ಅಂತಹ ಒಂದು ಸರ್ಕಲ್ ಮಾಡಿ ಅವರಿಗೆ ಹಣ ಮತ್ತು ಸಿಬ್ಬಂದಿ ಕೊಟ್ಟು ಯೋಜನೆ ಕಾರ್ಯವನ್ನು ಮಾಡಬೇಕೆಂದು ಸರ್ಕಾರದ ಮುಂದೆ ಅನೇಕ ದಿವಸದಿಂದ ಒಂದು ಸ್ಕೀಂ ಇದ್ದರೂ ಕೂಡ ಇವತ್ತಿನವರೆಗೂ ಅದು ಜಾರಿಗೆ ಬಂದಿಲ್ಲ. ಆದ್ದರಿಂದ ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಅದಷ್ಟು ಬೇಗ ನೀರಿನ ಬಳಕೆ ಆಗಿ ಅದರಿಂದ ನಮ್ಮ ಸಂಸ್ಥಾನಕ್ಕೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಇವತ್ತಿನ ದಿವಸ ಈ ಸಭೆಯ ಮುಂದೆ ಇರತಕ್ಕ ನಿರ್ಣಯವನ್ನು ನಾನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri K. S. SURYANARAYANA RAO** (Mysore City).—Mr. Speaker, Sir, it is really heartening that we have been afforded an opportunity to place our views on the Cauvery Basin. Yesterday, we were pained to learn that we might not get time. Therefore, whatever attempt we made yesterday not to get these things to be clubbed along with Krishna Water was only to see that the importance of Cauvery is not lost. Therefore, on this occasion I would like to mention it so that the Members of this House did not mistake that we are not particular about Krishna Waters. But, we should not blind ourselves to the facts. That is why, we want to draw a line of distinction. Now that we have asked the Central Government to take over the Krishna Waters, we will be glad if they take it over. I hope the Minister brings sufficient pressure on them to take it over. But the facts are facts that the State Government has no pull or power to influence the Central Government to take up that project.

11-00 A.M.

Therefore this should be another additional burden on the State resources. Therefore, if they mean business and if they think they can

do the job, the allocations made in the State Plan and the other resources of Krishna should not be utilized for Krishna, but it should be reserved or the Central scheme and whatever amount is otherwise available should be fully utilized on the Cauvery basin. The importance of Cauvery basin is already stressed by my friends who have spoken before me. From the way things are going on, I am afraid that even for 1,000 years the Cauvery basin will not improve. For example, I will tell you how things are done. Take for instance the Hemavathy project. For the Hemavathy project the expenditure is of the order of Rs. 13 and odd crores, but what is our provision ? It is only Rs. 1 lakh. Therefore it would take 1,300 years. We are in a hurry to see that it is completed in 8 years, but at this rate how can they complete it ? It is not possible even if we use Rs. 5 crores and odd that have been allotted for the entire irrigation projects this year. Still you have to make some positive contribution in this direction and commit the waters of the Cauvery basin so that when we sit across the table in 1974 we will have fully committed the water due to our share. Otherwise we will not have done anything but some politics. I am sorry I have to use this word. Take for example the Harangi and the Kambadakada. Neither do we make use of the scheduled rivers nor do we take the waters of the non-scheduled rivers. Even under the agreement of 1924 we are entitled to use a certain quantity of water, 48 TMCft. from scheduled rivers and 100 TMCft. from non-scheduled rivers, but we are not able to make use of it. Therefore I would suggest that as in Andhra more emphasis should be laid on irrigation. I do not want to bring in Madras because they have already struck a balance between development of industries and irrigation. But if we take Andhra they have kept the development of every other item at the minimum and given the topmost priority to the development of irrigation. The result is that though to start with they were backward, they are now first or second in the entire Southern Zone States in the matter of agricultural development. Similarly, if we cut short our other programmes and also the non-plan expenditure and also cut down the non-productive expenditure even within the plan allotment and if we give topmost priority for development of agriculture, the marginal deficit that we have can easily be wiped out. But there is no mind to do it so far as the Cauvery basin is concerned. It is not very difficult to do if they have got the mind to do it. Work on the Cauvery valley is being done from 1924 and they have the necessary technical details. What they need is money. Even money also can be found out, but I am sorry to say that they do not have the mind to do. The other day the Minister was pleased to say that we make no distinction between area and area in the State, but may I ask him that is the money he has provided for the Cauvery basin. For irrigation they have provided Rs. 1 crore of which Rs. 1 lakh and odd is for Hemavathy. If you deduct the expenditure on establishment and other matters, practically nothing could be spent on the project work as such. Then, Sir, out of the allocation of Rs. 5 crores, only Rs. 1 crore is allotted for ex-Mysore and yet the Government say that they have made no distinction

(SRI K. S. SURYANARAYANA RAO)

between area and area. I ask him to work out the *per capita* on population basis and on the basis of that let him tell us that he has made no distinction between area and area. I am not against the development of backward areas. You don't develop the areas which are ready for development and you want to develop areas which are not developed and in the process you do not develop either this area or that area and the result is no development anywhere. We have stretched ourselves so far and so fast that it is just impossible to concentrate on anything. I do concede that we are in financial difficulties. We can make up that deficiency by reducing the allocations on other items and also by recasting the five year plan and provide a major amount for irrigation. For instance, I would suggest that expenditure on buildings, roads, etc. can take second or third place and first priority for expenditure from State resources can be given to agriculture and thus even out of our own State resources we can commit the waters of Cauvery. So far as Hogenakal is concerned on no account should we allow that to be developed either on the Madras side or on our side because the moment you commit it for electricity we will have no right to develop the water for irrigation purposes. What is the situation ? Unfortunately, within the Planning Commission we have absolutely on pull. I am sorry to say this, but what I mean to say is that we must at least now try to wake up and make good our lapses of the past. Even in the C. W. P. C., we have no pull and we find that even they put in all sort of objections. Even the projects for which foundation stones were laid by our Chief Minister and the Prime Minister do not get technical clearance and the works do not get started. We find that even technical clearance is held up for the entire period of the plan itself. So far as the Central Government and the Planning Commission are concerned, they have absolutely on regard for us. I was heartened by the assurance given by the Hon'ble Minister the other day. I did not like to contradict it then. However, I would like to point out that a member of the Planning Commission said the other day in Madras that so far as Hogenakal is concerned, the Planning Commission is very likely to clear that project and therefore it seems that they would be bypassing the Mysore Government even in this matter. So if you do not wake up to the realities at least now and do things at the appropriate time, you will completely lose your case. It is no argument to advance that we are short of funds and so that project could be allowed to be taken up. Our Government will have to find the resources, appeal to the Government of India for loans, grants, assistance, etc. We have raised sufficient money thorugh our internal resources and so by making re-allocation of the budget provisions it is just possible to find at least Rs. 5 to 10 crores for development of the Cauvery basin.

Then there is also another point. We are asking for our share of only the scheduled rivers, but what about the waters of the non-scheduled rivers and the water available in the non-scheduled rivers is much more

than the water to our share in the scheduled rivers and that comes to nearly 100 TMCft. If we develop all these, we will be developing about 3 to 5 akhs of acres under the non-scheduled rivers and about 3 lakhs of acres under the scheduled rivers. So, about 9 lakhs of acres can be brought under irrigation in Hassan, Mysore, Mandya and Coorg. The land is fertile; there is plenty of skilled labour available and the rainfall is very congenial. We are worshipping Cauvery River as Goddess and we are neglecting such a holy river. Mr. Appanna will agree with the importance of Cauvery and its tributaries. I urge upon the Government to cut down the expenditure the budgetary provision in respect of those items which have a low order of priority and provide sufficient funds for the Cauvery Basin. I am happy that we have been afforded an opportunity to express our views and impress the urgency of the matter. Our apprehension is that scanty, provision is made for these projects in this year's budget and that has led us to a point of sheer frustration. While expressing our views out of sheer frustration, if we have wounded the feelings of any member on the other side, we may be forgiven for that. We go to Andhra Pradesh with a begging bowl for the Akkalu rice which is nothing but broken rice mixed with all kinds of stones and other things. Why should we go to Madras and beg of them for rice when we have our own rivers and our own areas to develop? Not that we have anything against it. Of course, we have surplus we will part with it to them. If this is the way in which the plan is to be worked out and priorities are to be fixed, we will not do anything. I am appealing to the Minister to accept the principle of the resolution and try to provide as much money as possible for this purpose. I for one am not satisfied with the present budgetary provision and Government must see that most of these works are started with or without the concurrence of the C.P.W.C. I believe there is no necessity to consult them in respect of non-scheduled rivers. They come into the picture only in respect of inter-State rivers and major projects. So, all the works costing less than a crore of rupees must be started immediately and other should be started progressively so that by 1974 all the waters of the Cauvery Basin, whether scheduled or non-scheduled, may be committed and we can take full advantage of them.

†ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ಸಭೆಯ ಮುಂದೆ ತಂದಿರತಕ್ಕಂಥ ಈ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕಾವೇರಿ ನದಿಯ ನೀರನ್ನು ಬಳಕೆ ಮಾಡುವ ವಿಚಾರ ನಾಲ್ಕಾರು ಸಾರಿ ಈ ಸಭೆಯ ಮುಂದೆ ಚರ್ಚೆಗೆ ಬಂದಿದೆ. ಸರಕಾರ ಎಲ್ಲ ಶಕ್ತಿ ಉಪಯೋಗಿಸಿ ಕಾವೇರಿ ನೀರು ಬಳಕೆ ವಿಚಾರದಲ್ಲಿ ಯಶಸ್ವಿಯಾಗುತ್ತೇವೆ ಎಂದು ಆ ಚರ್ಚೆಯ ಕಾಲದಲ್ಲಿ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಆದಷ್ಟು ಬೇಗ ನೀರನ್ನು ಪೂರ್ಣವಾಗಿ ಉಪಯೋಗಿಸುತ್ತೇವೆಂದು ಸಹ ಹೇಳಿದ್ದಾರೆ. ಈ ನೀರು ಬಳಕೆ ವಿಚಾರದಲ್ಲಿ ಮದ್ರಾಸ್ ಸರಕಾರದೊಡನೆ ಮಾಡಿಕೊಂಡ ಒಪ್ಪಂದವನ್ನು ನಮ್ಮ ಸರಕಾರ ಕಣ್ಣುಬಿಟ್ಟು ನೋಡಿದ ಹಾಗೆ ಕಾಣುವುದಿಲ್ಲ. ಆ ಒಪ್ಪಂದ ದೇಶದ ಹಿತಕ್ಕೆ ಹಾನಿಕಾರಕವಾಗಿದೆ ಅದನ್ನು ಪುನರ್ವಿಮರ್ಶೆ ಮಾಡಬೇಕು ಎಂದು ಎಚ್ಚರಿಕೆ ಸಹ ಕೊಟ್ಟಿದೆ. ಆ ಒಪ್ಪಂದದಲ್ಲಿ ಇರುವ ಅನೇಕ ನ್ಯೂನತೆಗಳ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಅದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಬೇಕಾದುದು ಅಗತ್ಯವಾಗಿದೆ. ಇತ್ತ ಕಡೆ ಸರಕಾರದ ದೃಷ್ಟಿ ಇಲ್ಲದೇ ಇರುವುದರಿಂದ ಸರಕಾರ ತನ್ನ ಕರ್ತವ್ಯ ಲೋಪ ಮಾಡಿದೆ ಎಂದು ಹೇಳಬಹುದು. ನೀರು ಬಳಕೆಯ ವಿಚಾರದಲ್ಲಿ ಸರಕಾರ ವಿಫಲವಾಗಿದೆ. ಎರಡನೇ ಮತ್ತು ಮೂರನೇ ಯೋಜನೆಗಳಲ್ಲಿ

(ಶ್ರೀ ಡಿ. ವಿ. ಗೌಡ)

ಇದಕ್ಕಾಗಿ ಸಾಕಷ್ಟು ಹಣ ಒದಗಿಸಲಿಲ್ಲ. ಹಣವಿಲ್ಲದೆ ಕೆಲಸವಾಗಲಿಲ್ಲ ಎಂದು ಹೇಳಬಹುದು. ಇದು ನಮ್ಮ ಆರ್ಥಿಕ ದುಸ್ಥಿತಿಗೆ ಕಾರಣವಾಗಿದೆ. ನಾಲ್ಕನೇ ಯೋಜನೆಯಲ್ಲಿ ಕೂಡ ಉಪಯೋಗಿಸ ಬೇಕಾದ ನೀರನ್ನು ಬಳಕೆ ಮಾಡುವುದು ಕಷ್ಟ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಷೆಡ್ಯೂಲ್ಡ್ ರಿವರ್ಸ್ 70 ಟೀ.ಎಂ.ಸಿ.ಎಫ್.ಟಿ. ನೀರು ಬಳಕೆ ಮಾಡುವುದಕ್ಕೆ 35 ಕೋಟಿ ರೂಪಾಯಿ ಖರ್ಚಾಗುತ್ತದೆ. ಇದರಿಂದ ಮೂರೂವರೆ ಲಕ್ಷ ಎಕರೆ ನೀರಾವರಿಯಾಗುತ್ತದೆ. ಈ ಕಾರ್ಯಕ್ಕೆ ಪ್ರಾಶಸ್ತ್ಯ ಕೊಡಬೇಕಾದುದು ಅನಿವಾರ್ಯವೆಂದು ಹೇಳಬೇಕಾಗಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಹಾಕಿಕೊಂಡು ನಿರ್ದಿಷ್ಟವಾದ ಕೆಲಸವಾಗಬೇಕು. ನಾಲ್ಕನೆ ಯೋಜನೆಯು ಔಟ್ಲೇ 650 ಕೋಟಿ ರೂಪಾಯಿ ಆಗಬೇಕು. ಒಟ್ಟಿನಲ್ಲಿ ಹೆಚ್ಚು ನೀರು ಬಳಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಒತ್ತಾಯಪಡಿಸುತ್ತೇನೆ. ಈ ಸಂದರ್ಭದಲ್ಲಿ ಅಪ್ಪರ್ ಕೃಷ್ಣಾ ಯೋಜನೆಗೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಸಹಾಯ ಪಡೆಯುವುದು ಒಳ್ಳೆಯದು. ಈಗ ಒದಗಿಸಿರುವ ಹಣದಿಂದ ಯೋಜನೆ ಪೂರ್ತಿ ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಪೂರ್ತಿಯಾಗಿ ವೆಚ್ಚವನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳಬೇಕು. ಒಟ್ಟಿನಲ್ಲಿ ಪ್ಲಾನ್ ಔಟ್‌ಲೇ ಜಾಸ್ತಿ ಮಾಡಿ ನೀರಿನ ಬಳಕೆಯಾಗಬೇಕಾದುದು ಅಗತ್ಯ ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ಹೇಳುತ್ತೇನೆ.

ಕಾವೇರಿ ನದಿ ಹುಟ್ಟತಕ್ಕದ್ದು ಮೈಸೂರಿನಲ್ಲಿ. ಅನೇಕ ಉಪನದಿಗಳು ಹರಿಯುವುದು ನಮ್ಮ ಮೈಸೂರು ದೇಶದಲ್ಲಿ. 13,500 ಚದರಮೈಲಿ ವಿಸ್ತೀರ್ಣದಲ್ಲಿ ಈ ನದಿಗಳ ನೀರು ಹರಿದು ಹೋಗುತ್ತಿದೆ. ಈ ನೀರನ್ನು ಉಪಯೋಗಿಸಿಕೊಳ್ಳುವ ಹಕ್ಕನ್ನು ಸ್ಥಾಪನೆಮಾಡಿಕೊಳ್ಳುವುದಕ್ಕೆ ವಿಫಲರಾದರೆ ಜನರಿಗೆ ಏನು ಉಪಯೋಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಜವಾಬ್ದಾರಿ ಸರ್ಕಾರ ಬಂದು ಇಷ್ಟು ವರ್ಷವಾದರೂ ಸಹ, ಈಗ ಈ ವಿಚಾರದಲ್ಲಿ ಕಣ್ಣುಬಿಟ್ಟು ನೋಡುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಮತ್ತು ನನಗೆ ಬಹಳ ಆಶ್ಚರ್ಯವಾಗುತ್ತದೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಸರ್ಕಾರದವರು ಷೆಡ್ಯೂಲ್‌ಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಮದ್ರಾಸ್ ಸರ್ಕಾರದವರಿಗೆ ತಿಳಿಸಿ, ಅವರ ಒಪ್ಪಿಗೆ ಪಡೆದು ನಂತರ ಪ್ರಾಜೆಕ್ಟ್ ಕಟ್ಟುವ ಪ್ರಯತ್ನ ಮಾಡಬೇಕೆಂದು ನಿಯಮವಿದೆ. ಇದೇ ರೀತಿ ನಡೆಯುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಹುಟ್ಟುವ ನೀರಿನ ಉಪಯೋಗವನ್ನು ನಾವು ಪಡೆಯುವುದಕ್ಕೆ ಮದ್ರಾಸ್ ಸರ್ಕಾರದವರು ಅಂಗೀಕಾರ ಪಡೆಯಬೇಕೆನ್ನುವುದು ಬಹಳ ವಿಚಿತ್ರವಾಗಿ ಕಾಣುತ್ತದೆ. ಈ ವಿಚಾರದಲ್ಲಿ ಪುನರ್‌ವಿಮರ್ಶೆ ಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೂ, ಈ ರೆಸ್‌ಟ್ರಿಕ್ಷನ್ ತೆಗೆಯಲಿಕ್ಕಾದರೂ ಸರ್ವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕಾಗಿತ್ತು ಎಂದು ನನಗನ್ನಿಸುತ್ತದೆ. ಈ ರೀತಿಯ ರಿಸ್‌ಟ್ರಿಕ್ಷನ್ ಇರುವುದನ್ನು ನೋಡಿದರೆ ಕಾವೇರಿ ನದಿಯ ನೀರಿನ ಬಳಕೆಗೆ ಎಷ್ಟೊಂದು ಮಹತ್ವವನ್ನು ನಮ್ಮ ಸರ್ಕಾರದವರು ಕೊಟ್ಟಿದ್ದಾರೆ ಎನ್ನುವುದು ಅರ್ಥವಾಗುತ್ತದೆ. ಇವತ್ತಿನದಿವಸ ಸೆಂಟ್ರಲ್ ವಾಟರ್ ಕಮಿಷನ್ ಅವರ ರಿಸ್‌ಟ್ರಿಕ್ಷನ್ ಏನಿದೆಯೆಂದರೆ, ಪ್ರತಿಯೊಂದಕ್ಕೂ ಮದ್ರಾಸ್ ಸರ್ಕಾರದ ಅಂಗೀಕಾರ ಪಡೆದು ನಂತರ ನಮ್ಮ ಪ್ರಾಜೆಕ್ಟ್ ರಿಪೋರ್ಟನ್ನು ಕೇಂದ್ರ ಸರ್ಕಾರಕ್ಕೆ ಕಳಿಸಬೇಕಾಗಿದೆ. ಹಾರಂಗಿ, ಹೇಮಾವತಿ ನದಿಗಳ ಪ್ರಾಜೆಕ್ಟ್ ರಿಪೋರ್ಟನ್ನು ಕೇಂದ್ರದವರು ವಾಪಸ್ ಕಳಿಸಿದ್ದಾರೆಂದು ನನಗೆ ತಿಳಿಯಿತು. ಇದಕ್ಕೆ ಮದ್ರಾಸ್ ಸರ್ಕಾರದವರ ಪೂರ್ಣ ಅನುಮತಿ ಸಿಕ್ಕಿಲ್ಲವೆಂದು ಕಾಣುತ್ತದೆ.

Sri B. CHANNABYRE GOWDA (Hoskote).—Point of Order, Sir, ಯಾರೋ ಒಬ್ಬರು ಒಂದು ಕವರ್ ತಂದು ಇಟ್ಟು ಹಿಂದೆ ಹೋಗಿ ಕುಳಿತಿದ್ದಾರೆ. ಯಾರು ಎಂದು ಗೊತ್ತಾಗಲಿಲ್ಲ.

Mr. DEPUTY SPEAKER.—Order, order. The stranger to go out immediately. (The stranger was promptly removed by the Watch and Ward)………

How dare he sits here ?

Sri S. M. KRISHNA (Maddur).—Action may be taken to find out who the person and how he got into the Chambers.

Mr. DEPUTY SPEAKER.—I am Sorry, I did not notice him. Sri Channabyre Gowda did a good thing in bringing the incident to my notice.

Sri K. LAKKAPPA (Hebbur).—As to how and why he got into the Assembly Hall should be investigated.

Mr. DEPUTY SPEAKER.—Yes, yes.

ಶ್ರೀ ಬಿ. ವಿ. ಗೌಡ.—ಈ 24ನೇ ಒಪ್ಪಂದದಲ್ಲಿರುವ ನ್ಯೂನತೆಗಳನ್ನು ತೆಗೆಯಲು ಸರ್ಕಾರದವರು ಕೂಡಲೇ ಪ್ರಯತ್ನ ಮಾಡಬೇಕು. ಬಹುಶಃ ನೀವು ಮಾಡಿದಂತಹ ನೀರಾವರಿ ಪ್ರಾಜೆಕ್ಟ್‌ಗಳಿಗೆ ಕೇಂದ್ರದ ಅನುಮತಿ ಸಿಗುತ್ತಿಲ್ಲವೆಂದು ಕಾಣುತ್ತದೆ. ಸಿಗುವ ರೀತಿ ಧೈರ್ಯದ ಪ್ರದರ್ಶನವನ್ನಾದರೂ ಇಲ್ಲಿಯವರೆಗೆ ಮಾಡಿದಂತೆ ಕಾಣಲಿಲ್ಲ. ಈ ವಿಚಾರದಲ್ಲಿ ಸ್ವಲ್ಪವಾದರೂ ಮುಂದುವರೆದಿದ್ದರೆ ನಾವು ಒಪ್ಪಿಕೊಳ್ಳಬಹುದಾಗಿತ್ತು. ಆಂಧ್ರ ಸರ್ಕಾರದವರು ನಾಗಾರ್ಜುನ ಸಾಗರದ ಎರಡನೆಯ ಹಂತವನ್ನು, ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್ ಕೊಡದೆ ಇದ್ದಾಗ್ಯೂ ಸಹ ಮುಂದುವರೆಸಿದರು. ಆ ವಿಚಾರವನ್ನು ಈಗ ಪ್ರಸ್ತಾಪ ಮಾಡುವುದು ಬೇಡ. ಸೆಂಟ್ರಲ್ ವಾಟರ್ ಬೋರ್ಡ್‌ನವರು ಈ ವಿಚಾರದಲ್ಲಿ ಒಪ್ಪಲಿ, ಒಪ್ಪದೇ ಇರಲಿ, ಸರ್ಕಾರದವರು ಮಾತ್ರ ಕೆಲಸವನ್ನು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಈ ನೀರಿನ ವಿಷಯದಲ್ಲಿ ಯಾವ ಒಂದು ನ್ಯಾಯವನ್ನು ಒದಗಿಸಿದಂತಾಗುವುದಿಲ್ಲವೆಂದು ಈ ಸಮಯದಲ್ಲಿ ಹೇಳುತ್ತೇನೆ. ನಾನು ಷೆಡ್ಯೂಲ್ಡ್ ರಿವರ್‌ಗಳನ್ನಾದರೂ ಸುಲಭವಾಗಿ ತೆಗೆದುಕೊಂಡು ಮಾಡಬಹುದೆಂದು ನನಗನ್ನಿಸುತ್ತದೆ. ಈ ನಾನ್ ಷೆಡ್ಯೂಲ್ಡ್ ರಿವರ್‌ಗಳ ನೀರನ್ನು ಉಪಯೋಗಿಸಿಕೊಳ್ಳಲು ಯಾವ ಪ್ರತಿಬಂಧಕಗಳೂ, ಯಾವ ನೀತಿನಿಯಮಗಳೂ ಇರುವುದಿಲ್ಲ. ಈ ಒಂದು 100-120 ಟಿ.ಎಂ ಸಿ ಎಫ್ ಟಿ, ನೀರಿನ ಪೂರ್ಣ ಬಳಕೆಯನ್ನು ಯಾರ ಅಡ್ಡಿ ಆತಂಕವಿಲ್ಲದೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೆಂದು ಸರ್ಕಾರದವರು ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. 1974ನೇ ಇಸವಿಯ ಒಳಗಾದರೂ ಈ ನಾನ್ ಷೆಡ್ಯೂಲ್ಡ್ ನದಿಗಳ ನೀರಿನ ಪೂರ್ಣ ಬಳಕೆಯನ್ನು ಸರ್ಕಾರದವರು ಪಡೆಯಲಿಕ್ಕೇ ಬೇಕು. ಇಲ್ಲದಿದ್ದರೆ ಆಂಧ್ರ ಮತ್ತು ಮದ್ರಾಸ್ ಸರ್ಕಾರದವರು ಮುಂದೆ ಒಪ್ಪಂದದ ಅವಧಿ ಮುಗಿದ ಮೇಲೆ ಈ ನಾನ್ ಷೆಡ್ಯೂಲ್ ನದಿಗಳ ನೀರಿನ ಮೇಲೆ ಕ್ಲೈಮ್ಸ್ ಹೊಂದಲಿಕ್ಕೆ ಅವಕಾಶವಾಗುತ್ತದೆ. ನನ್ನ ಮಿತ್ರರನೇಕರು ಹೇಳಿದ ರೀತಿ ಈಗಾಗಲೆ ಈ ನಾನ್ ಷೆಡೂಲ್ಡ್ ನದಿಗಳ ನೀರಿನ ಮೂಲಕ 18-19 ಲಕ್ಷ ಎಕರೆ ಜಮೀನಿನ ಅಭಿವೃದ್ಧಿಯನ್ನು ತಂಜಾವೂರಿನವರು ಮಾಡಿಕೊಂಡಿದ್ದಾರೆ. ಆದ್ದರಿಂದ 1975ರ ವೇಳೆಗಾದರೂ ಸಹ ಈ ನಾನ್ ಷೆಡ್ಯೂಲ್ ನದಿಗಳ ನೀರಿನ ಬಳಕೆಯನ್ನು ಮಾಡಿಕೊಳ್ಳಲೇಬೇಕು. ಇಲ್ಲದಿದ್ದರೆ ಮುಂದೆ ಮದ್ರಾಸ್ ಸರ್ಕಾರದವರು ಇದನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳಿದರೆ ತಪ್ಪಾಗಲಾರದು. ಹೆಚ್ಚಿನ ನೀರು ಈ ಕಾವೇರಿಗೆ ಹೋಗಿ ಬೀಳುತ್ತದೆ. ನಾನ್ ಷೆಡ್ಯೂಲ್ಡ್ ನದಿಗಳ ನೀರನ್ನು ಉಪಯೋಗಿಸಿಕೊಳ್ಳಲು ಹೆಚ್ಚಿನ ಮಹತ್ವವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ ಎಲ್ಲಾ ಕಾರ್ಯಕ್ರಮಗಳನ್ನು ಬೇಕಾದರೆ ಬದಿಗಿಟ್ಟು ಈ 1?0 ಟಿ. ಎಂ. ಸಿ. ಎಫ್. ಟಿ. ನೀರಿನ ಪೂರ್ಣ ಬಳಕೆಯನ್ನು ಪಡೆಯಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಸುಮಾರು 10 ಕೋಟಿ ರೂಪಾಯಿ ಖರ್ಚುಮಾಡಿದರೆ 5? ಸಾವಿರ ಎಕರೆ ಜಮೀನನ್ನು ಸಾಗು ಮಾಡುವುದಕ್ಕೆ ಸಾಧ್ಯ. ಉಧಾಲ, ತಾಡಿಹಳ್ಳ, ದೊಡ್ಡಹಳ್ಳ, ಹೆಬ್ಬಾಲ, ಈ ಉಪನದಿಗಳು ಕಾವೇರಿ ನದಿಗೆ ಬಂದು ಸೇರುತ್ತವೆ. ಈ ಉಪನದಿಗಳ ನೀರಿನ ಪೂರ್ಣ ಬಳಕೆ ಆಗಬೇಕಾದ್ದು ಅಗತ್ಯ. ಪಂಜಾಬಿನವರು ಉಪನದಿಗಳ ನೀರನ್ನು ಈಗಾಗಲೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ನಾವು ಸಹ ಹೆಚ್ಚಿನ ಹಣವನ್ನು ಇದಕ್ಕಾಗಿ ಉಪಯೋಗಿಸಿದರೆ ಪೂರ್ಣವಾಗಿ ನೀರಾವರಿ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೆ ಮತ್ತು ಕಾವೇರಿ ನೀರಿನ ಪೂರ್ಣ ಬಳಕೆಯನ್ನು ಮಾಡಿದಂತಾಗುತ್ತದೆ. ಜನರಿಗೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಮೈಸೂರು ದೇಶದಲ್ಲಿ ನೀರಾವರಿ ಯೋಜನೆಗಳು ಬಹಳ ಕಡಮೆಯಿರುವುದರಿಂದ, ಕೇಂದ್ರಸರ್ಕಾರದವರಾಗಲಿ, ಪ್ಲಾನಿಂಗ್ ಕಮಿಷನ್ ಆಗಲಿ, ಮತ್ತೆ ಯಾರೇ ಆಗಲಿ, ತಾರತಮ್ಯ ಭಾವನೆಯನ್ನು ತೋರಿಸದೆ ಹೆಚ್ಚಿನ ಹಣ ಸಹಾಯವನ್ನು ಮಾಡಬೇಕು. ಈ ವಿಚಾರದಲ್ಲಿ ಸರ್ಕಾರದವರು ಸಹ ಹೆಚ್ಚಿನ ಶ್ರದ್ಧೆ ವಹಿಸುವುದು ಒಳ್ಳೆಯದೆಂದು ತಿಳಿಸುತ್ತೇನೆ. ಸರ್ಕಾರದವರು ಶ್ರದ್ಧೆ ವಹಿಸಿದ್ದರೆ ಪ್ರಗತಿ ಪಡೆಯಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ. ಹೊಗೇನಕಲ್ ವಿಚಾರ ಹೇಳಿದರು. ಇದಕ್ಕೆ ಸೆಂಟ್ರಲ್ ವಾಟರ್ ಮತ್ತು ಪವರ್ ಕಮೀಷನ್‌ರವರು ಅಂಗೀಕಾರ ನೀಡುವುದಾದರೆ ಮೈಸೂರು ದೇಶಕ್ಕೆ ದೊಡ್ಡ ಅಪಘಾತವಾಗುತ್ತದೆ. ಇದರಿಂದ ಶಿಂಷಾದಿಂದ ಕೊಳ್ಳೇಗಾಲದವರಿಗೆ ಸಬ್‌ಮರ್ಜ್ ಆಗುತ್ತದೆ. ಅದ್ದರಿಂದ ಆಲ್‌ಟರ್‌ನೇಟೀವ್ ಆಗಿ ಏನಾದರೂ ಯೋಜನೆಗಳನ್ನು ತಯಾರು ಮಾಡು

(ಶ್ರೀ ಜಿ. ವಿ. ಗೌಡ)

ತ್ತಾರೋ ಇಲ್ಲವೋ ಗೊತ್ತಿಲ್ಲ. ಇದಕ್ಕಾಗಿ ಒಂದು ಸಬ್‌ಡಿವಿಜನ್ ಮಾಡಿದರು. ನಾಲ್ಕು ವರ್ಷ ವಾಯಿತು, ಈ ಸಬ್‌ಡಿವಿಜನ್ ಏನು ಕೆಲಸ ಮಾಡಿದೆ ಎನ್ನುವುದರ ಬಗ್ಗೆ ಏನಾದರೂ ವರದಿಯನ್ನು ಒಪ್ಪಿಸಿದೆಯೇ? ಈ ವಿಚಾರಗಳನ್ನೆಲ್ಲ ಕೂಲಂಕುಷವಾಗಿ ಉತ್ತರದಲ್ಲಿ ಹೇಳಬೇಕು.

11-30 A. M.

ಮದ್ರಾಸಿನವರು ಎಲ್ಲಾ ಹೈಡಲ್ ಯೋಜನೆಗಳನ್ನೂ ಮುಗಿಸಿದ್ದಾರೆ. ಇನ್ನು ಹೆಚ್ಚು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಏನೂ ಅವಕಾಶವಿಲ್ಲ. ಅವರಿಗೆ ಇರತಕ್ಕದ್ದೆಲ್ಲ ಹೊಗೇನಕಲ್ ಯೋಜನೆ ಮಾತ್ರ. ಇದಕ್ಕೆ ಮದ್ರಾಸಿನವರಿಗೆ ಅವಕಾಶ ಕೊಡುವುದಾದರೆ ನಮ್ಮ ರಾಜ್ಯಕ್ಕೆ ತುಂಬ ಹಾನಿಯಾಗುತ್ತದೆ. ಈ ಯೋಜನೆಗೆ ಸಂಬಂಧಪಟ್ಟ ಹಾಗೆ ನಮ್ಮ ಸರ್ಕಾರದವರು ಏನಾದರೂ ಆಲ್ಟರ್‌ನೇಟೀವ್ ಪ್ರಪೋಸಲ್‌ಗಳನ್ನು ತಯಾರುಮಾಡಿ ಅದನ್ನು ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದೆಯೇ? ಹಾಗೆ ಮೈಸೂರು ಸರ್ಕಾರದವರೂ ಪ್ರಪೋಸಲ್‌ಗಳನ್ನು ಕಳಿಸುವುದಾದರೆ ಕೇಂದ್ರ ಸರ್ಕಾರವಾಗಲಿ, ಕೇಂದ್ರ ಜಲ ವಿದ್ಯುತ್ ಆಯೋಗವಾಗಲಿ ಯಾವ ವಿಧವಾದ ಅನುಮತಿಯನ್ನೂ ಮದ್ರಾಸ್ ಸರ್ಕಾರಕ್ಕೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಕೂಡಲೇ ನಮ್ಮ ಸರ್ಕಾರ ವ್ಯವಸ್ಥೆಯನ್ನು ಮಾಡಬೇಕು. ಒಂದು ವೇಳೆ ಹೊಗೇನಕಲ್ ಯೋಜನೆಯ ವಿಚಾರದಲ್ಲಿ ಮದ್ರಾಸ್ ಸರ್ಕಾರ ಏನಾದರೂ ಮಾತು ಕತೆ ಆಡುವುದಕ್ಕೆ ಇಷ್ಟಪಟ್ಟರೆ, ಆ ಬಗ್ಗೆ ಮಾತನಾಡುವುದಕ್ಕೆ ಮೊದಲು 1924ರಲ್ಲಿ ಆಗಿರುವ ಒಪ್ಪಂದದಲ್ಲಿ ಏನು ಲೋಪದೋಷಗಳಿವೆಯೋ ಅವುಗಳನ್ನು ಸರಿಪಡಿಸುವುದಕ್ಕೆ ಒಪ್ಪಿಕೊಂಡರೆ ಮಾತ್ರ ಹೊಗೇನಕಲ್ ಯೋಜನೆಯ ವಿಷಯದಲ್ಲಿ ಮಾತನಾಡುವುದಕ್ಕೆ ನಮ್ಮ ಸರ್ಕಾರದವರು ಒಪ್ಪಿಕೊಳ್ಳಬಹುದು. ಆಗಲೂ ಕೂಡ ಮೈಸೂರಿನ ಹಿತವನ್ನು ಕಾಪಾಡುವುದರ ಕಡೆಗೇ ಗಮನವನ್ನು ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಹೊಗೇನಕಲ್ ಯೋಜನೆಗೆ ಅವಕಾಶವನ್ನು ಕೊಟ್ಟರೆ ಅವರು ಅದನ್ನು ಬ್ಯಾಲೆನ್ಸಿಂಗ್ ರಿಸರ್ವಾಯರ್ ಆಗಿ ಉಪಯೋಗಿಸಿಕೊಳ್ಳುತ್ತಾರೆ. ಏನೇ ಸಂದರ್ಭವಿರಲಿ, ನಾವು ಹೊಗೇನಕಲ್ ಯೋಜನೆ ಕಾರ್ಯಗತವಾಗುವುದಕ್ಕೆ ಒಪ್ಪಬಾರದು.

ಶ್ರೀ ಜಿ. ವಿ. ಗೌಡ.—ಯಾವುದಾದರೂ ವಿಚಾರದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡಿದರೆ ಮಾತನಾಡದೆ ಇರುವುದು ಸಭ್ಯತೆಯ ಲಕ್ಷಣವಾಗುವುದಿಲ್ಲ. ಒಂದು ವೇಳೆ ಮಾತನಾಡಬೇಕಾದ ಸಂದರ್ಭ ಬಂದಾಗ ಅದಕ್ಕೆ ಪೂರ್ವಭಾವಿಯಾಗಿ 1924ರ ಅಗ್ರಿಮೆಂಟಿನಲ್ಲಿ ಏನೇನು ನ್ಯೂನತೆಗಳಿವೆಯೋ ಅದನ್ನು ಸರಿಪಡಿಸುವುದಕ್ಕೆ ಒಪ್ಪಿಕೊಂಡರೆ ಈ ವಿಷಯವನ್ನು ಮಾತನಾಡುತ್ತೇವೆಂದು ಹೇಳಲಿ. ಅದರಿಂದ ಈಗ ಇರುವ ಬಾಟಲ್‌ನೆಕ್ಸ್ ನಿವಾರಣೆಯಾದರೆ ಒಳ್ಳೆಯದು. ಆಗ ಪೂರ್ಣವಾಗಿ ನೀರನ್ನು ಉಪಯೋಗಮಾಡಿಕೊಳ್ಳುವುದಕ್ಕೆ, ಯಾವ ವಿಧವಾದ ಅಡಚಣೆಯೂ ಇರುವುದಿಲ್ಲ, ಕೇಂದ್ರ ಜಲವಿದ್ಯುತ್ ಆಯೋಗದ ಬಳಿ ಕ್ಲಿಯರೆನ್ಸ್ ಬೇಕೆಂದು ಹೇಳುವ ಅವಕಾಶವಿರುವುದಿಲ್ಲ. ಹೊಗೇನಕಲ್ ಯೋಜನೆಯಿಂದ ರಾಜ್ಯಕ್ಕೆ ಬಹಳ ಹಾನಿಯಾಗುತ್ತದೆ. ಯಾವುದೇ ರೀತಿಯಿಂದ ಅದನ್ನು ಒಪ್ಪಿಕೊಳ್ಳಬಾರದು ಎಂದು ನಾನೂ ಹೇಳುತ್ತಿದ್ದೇನೆ. ಕಾವೇರಿ ನೀರಿನ ಉಪಯೋಗದ ಬಗ್ಗೆ ಸರ್ಕಾರದವರ ಹಿಂದೆ ಈ ಮನೆಯ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಇದ್ದಾರೆ, ಎಲ್ಲರ ಶುಭಾಶಯಗಳನ್ನೂ ತೆಗೆದುಕೊಂಡು ಆ ಕಾರ್ಯವನ್ನು ಪೂರ್ಣ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ಷೆಡ್ಯೂಲ್ ರಿವರ್ಸ್ ಮತ್ತು ನಾನ್-ಷೆಡ್ಯೂಲ್ ರಿವರ್ಸ್ ಇವುಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು ಇಲ್ಲದೆ ಹೋದರೆ ದೇಶಕ್ಕೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಕಾವೇರಿ ನೀರಿನ ಉಪಯೋಗ ಆಗಲೇ ಬೇಕು ಎನ್ನುವುದನ್ನು ಯಾರೂ ಮರೆಯಬಾರದು. ಇದಕ್ಕೆ ಸಾಕಷ್ಟು ಪ್ರಯತ್ನವನ್ನು ಮಾಡಬೇಕು; ಇನ್ನು 5—10 ವರ್ಷಗಳಲ್ಲಿ ಪೂರ್ಣವಾಗಿ ಕಾವೇರಿ ನೀರು ಬಳಕೆಯಾಗತಕ್ಕ ವಿಚಾರದಲ್ಲಿ ಕಮಿಟ್ ಆಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ತಿಳಿಸುತ್ತಿದ್ದೇನೆ. ಕಬಿನಿ ಯೋಜನೆಗೆ ಈಗ ಕೊಡುತ್ತಿರುವ ರೀತಿಯಲ್ಲಿ ಹಣವನ್ನು ಒದಗಿಸಿದರೆ ಇನ್ನು 10 ವರ್ಷಗಳಾದರೂ ಕೆಲಸಗಳು ಮುಗಿಯುವ ಹಾಗಿಲ್ಲ. ಪ್ರತಿಯೊಂದು ಯೋಜನೆಯನ್ನೂ ತೆಗೆದುಕೊಂಡು ಅದರಿಂದ 1974ರ ಒಳಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಎಷ್ಟರಮಟ್ಟಿಗೆ ಮಹತ್ವವನ್ನು ಕೊಡಬೇಕೋ ಅಷ್ಟು ಮಹತ್ವವನ್ನು ಕೊಡಬೇಕು. ಇದಕ್ಕೆ ಹಣದ ಅಡಚಣೆ ಬರಲಿಕ್ಕೆ ಸಾಧ್ಯವಿಲ್ಲ. ಸರಿಯಾಗಿ ಲೆಕ್ಕಾಚಾರ ಹಾಕಿದರೆ ನಮಗೆ ಹಣ ಸಿಕ್ಕಲೇ ಬೇಕು. ನಾಲ್ಕನೆಯ ಯೋಜನೆಯನ್ನು ವಿಮರ್ಶೆ ಮಾಡತಕ್ಕ ಕಾಲದಲ್ಲಿ ಈ ಬಗ್ಗೆ ನನ್ನ ಸಲಹೆಗಳನ್ನು ಕೊಡಬಯಸುತ್ತೇನೆ. ಮಾನ್ಯ ದೇವೇಗೌಡರು ತಂದಿರತಕ್ಕ ಈ ನಿರ್ಣಯವನ್ನು ಮಾನ್ಯ ಸಭೆಯು ಒಪ್ಪುತ್ತದೆ. ಮಾನ್ಯ

ಮಂತ್ರಿಗಳೂ ಒಪ್ಪಿ ಅದರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ತಂದಂಥ ಈ ಗೊತ್ತುವಳಿಯ ಮೇಲೆ ಈಗಾಗಲೇ ಕೆಲವಾರು ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಈ ಗೊತ್ತುವಳಿಯನ್ನು ಅವರು ತಂದಂಥದ್ದು ಬಹುಶಃ ಈ ಸಭೆಗೆ ಮಾನ್ಯವಾದದ್ದು ಇದೆ ಮತ್ತು ಎಲ್ಲ ಸದಸ್ಯರೂ, ಈ ಕಡೆಯವರು ಮತ್ತು ಆ ಕಡೆಯವರು ಈ ಗೊತ್ತುವಳಿಯನ್ನು ಒಪ್ಪಿಕೊಳ್ಳುವುದಕ್ಕೆ, ಅನುಮತಿಯನ್ನು ಕೊಡುವುದಕ್ಕೆ ಹಿಂದು ಮುಂದು ನೋಡುವ ಹಾಗೆ ಇಲ್ಲ ಎನ್ನುವಂಥದ್ದು ನನಗೆ ಕಂಡುಬಂದಿದೆ. ಈ ಗೊತ್ತುವಳಿಯ ಮೇಲೆ ತಮ್ಮ ವಿಚಾರಗಳನ್ನು ವ್ಯಕ್ತ ಮಾಡುತ್ತ ಕೆಲವು ಮಾನ್ಯ ಸದಸ್ಯರು ಹೇಳಿದರು, ಕಾವೇರಿ ವ್ಯಾಲಿಯಲ್ಲಿ ನಮ್ಮ ಅಗ್ರಿಮೆಂಟ್ ಪ್ರಕಾರ ಇರುವ ನೀರನ್ನು ಉಪಯೋಗ ಮಾಡುವುದರಲ್ಲಿ ಸರ್ಕಾರ ಸಾಕಷ್ಟು ಆಸಕ್ತಿ ವಹಿಸಲಿಲ್ಲ, ಯಾವರೀತಿಯಿಂದ ಕೃಷ್ಣ ನೀರನ್ನು ಬಳಕೆ ಮಾಡುವುದರಲ್ಲಿ ಆಸಕ್ತಿಯನ್ನು ಸರ್ಕಾರ ವಹಿಸಿತೋ ಅಷ್ಟೇ ಆಸಕ್ತಿಯನ್ನು ಕಾವೇರಿ ನೀರಿನ ಉಪಯೋಗ, ಬಳಕೆಯಲ್ಲಿ ವಹಿಸಲಿಲ್ಲ ಎನ್ನುವ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಒಟ್ಟಾರೆ ಈ ಗೊತ್ತುವಳಿಯ ಮೇಲೆ ತಮ್ಮ ವಿಚಾರಗಳನ್ನು ವ್ಯಕ್ತ ಮಾಡುತ್ತ ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರೂ ಈ ಸಮಸ್ಯೆಯನ್ನು ಸಾಕಷ್ಟು ರೀತಿಯಿಂದ ಅರಿತುಕೊಂಡು ತಿಳಿದುಕೊಂಡಿದ್ದಾರೆ. 1974ರೊಳಗೆ ಕಾವೇರಿ ನೀರನ್ನು ಉಪಯೋಗ ಮಾಡುವುದಕ್ಕೆ ನಾವು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾರದೆ ಹೋದರೆ ಮೈಸೂರು ರಾಜ್ಯಕ್ಕೆ ಎಷ್ಟು ಹಾನಿಯಾಗುತ್ತದೆ ಎನ್ನುವ ಅನೇಕ ವಿಚಾರಗಳನ್ನು ಅವರು ಚೆನ್ನಾಗಿ ತಿಳಿದುಕೊಂಡು ಮಾತನಾಡಿದ್ದಾರೆ ಎಂದು ನಾನು ಸಂತೋಷದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಕೃಷ್ಣ ನೀರಿನ ಉಪಯೋಗದ ಬಗ್ಗೆ ಎಷ್ಟು ಆಸಕ್ತಿ ಸರ್ಕಾರ ವಹಿಸಿತ್ತೋ ಅಷ್ಟು ಆಸಕ್ತಿಯನ್ನು ಕಾವೇರಿ ನೀರಿನ ಉಪಯೋಗದ ಬಗ್ಗೆ ವಹಿಸಲಿಲ್ಲ ಎನ್ನುವುದರಲ್ಲಿ ಅರ್ಥವಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇದೆ. ಈ ವಾರದಲ್ಲಿ ಹಿನ್ನಲೆ ಈ ರೀತಿ ಇರಬಹುದು ಎಂದು ನನಗನ್ನಿಸುತ್ತದೆ. ಏನೆಂದರೆ, ಕೃಷ್ಣ ನೀರಿನ ಬೇಸಿನ್ ಎಲ್ಲ ಉತ್ತರ ಕರ್ಣಾಟಕದಲ್ಲಿದೆ ಮತ್ತು ಕಾವೇರಿ ಬೇಸಿನ್ ಎಲ್ಲ ದಕ್ಷಿಣ ಕರ್ಣಾಟಕದಲ್ಲಿ, ಹಳೆ ಮೈಸೂರಿನಲ್ಲಿ ಇದೆ ಎನ್ನುವಂಥ ವಿಚಾರಸರಣಿ ಮಾನ್ಯ ಸದಸ್ಯರಿಗೆ ಇದ್ದಂತೆ ಕಾಣಿಸುತ್ತದೆ. ಇದು ಸರಿಯಲ್ಲ. ಕೃಷ್ಣ ಬೇಸಿನ್‌ನಲ್ಲಿ ಹಳೇ ಮೈಸೂರಿನ 30 ಪರ್ಸೆಂಟ್ ಪ್ರದೇಶವಿದೆ. ತುಂಗ, ಭದ್ರ, ವಾಣಿವಿಲಾಸ ಸಾಗರ ಮುಂತಾದ ನೀರಾವರಿ ಪ್ರದೇಶಗಳು ಕೃಷ್ಣ ಬೇಸಿನ್‌ನಲ್ಲಿವೆ. ಕರಾರುವಾಕಾಗಿ 30 ಪರ್ಸೆಂಟ್ ಇದೆ ಎಂದು ಹೇಳದೆ ಹೋದರೂ ಕೂಡ ಸರಾಸರಿ 30 ಪರ್ಸೆಂಟ್‌ವರೆಗೆ ಕೃಷ್ಣ ಬೇಸಿನ್‌ನಲ್ಲಿ ಹಳೆ ಮೈಸೂರು ಏರಿಯಾ ಇದೆ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಕೃಷ್ಣ ನೀರನ್ನೂ ಉಪಯೋಗ ಮಾಡಿಕೊಳ್ಳಬೇಕಾಗಿದೆ, ಕಾವೇರಿ ನೀರನ್ನೂ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಎರಡೂ ನದಿಗಳ ನೀರನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ಎಷ್ಟರಮಟ್ಟಿಗೆ ಆಸಕ್ತಿ ತೋರಿಸಬೇಕೋ ಅಷ್ಟರಮಟ್ಟಿಗೂ ಆಸಕ್ತಿ ತೋರಿಸುತ್ತಿದೆ. ಅದಕ್ಕೂ ಹೆಚ್ಚಿನ ಮಟ್ಟದಲ್ಲಿ ಆಸಕ್ತಿ ತೋರಿಸಬೇಕು ಎಂದು ಕಳಕಳಿಯಿಂದ, ನೊಂದಮನಸ್ಸಿನಿಂದ ಅನೇಕ ಮಾನ್ಯ ಸದಸ್ಯರು ಮಾತುಗಳನ್ನು ಆಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸಬೇಕೆಂದಿದ್ದೇನೆ. ಸರ್ಕಾರ ಯಾವತ್ತಿಗೂ, ಯಾವ ವಿಚಾರವನ್ನೂ ಮಾನ್ಯ ಸಭೆಗೆ ಹೇಳಲಾರದೆ ಅಂಧಕಾರದಲ್ಲಿ ಇಟ್ಟಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಯಾವತ್ತಿಗೂ ಪ್ರತಿಯೊಂದು ವಿಚಾರಗಳನ್ನೂ ನಿಮ್ಮ ಮುಂದೆ ಇಟ್ಟಿದ್ದೇವೆ. ನಮ್ಮ ಶಕ್ತಿ ಎಷ್ಟು, ನಮ್ಮ ಸಾಮರ್ಥ್ಯ ಎಷ್ಟು. ನಮ್ಮ ಸಮಸ್ಯೆ ಎಷ್ಟು ದೊಡ್ಡದಾಗಿದೆ, ಅದನ್ನು ಬಗೆಹರಿಸುವುದಕ್ಕೆ ನಾವೂ, ನೀವೂ ಎಷ್ಟು ಪ್ರಮಾಣದಲ್ಲಿ ಪ್ರಯತ್ನ ಮಾಡಬೇಕಾಗಿದೆ ಎನ್ನುವ ಅನೇಕ ವಿಚಾರಗಳನ್ನು ನಾವು ನಿಮ್ಮ ಮುಂದೆ ಬಿಚ್ಚು ಮನಸ್ಸಿನಿಂದ ಹೇಳಿದ್ದೇವೆ. ಅಂಧಕಾರದಲ್ಲಿ ನಿಮ್ಮನಿಟ್ಟು ನಾವು ಏನೋ ಮಾಡುತ್ತಿದ್ದೇವೆ ಎನ್ನುವ ವಿಚಾರ ಮಾಡಬೇಡಿ. ಆ ರೀತಿ ಸರ್ಕಾರ ಎಂದೂ ನಡೆದುಕೊಂಡಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಇವತ್ತು ಕಾವೇರಿ ನೀರಿನ ಉಪಯೋಗದ ಬಗ್ಗೆ ನಮ್ಮ ಪರಿಸ್ಥಿತಿ ಏನಿದೆ, ಆ ವಿಚಾರವನ್ನು ನಿಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈಗ ಕಾವೇರಿ ಬಗ್ಗೆ ಸರಾಸರಿ ಲೆಕ್ಕವನ್ನು ಹೇಳುತ್ತಿದ್ದೇನೆ. ನಮಗೆ ಕರಾರುವಾಕ್ಕಾದ ಅಂಕಿಗಳು ತಿಳಿಯಲಾರದ್ದರಿಂದ ಕೆಲವು ಅಂಕಿಗಳನ್ನು ಸ್ಥೂಲವಾಗಿ ಹೇಳುತ್ತಿದ್ದೇವೆ. ಅಗ್ರಿಮೆಂಟ್ ಪ್ರಕಾರ ಎಷ್ಟು ನೀರು ಬರಬೇಕಾಗಿದೆ, ನಾವು ಎಷ್ಟು ನೀರನ್ನು ಉಪಯೋಗ ಮಾಡಿಕೊಂಡಿದ್ದೇವೆ, ನಮಗೆ ಇನ್ನೂ ಎಷ್ಟು ನೀರು ಬರಬೇಕಾಗುತ್ತದೆ ಎನ್ನುವುದರ ಬಗ್ಗೆ ಕೆಲವು ಅಂಕಿಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಆದರೂ ಒಂದು ಚಿತ್ರ ಕಾವೇರಿ ನೀರಿನ ಬಗ್ಗೆ ತಮಗೆ ಕೊಡಬೇಕು ಎಂದು ಇಷ್ಟಪಡುತ್ತೇನೆ. ನಮಗೆ ಎಷ್ಟು ಸಮಸ್ಯೆ ಇದೆ ಎನ್ನುವುದು ತಮಗೆ ಗೊತ್ತಾಗಲಿ ಎಂದು ಆ ಚಿತ್ರವನ್ನು ಇಡುತ್ತೇನೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಮದ್ರಾಸ್‌ಗೆ ಸಂಬಂಧಪಟ್ಟ ನೀರು ನಮ್ಮಲ್ಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನೀರು ನಮ್ಮಲ್ಲಿ ಇದೆಯೇ, ಮದ್ರಾಸ್ ಸ್ಟೇಟಿನಲ್ಲಿದೆಯೇ ಎನ್ನುವ ವಾದಕ್ಕೆ ಹೋಗುವುದಿಲ್ಲ. ನೀರಿನ ಅಧಿಕಾರ ಎರಡು ರಾಜ್ಯಗಳಿಗೂ ಇದೆ. ನಾವು ಇವೊತ್ತು ಕರಾರುವಾಕ್ಕಾಗಿ ಹೇಳುವ ಪರಿಸ್ಥಿತಿಯಲ್ಲಿಲ್ಲ ಎಂದು ಹೇಳುತ್ತೇನೆ. 75 ಪರ್ಸೆಂಟು ಡಿಪೆಂಡಬಲಿಟಿ ಹಿಡಿದುಕೊಂಡರ 1924ನೇ ಅಗ್ರಿಮೆಂಟ್‌ಪ್ರಕಾರ ನಮ್ಮ ಬಾರ್ಡರ್‌ನಲ್ಲಿ ಕಾವೇರಿ ನದಿಯಲ್ಲಿ ಹರಿಯುವ ನೀರು ಸರಾಸರಿ 385 ಟಿ.ಎಂ.ಸಿ. ಫೀಟ್ ಎಂದು ಅನೇಕ ಮಾನ್ಯ ಸದಸ್ಯರು ಮಾತನಾಡಿದವರು, ಹೇಳಿದ್ದಾರೆ. 1924ರ ಅಗ್ರಿಮೆಂಟ್ ಮೈಸೂರು ಸರ್ಕಾರಕ್ಕೆ ಅನುಕೂಲ ಆದಂತೆ ಆಗಿಲ್ಲ. ಪ್ರತಿಕೂಲ ಆಗ್ರಿಮೆಂಟ್ ಇದೆ. ಸಾಕಷ್ಟು ಲೋಪದೋಷ ಇವೆ ಎಂದು ಅದರಿಂದ ಹೆಚ್ಚಿನ ಅನಾನುಕೂಲತೆ ಆಗಿದೆ. ಅನುಕೂಲತೆ ಆಗಿಲ್ಲ ಎಂದು ಹೇಳಿದ್ದರೆ, ಅದನ್ನು ಶಬ್ದಶಃ ಒಪ್ಪಿಕೊಳ್ಳುತ್ತೇನೆ. ನಾನು ಅನುಕೂಲತೆ ಆಗಿವೆ ಎಂದು ಹೇಳಿಲ್ಲ. ಅನೇಕ ಸಲ ಮಾತನಾಡುವ ಪ್ರಸಂಗ ಬಂದಾಗ ನಾನು ಅದನ್ನು ಹೇಳಿದ್ದೇನೆ. 1924ರ ಅಗ್ರಿಮೆಂಟ್ ಆದಾಗ ಪರಿಸ್ಥಿತಿ ಏನು ಇತ್ತು ಯಾವ ತರಹ ವಾತಾವರಣ ಇತ್ತು ಎಂದು ವಿಚಾರ ಮಾಡುವುದರಲ್ಲಿ ಏನೂ ಅರ್ಥ ಇಲ್ಲ. ಇದರಿಂದ ನಮಗೆ ಅನುಕೂಲತೆ ಆಗಿದೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಅನಾನುಕೂಲತೆ ಆಗಿದೆ ಎಂದು ತಾವು ನೊಂದ ಮನಸ್ಸಿನಿಂದ ಎಷ್ಟುಮಟ್ಟಿಗೆ ವಿಚಾರ ವ್ಯಕ್ತಪಡಿಸಿದ್ದೀರೋ ಅಷ್ಟೇ ನೊಂದ ಮನಸ್ಸಿನಿಂದ ಅನಾನುಕೂಲತೆ ಆಗಿದೆ ನ್ಯಾಯ ದೊರಕಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇವೊತ್ತು 1924 ರಲ್ಲಿ ಆದ ಅಗ್ರಿಮೆಂಟ್ ಪ್ರಕಾರ ಏನು ಮಾಡಬೇಕೆಂದು ವಿಚಾರ ಮಾಡಬೇಕಾಗಿದೆ. 1924ರ ಅಗ್ರಿಮೆಂಟ್ ಪ್ರಕಾರ 1974ರ ವರೆಗೂ ನೀರು ಉಪಯೋಗ ಮಾಡಿಕೊಳ್ಳುವುದಕ್ಕೆ ಎಷ್ಟರಮಟ್ಟಿಗೆ ಅಧಿಕಾರ ಇದೆ ಎನ್ನುವ ಮಾತನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಲೆಕ್ಕದ ಪ್ರಕಾರ 1974 ರವರೆಗೂ 180 ಟಿ. ಎಂ. ಸಿ. ಫೀಟ್ ನೀರು ಉಪಯೋಗ ಮಾಡಿಕೊಳ್ಳುವುದಕ್ಕೆ ಅಧಿಕಾರ ಇದೆ. ಈ ಅಗ್ರಿಮೆಂಟಿನಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಮೂರು ಷರತ್ತುಗಳು ಇವೆ. ಒಂದು 45 ಟಿ. ಎಂ. ಸಿ ಫೀಟ್ ನೀರು ಕೃಷ್ಣರಾಜಸಾಗರ ನೀರಿನ ಉಪಯೋಗದ ಹೊರತಾಗಿ ಒಂದು ಲಕ್ಷ 10 ಸಾವಿರ ಎಕರೆಗೆ ಅನುಕೂಲ ಮಾಡಿಕೊಳ್ಳುವ ಅಧಿಕಾರ ಈ ಅಗ್ರಿಮೆಂಟ್ ಪ್ರಕಾರ ಇದೆ. ಈ ಒಂದು 45 ಟಿ. ಎಂ. ಸಿ. ಫೀಟ್ ನೀರು ಲೆಕ್ಕಕ್ಕೆ ಹಿಡಿದುಕೊಂಡಿದ್ದೇವೆ. ಸ್ಪಷ್ಟವಾಗಿ ಅಗ್ರಿಮೆಂಟ್‌ನಲ್ಲಿ ಕೃಷ್ಣರಾಜಸಾಗರದ ರಿಜರ್ವಾಯರ್ ನೀರು ಉಪಯೋಗ ಮಾಡಿಕೊಳ್ಳುವ ಅಧಿಕಾರ ಕೊಟ್ಟಿದೆ. 84 ಟಿ. ಎಂ. ಸಿ. ಫೀಟು ನೀರನ್ನು ಉಪಯೋಗ ಮಾಡುತ್ತಾ ಇದ್ದೇವೆ. ಬಿಲೋ ಕೆ. ಆರ್. ಎಸ್. 31 ಟಿ. ಎಂ. ಸಿ. ಫೀಟ್. ಈ ರೀತಿ 116 ಟಿ. ಎಂ. ಸಿ. ಫೀಟ್ ನೀರು ಆಗಲೇ ಉಪಯೋಗ ಮಾಡುತ್ತಾ ಇದ್ದೇವೆ. ಅಗ್ರಿಮೆಂಟ್ ಪ್ರಕಾರ ಮದ್ರಾಸಿನವರು ತಮ್ಮ ಏರಿಯಾದಲ್ಲಿ ತಮ್ಮ ವ್ಯಾಲಿಯಲ್ಲಿ ಎಷ್ಟು ಇರ್ರಿಗೇಷನ್ ಡೆವಲಪ್ ಮಾಡುತ್ತಾರೋ ಅದರ 60 ಪರ್ಸೆಂಟು ಡೆವಲಪ್ ಮಾಡುವ ಅಧಿಕಾರ ನಮಗೆ ಇದೆ. ಇವೊತ್ತು ನಮಗೆ ಗೊತ್ತಾದಹಾಗೆ ಲೋಯರ್ ಭವಾನಿಯಲ್ಲಿ 32 ಟಿ. ಎಂ. ಸಿ. ಫೀಟ್ ನೀರು ಉಪಯೋಗಿಸಿದ್ದಾರೆ. ಅದರ 60 ಪರ್ಸೆಂಟ್ ಎಂದರೆ 19 ಟಿ.ಎಂ.ಸಿ. ಫೀಟು ನೀರು ನಮಗೆ ಬರುತ್ತದೆ. 116 ಟಿ. ಎಂ. ಸಿ. ಫೀಟು ಅಲ್ಲದೆ, 45 ಟಿ. ಎಂ. ಸಿ. ಫೀಟು ಉಪಯೋಗ ಮಾಡಿಕೊಳ್ಳುವುದಕ್ಕೆ ಅಗ್ರಿಮೆಂಟ್‌ನಲ್ಲಿ ಅವಕಾಶಇದೆ ಮತ್ತು ಆಫ್‌ಸೆಟ್ ರಿಜರ್ವಾಯರ್ 19 ಟಿ. ಎಂ. ಸಿ. ಫೀಟ್ ಈ ರೀತಿ ತೆಗೆದುಕೊಂಡರೆ 180 ಟಿ. ಎಂ. ಸಿ. ಫೀಟ್ ಅಧಿಕಾರ ಇದೆ. 180 ಟಿ. ಎಂ. ಸಿ. ಫೀಟ್ ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಂಡಿದ್ದೇವೆ, ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ ಎನ್ನುವುದಕ್ಕೆ ಅಂಕಿಸಂಖ್ಯೆಗಳನ್ನು ನಾನು ತಮಗೆ ಕೊಡುತ್ತೇನೆ. ಕಮಿಟೆಡ್ ವರ್ಕ್ಸ್ ಇಷ್ಟು ಪ್ರಾರಂಭ ಮಾಡಿದ್ದೇವೆ. ಅಪ್ ಟು ಕೆ. ಆರ್. ಎಸ್. ಲಕ್ಷಣತೀರ್ಥ 1.2 ಟಿ. ಎಂ. ಸಿ. ಫೀಟ್, ಚಿಕ್ಕಹೊಳೆ 0.5 ಟಿ. ಎಂ. ಸಿ. ಫೀಟ್, ಹಾರಂಗಿ 19.0 ಟಿ. ಎಂ. ಸಿ. ಫೀಟ್, ಹೇಮಾವತಿ 30.0 ಟಿ. ಎಂ. ಸಿ. ಫೀಟ್ ಒಟ್ಟು 50.7 ಟಿ. ಎಂ. ಸಿ. ಫೀಟ್ ಅಪ್ ಟು ಕೆ. ಆರ್. ಎಸ್ ಅಂಡ್ ಬಿಲೋ ಕೆ. ಆರ್. ಎಸ್. ಕಬಿನಿ 25.0 ಟಿ.ಎಂ.ಸಿ. ಫೀಟ್, ಸುವರ್ಣಾವತಿ 2.7 ಟಿ. ಎಂ. ಸಿ. ಫೀಟ್, ಹೆಬ್ಬಹಳ್ಳ 0.3 ಟಿ. ಎಂ. ಸಿ. ಫೀಟ್ ಒಟ್ಟು 28.0 ಟಿ. ಎಂ. ಸಿ. ಫೀಟ್ ಹೀಗೆ ಕೆ ಆರ್. ಎಸ್. ಅಪ್ ಟು ಕೆ. ಆರ್ ಎಸ್. ಅಂಡ್ ಬಿಲೋ ಕೆ. ಆರ್. ಎಸ್. 78.7 ಟಿ.ಎಂ.ಸಿ. ಫೀಟ್ ಅದರಲ್ಲಿ ಒಂದು ಪ್ರಶ್ನೆ ತಮ್ಮ ಮುಂದೆ ಸ್ಪಷ್ಟಪಡಿಸುತ್ತೇನೆ. 180 ಟಿ. ಎಂ. ಸಿ. ಫೀಟ್ ಅಗ್ರಿಮೆಂಟ್ ಪ್ರಕಾರ ನೀರು ಏನು ಇದೆ ಎಂದು ಹೇಳುತ್ತಾ ಇದ್ದೇನೆ. ಅದು ಷೆಡ್ಯೂಲ್ಡ್ ರಿವರ್ ಮತ್ತು ನಾನ್ ಷೆಡ್ಯೂಲ್ಡ್ ರಿವರ್ಸ್ ಎಂದು ಹೇಳುತ್ತಾ ಇಲ್ಲ. ಕಮಿಟೆಡ್ ವರ್ಕ್ಸ್ ಏನು ಇದೆ ಅದರಲ್ಲಿ ಷೆಡ್ಯೂಲ್ಡ್ ರಿವರ್ ಇದೆ, ನಾನ್ ಷೆಡ್ಯೂಲ್ಡ್ ರಿವರ್ಸ್ ಇದೆ. ಒಟ್ಟಿಗೆ 116+78 ಟಿ.ಎಂ.ಸಿ. ಫೀಟ್ ಆಗುತ್ತದೆ. ಲೆಕ್ಕ ಹಾಕಿದರೆ ನಾನ್ ಷೆಡ್ಯೂಲ್ಡ್ ರಿವರ್ ತೆಗೆಯಬೇಕಾದರೆ 44 ಟಿ. ಎಂ. ಸಿ. ಫೀಟ್ ತೆಗೆಯಬೇಕು ; ಅಂದರೆ ಹಾರಂಗಿ 19 ಟಿ. ಎಂ. ಸಿ. ಫೀಟ್ ಮತ್ತು ಕಬಿನಿ 25 ಟಿ. ಎಂ. ಸಿ.

ಫೀಟ್ ಹೀಗೆ ಒಟ್ಟು 44 ಟಿ. ಎಂ. ಸಿ. ಫೀಟ್ ತೆಗೆದರೂ ಇನ್ನೂ ಬಹಶಃ 34 ಟಿ. ಎಂ. ಸಿ. ಫೀಟ್ ಬರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—78 ರಲ್ಲಿ 44 ತೆಗೆಯಬೇಕು.

ಶ್ರೀ ವೀರೇಂದ್ರ ಪಾಟೀಲ್.—34+116 ಎಂದರೆ 150 ಟಿ. ಎಂ. ಸಿ. ಫೀಟ್ ಈಗಾಗಲೇ ಉಪಯೋಗ ಮಾಡಿಕೊಂಡಿದ್ದೇವೆ. ಈಗ ಪ್ರಶ್ನೆ ಏನು ಎಂದರೆ, ಇನ್ನೂ 30 ಟಿ. ಎಂ. ಸಿ. ಫೀಟ್ ಕಮಿಟೆಡ್ ಉಪಯೋಗ ಮಾಡಬೇಕಾಗಿದೆ. ಕೆಲವು ಷೆಡ್ಯೂಲ್ಡ್ ರಿವರ್ಸ್‌ಗೆ ಕೆಲವು ಮಾನ್ಯ ಸದಸ್ಯರು ಹೇಳಿದ ಹಾಗೆ 1974 ರವರೆಗೂ ಯಾವ ತರಹ ಆತಂಕವೂ ಇಲ್ಲ. ನಾನ್ ಷೆಡ್ಯೂಲ್ಡ್ ರಿವರ್ಸ್‌ಮೇಲೆ ಏನಾದರೂ ಕಟ್ಟಬೇಕಾದರೆ, ಮದ್ರಾಸ್ ಸರ್ಕಾರದ ಕನ್‌ಕರೆನ್ಸ್ ಬೇಕು ಎಂಬ ಪ್ರಶ್ನೆ ಅಲ್ಲ. ಅದನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಒಂದು ವಿಚಾರ ಸ್ಪಷ್ಟಪಡಿಸಬೇಕಾಗಿದೆ. ಷೆಡ್ಯೂಲ್ಡ್ ರಿವರನ್ನು ಆದಷ್ಟು ತೀವ್ರವಾಗಿ ಉಪಯೋಗಿಸಿ, ನಾನ್ ಷೆಡ್ಯೂಲ್ಡ್ ರಿವರ್ಸ್, ಅಗ್ರಿಮೆಂಟ್‌ನಲ್ಲಿ ಇಲ್ಲ. ಅದು ನಮ್ಮ ಪ್ರಾಪರ್ಟಿ ಇದೆಎಂದು ಆದರೂ ಮಾಡಬಹುದು ಎಂಬ ಪ್ರಶ್ನೆ ಇಲ್ಲ. ಷೆಡ್ಯೂಲ್ಡ್ ರಿವರ್ಸ್ ನೀರು ಉಪಯೋಗ ಮಾಡಿಕೊಳ್ಳುವುದರಲ್ಲಿ ಎಷ್ಟು ಉತ್ಸಾಹ ತೋರಿಸಬೇಕೋ ಅಷ್ಟೇ ಉತ್ಸಾಹ ನಾನ್ ಷೆಡ್ಯೂಲ್ಡ್ ರಿವರ್‌ನಲ್ಲಿ ತೋರಿಸಬೇಕು. 1974 ಒಳಗೆ ನಾನ್ ಷೆಡ್ಯೂಲ್ಡ್ ರಿವರ್ಸ್ ಮೇಲೆ ಪ್ರಾಜೆಕ್ಟ್ ಕಟ್ಟಿ ನೀರು ಉಪಯೋಗ ಮಾಡಿಕೊಳ್ಳಲಾರದೇ ಹೋದರೆ, ಅಗ್ರಿಮೆಂಟ್ ರಿವಿಷನ್ ಮಾಡುವ ವೇಳೆಗೆ ಏನು ಪರಿಸ್ಥಿತಿ ಬರುತ್ತದೋ ಹೇಳುವುದಕ್ಕಾಗುವುದಿಲ್ಲ. ಇಷ್ಟೊತ್ತು ನಾನ್ ಷೆಡ್ಯೂಲ್‌ನಲ್ಲಿ ತೆಗೆದುಕೊಳ್ಳಿ ಎಂದು ಮದ್ರಾಸಿನವರು ಒತ್ತಾಯ ಮಾಡಬಹುದು. ನಮ್ಮ ನಿಲುವು ಏನು ಇದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಅಂಥ ಪರಿಸ್ಥಿತಿ ಕೂಡ ಬರಬಹುದು. ಷೆಡ್ಯೂಲ್ಡ್‌ರಿವರ್ ಆಗಲಿ, ನಾನ್ ಷೆಡ್ಯೂಲ್ಡ್ ರಿವರ್ ಆಗಲಿ ಇರುವಂಥ ನೀರು ಉಪಯೋಗ ಮಾಡಿಕೊಳ್ಳುವುದಕ್ಕೆ ಎಲ್ಲಾ ರೀತಿಯಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತಾ ಇದ್ದೇನೆ. ಅದಕ್ಕಾಗಿ ಷೆಡ್ಯೂಲ್ಡ್ ಬೇರೆ ನಾನ್ ಷೆಡ್ಯೂಲ್ಡ್ ಬೇರೆ ಲೆಕ್ಕ ಹಾಕಿಲ್ಲ. ಈಗಾಗಲೇ ಕಮಿಟೆಡ್ ಮಾಡಿರುವುದು 78.7 ಟಿ.ಎಂ.ಸಿ.ಫೀಟ್. ಅಲ್ಲಿಂದ 116 ಟಿ. ಎಂ.ಸಿ. ಫೀಟ್ ಉಪಯೋಗ ಮಾಡಿಕೊಂಡಿದ್ದೇವೆ. ಪ್ರಪೋಸ್‌ಮಾಡಿದ ವರ್ಕ್ಸ್ 4ನೇ ಮತ್ತು 5ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಎಂದರೆ ಅಗ್ರಿಮೆಂಟ್ ಪೀರಿಯಡ್‌ನಲ್ಲಿ ಮುಗಿಯುವ ಪರಿಸ್ಥಿತಿಯಲ್ಲಿದೆ.

ಈಗ ನಾಲ್ಕನೆ ಮತ್ತು ಐದನೇ ಯೋಜನೆಗಳಲ್ಲಿ ಪ್ರೊಪೋಸ್ ಮಾಡಿದಂಥವುಗಳನ್ನು ನಾನು ತಮ್ಮ ಮುಂದಿಡಬಯಸುತ್ತೇನೆ.

1 ಕೆ. ಆರ್. ಎಸ್. ಮೇಲ್ಗಡೆ	ಟಿ.ಎಂ.ಸಿ. ಎಫ್.ಟಿ.	
ಕಂಬದಕಡ	6.0	
ವೊಟೆಹೊಳೆ	1·8	
ಯಗಚಿ	6·8	
ತಾರಕ	4·2	
ಒಟ್ಟು ...	18·8	ಟಿ.ಎಂ.ಸಿ. ಎಫ್.ಟಿ.
2 ಕೆ. ಆರ್. ಎಸ್. ಕೆಳಗಡೆ		
ಕಬಿನಿ (ಮೀಡಿಯಂ)	4.4	
ಸಿರೀಸ್	1.1	
ಕೊಳ್ಳೆಗಾಲ ಸಿರೀಸ್ (ಗುಂಡ್ಲು)	4·5	
ಅರ್ಕಾವತಿ ಸಿರೀಸ್	4·6	
ಮುಂದಿನ ಎಕ್ಸ್‌ಟೆನ್‌ಷನ್	5·0	
ಒಟ್ಟು ...	19·6	
ಹೀಗೆ ಎರಡರದ್ದೂ ಒಟ್ಟು ...	38·4	ಟಿ.ಎಂ.ಸಿ.ಎಫ್.ಟಿ.

ಈಗ ಉಪಯೋಗಿಸಿಕೊಂಡಿರುವುದು : 116 ಟಿ. ಎಂ. ಸಿ. ಎಫ್. ಟಿ. ಇನ್ನೂ ಉಪಯೋಗಿಸಿಕೊಳ್ಳಲು ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದು ಏತಕ್ಕೆ ಹೇಳು

(ಶ್ರೀ ವೀರೇಂದ್ರ ಪಾಟೀಲ್)

ತ್ತಿದ್ದೇನೆಂದರೆ, ಮಾನ್ಯ ಮಿತ್ರರನೇಕರು, ನಾವು ಏನೂ ಮಾಡುತ್ತಿಲ್ಲ ಸುಮ್ಮನೆ ಕುಳಿತಿದ್ದೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಈ ಅಂಕಿಅಂಶಗಳನ್ನು ತಮ್ಮ ಮುಂದೆ ಇಡಬೇಕಾಯಿತು. ಪ್ರತಿಯೊಂದು ಯೋಜನೆಯನ್ನೂ ಚೆನ್ನಾಗಿ ವಿಚಾರ ಮಾಡಿ ಯಾವ ಯಾವ ಯೋಜನೆಗಳನ್ನು ತೆಗೆದುಕೊಳ್ಳಬೇಕು, ಯಾವುದನ್ನು ನಾಲ್ಕನೆಯ ಯೋಜನೆಯಲ್ಲಿ ಪ್ರಾರಂಭ ಮಾಡಬೇಕು, ಯಾವುದನ್ನು 5ನೇ ಯೋಜನೆಯಲ್ಲಿ ಪ್ರಾರಂಭ ಮಾಡಬೇಕು, ಯಾವುದನ್ನು ತೆಗೆದುಕೊಂಡು ನಮಗೆ ಸಂಪೂರ್ಣ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೇವೆ ಎಂದು ತಮಗೆ ಇಲ್ಲಿ ಸ್ಪಷ್ಟಪಡಿಸುತ್ತೇನೆ. ಈ ವಿಚಾರ ಎಲ್ಲಾ ಹೇಳಿದೆ. ಈಗ ಇದಕ್ಕೆ ಬೇಕಾಗಿರುವ ವಿಚಾರ ತಮ್ಮ ಮುಂದೆ ಹೇಳುತ್ತೇನೆ. ನಾವು ಈಗಾಗಲೇ 116 ಟಿ.ಎಂ.ಸಿ.ಎಫ್.ಟಿ. ಉಪಯೋಗ ಮಾಡಿಕೊಂಡಿದ್ದೇವೆ. ಅದರ ಬಗ್ಗೆ ಹೇಳುವುದಿಲ್ಲ. ಇನ್ನು ಪ್ರೊಪೋಸ್ಡ್ ಮತ್ತು ಕಮಿಟೆಡ್ ಅದರ ವಿಚಾರ ಹೇಳುತ್ತೇನೆ.

Projects started after K.R.S.

		Est. Cost in Crores.	*Outlay in Crores.*
Kabini	...	18·00	3·00
Nugu	...	3·00	3.00
Chikhole	...	1·00	0·50
Hebballa etc.	...	—	0·50
Harangi	...	11·00	0·05
Hemavathi	...	16·00	0·10
Swarnavathi, Lakshmanathirtha.		3·00	0·02
	Total	52·00	7·17

ಇದರ ಜೊತೆಗೆ ಸ್ಪಿಲ್ ಓವರ್ ಕೆಲಸಗಳು ಈ ರೀತಿ ಇದೆ.

		in crores
spill Over Schemes.	Rs. +52-00—7.00	45·00
New Schemes proposed.		21·00
		66·00

to utilise 230 TMC. ft.

New Schemes :

1. Tarka	...	...	2·50
2. Yagachi	...	...	7·00
3. Arkavathi	...	...	1·50
4. Gondal	...	...	2·00
5. Medium Projects like Tatteballi etc.		...	1·00
6. Machenabele	...	...	2·50
7. Udurborehalla	...	...	1·50
8. Keelara Pick-up	...	...	1·00
9. Kambadakada	...	...	2·00
	Total	...	21·00

ಶ್ರೀ ಬಿ. ಚೆನ್ನಬೈರೇ ಗೌಡ.—ತಾವು ಹೇಳುತ್ತಿರುವುದು ಎಸ್ಟಿಮೇಟೆಡ್ ಕಾಸ್ಟ್!

ಶ್ರೀ ವೀರೇಂದ್ರ ಪಾಟೀಲ್.—ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಯಾವ ಯಾವ ಪ್ರೊಜೆಕ್ಟುಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ, ಮುಂದೆ ಯಾವುದನ್ನು ತೆಗೆದುಕೊಳ್ಳುತ್ತೇವೆಂಬುದನ್ನು ಹೇಳುತ್ತಿದ್ದೇನೆ. ಈಗ ಮುಖ್ಯ ಪ್ರಶ್ನೆಯು ದುಡ್ಡಿನ ಪ್ರಶ್ನೆ. ಈಗ ತೆಗೆದುಕೊಂಡಂಥ ಯೋಜನೆಗಳಿಗೆ ಒಟ್ಟು ಅಂದಾಜು 52 ಕೋಟಿ ರೂಪಾಯಿ ಖರ್ಚಾಗುತ್ತದೆ. ಅದರಲ್ಲಿ ಕೇವಲ 7·17 ಖರ್ಚಾಗಿದೆ. ಇನ್ನೂ 45 ಕೋಟಿ ರೂಪಾಯಿ ಬೇಕಾಗುತ್ತದೆ. ಇದಲ್ಲದೆ ಇನ್ನೂ ಹೊಸದಾದ ಕೆಲವು ಯೋಜನೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ 21 ಕೋಟಿ ರೂಪಾಯಿ ಬೇಕಾಗುತ್ತದೆ. ಹೀಗೆ ಇನ್ನೂ 66 ಕೋಟಿ ರೂಪಾಯಿ ಖರ್ಚು ಮಾಡಿದರೆ ಕಾವೇರಿ ವ್ಯಾಲಿಯಲ್ಲಿ 230 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಿಕೊಳ್ಳಬಹುದು. ಇದು ನಾನು ಕೇಳುತ್ತಿರುವುದು 1965—66ರ ಕೊನೆಯುವರೆಗೆ ಬೇಕಾಗತಕ್ಕಂಥ ಹಣ. ಇದನ್ನು ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ, ಮುಂದಿನ ನಾಲ್ಕನೇ ಮತ್ತು ಐದನೇ ಯೋಜನೆಯಲ್ಲಿ, ಅಂದರೆ, 1976ರ ವರೆಗೆ ರಾಜ್ಯ ಸರ್ಕಾರವು ಕಾವೇರಿ ವ್ಯಾಲಿಗೆ ಖರ್ಚು ಮಾಡಬೇಕಾಗಿರುವುದು, 80 ಕೋಟಿ ರೂಪಾಯಿ ; ಮತ್ತು ಅಪ್ಪರ್ ಕೃಷ್ಣಾ ವ್ಯಾಲಿಯನ್ನು ಬಿಟ್ಟು ಕೃಷ್ಣ ಪ್ರೊಜೆಕ್ಟಿಗೆ 1976 ಅಂತ್ಯದ ವರೆಗೆ ಬೇಕಾಗುವ ಹಣ 80 ಕೋಟಿ ರೂಪಾಯಿ. ಹೀಗೆ ಒಟ್ಟು 160 ಕೋಟಿ ರೂಪಾಯಿಗಳನ್ನು ಈ 10 ವರ್ಷಗಳಲ್ಲಿ ನಮ್ಮ ನೀರಾವರಿಗೋಸ್ಕರ ಖರ್ಚು ಮಾಡಬೇಕಾಗುತ್ತದೆ. ಸಾಧಾರಣ ಒಂದು ವರ್ಷಕ್ಕೆ ಅಂದಾಜು 16 ಕೋಟಿಯಷ್ಟು ಖರ್ಚು ಮಾಡಬೇಕಾಗುತ್ತದೆ. ಈ ವಿಚಾರವನ್ನು ತಮ್ಮ ಮುಂದೆ ಸ್ಪಷ್ಟಪಡಿಸುತ್ತಿದ್ದೇನೆ. ಇವೆಲ್ಲಾ ಅಪ್ಪರ್ ಕೃಷ್ಣಾವನ್ನು ಬಿಟ್ಟು. ಆದರೆ ಇವತ್ತು 80 ಕೋಟಿ ನಾಲ್ಕನೆಯ ಯೋಜನೆಯಲ್ಲಿ ಇಟ್ಟಿದ್ದರೂ ಕೂಡ ಮೊದಲನೆ ಯೋಜನೆಯಲ್ಲಿ ಇಟ್ಟದ್ದು ಏನೂ ಸಾಕಾಗಿಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಒಬ್ಬ ಮಾನ್ಯ ಸದಸ್ಯರು ಹೇಳಿದರು, ಐದು ಕೋಟಿ ರೂಪಾಯಿಯನ್ನು ಒಂದು ಕಡೆ ಮಾತ್ರ ಖರ್ಚು ಮಾಡಿದ್ದಾರೆ, ಮಿಕ್ಕಿದ್ದಕ್ಕೆಲ್ಲಾ ಕಡಿಮೆಯಾಗಿದೆ ಎಂದು. ಅದಕ್ಕೆ ನಾನೇನಾದರೂ ಹೇಳುತ್ತೇನೆ, ಯಾವ ರೀತಿ ಹಾರಂಗಿ ಹೇಮಾವತಿಗೆ ಖರ್ಚು ಮಾಡಿದ್ದೇವೆಯೋ ಅದೇ ರೀತಿ ಬೇರೆ ಯೋಜನೆಗಳಿಗೂ ಖರ್ಚು ಮಾಡುತ್ತೇವೆ. ಈಗ ತುಂಗಾ ಮತ್ತು ಭದ್ರಾ ಪ್ರೊಜೆಕ್ಟುಗಳಿವೆ. ಅಲ್ಲಿ ರಿಸರ್ವಾಯರಿಯಲ್ಲಿ ನೀರು ಇದೆ. ಇದನ್ನು ಸರಿಯಾಗಿ ಹಂಚಬೇಕಾದರೆ, ಅದಕ್ಕೆ ತುಂಬಾ ಹಣ ಖರ್ಚು ಮಾಡಬೇಕಾಗುತ್ತದೆ. ಇದನ್ನೆಲ್ಲಾ ಮಾಡದೆ ಹೋದರೆ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ; ಮತ್ತು ಅದರ ನೀರನ್ನು ಉಪಯೋಗಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಆ 5 ಕೋಟಿ ರೂಪಾಯಿಯಲ್ಲಿ ಯಾವುದು ಮುಗಿಯಲಿಲ್ಲವೋ ಅವುಗಳಿಗೆ ಪ್ರಾಶಸ್ತ್ಯ ಕೊಟ್ಟು ಖರ್ಚು ಮಾಡಬೇಕಾಗುತ್ತದೆ. ಇದರಿಂದ ಎರಡು ಪ್ರೊಜೆಕ್ಟುಗಳಿಗೆ ನಾಲ್ಕು ಕೋಟಿ ಖರ್ಚು ಮಾಡಬೇಕೆಂದು ವಿಚಾರ ಮಾಡಿಕೊಂಡಿದ್ದೇವೆ. ಇದರಿಂದ ಎಲ್ಲರಿಗೂ ಸಮಾಧಾನವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಆದಷ್ಟು ತೀವ್ರವಾಗಿ ಅಗತ್ಯತೆಯನ್ನು ನೋಡಿಕೊಂಡು ಖರ್ಚು ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಮಸ್ಯೆಯನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ. ಇದಕ್ಕೆ ನಾಲ್ಕೈದು ಕೋಟಿ ರೂಪಾಯಿ ಎಲ್ಲಿಯೂ ಸಾಕಾಗುವುದಿಲ್ಲ. ಮೊನ್ನೆ ಪ್ಲಾನಿಂಗ್ ಕಮಿಶನಿನ ಮಂತ್ರಿಗಳಾದ ಶ್ರೀ ಅಶೋಕ ಮೆಹತಾರವರು ಹೇಳಿದರು. ಇವತ್ತು ಅನೇಕ ಪ್ರೊಜೆಕ್ಟುಗಳನ್ನು ತೆಗೆದುಕೊಂಡರೆ ಅದರಿಂದ ಲಾಭ ಬರುವುದಿಲ್ಲ, ಒಂದು ರಾಷ್ಟ್ರೀಯ ಅಭಿವೃದ್ಧಿಯಿಂದ ಒಂದು ಮುಗಿದ ನಂತರ ಒಂದನ್ನು ತೆಗೆದುಕೊಳ್ಳಬೇಕೆಂದು ನಾನಾದರೂ ಹೇಳುತ್ತೇನೆ, ಅದರಿಂದ ನಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಅದರಿಂದ ನಮಗೆ ಏನು ಫಲಪ್ರದವಾದ ಫಲಿತಾಂಶ ಬರಲಿಕ್ಕಿಲ್ಲವೆಂದು ನಮ್ಮ ಅಭಿಪ್ರಾಯ. ಇವತ್ತಿನ ದಿವಸ ನಮ್ಮ ಈ ತುಂಗಾ ಮತ್ತು ಭದ್ರಾ ಈ ಎರಡು ಯೋಜನೆಗಳ ನೀರನ್ನು ಇಷ್ಟು ವರ್ಷವಾದರೂ ಪೂರ್ತಿಯಾಗಿ ಉಪಯೋಗಮಾಡಲಾಗಲಿಲ್ಲ. ಇದನ್ನು ಒಂದು ರಾಷ್ಟ್ರೀಯ ದೃಷ್ಟಿಯಿಂದ, ಜನಗಳ ಹಿತದೃಷ್ಟಿಯಿಂದ, ಬೇರೆ ಯೋಜನೆಗಳಿಗಿಂತಲೂ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಅದರ ನೀರನ್ನು ಉಪಯೋಗಿಸಿಕೊಳ್ಳತಕ್ಕದ್ದು ನಮ್ಮ ಆದ್ಯ ಕರ್ತವ್ಯವಾಗಿದೆ. ಆ ನೀರನ್ನು ಉಪಯೋಗ ಮಾಡಿಕೊಳ್ಳುವುದು ಬಹಳ ಮಹತ್ವದ ಪ್ರಶ್ನೆ ಇದೆ. ಅದು ಅತ್ಯಂತ ಅವಶ್ಯವಾದದ್ದು ಎಂದು ನಾವು ಕೇಂದ್ರ ಸರ್ಕಾರದವರಿಗೆ ಹೇಳಿದ್ದೇವೆ. ಆ ವಿಚಾರದಲ್ಲಿ ಒಂದು ಪ್ರಗತಿಯನ್ನು ಸಾಧಿಸಲು ಮುಂದಕ್ಕೆ ಹೋಗುವುದಕ್ಕೆ ನಾವು ತಯಾರಾಗಿದ್ದೇವೆ. ಆ ನದಿಯ ನೀರಿನಲ್ಲಿ ನಮಗೆ ನ್ಯಾಯವಾಗಿ ಬರಬೇಕಾದ ನೀರಿನ ಭಾಗವು ನಮ್ಮ ಕೈಬಿಟ್ಟು ಹೋಗುತ್ತಿದೆ. ಆದ್ದರಿಂದ ಆ ನೀರಿನಲ್ಲಿ ಮೈಸೂರಿಗೆ ನ್ಯಾಯವಾಗಿ ಬರಬೇಕಾದ ಭಾಗವನ್ನು ದೊರಕಿಸಿಕೊಡಲು ಒಂದು ತಜ್ಞರ ಕಮಿಟಿಯನ್ನು ನೇಮಕ ಮಾಡಬೇಕೆಂದು ನಾವು ಕೇಂದ್ರ ಸರ್ಕಾರದವರಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ಇವೊತ್ತು, ನಾವು ಅನೇಕ ಯೋಜನೆಗಳನ್ನು ಸ್ಪ್ರೆಡ್ ಮಾಡಿದ್ದೇವೆ. ಯೋಜನೆಗಳನ್ನು ಹರಡಿದ್ದೇವೆ. ಆ ಬಗ್ಗೆ ಆಸಕ್ತಿಯನ್ನು ತೆಗೆದುಕೊಂಡಿದ್ದೇವೆ. ನಿಜ ಒಪ್ಪಿಕೊಳ್ಳುತ್ತೇನೆ. ಗತ್ಯಂತರವಿಲ್ಲ ಎಂದು ಈ ಸಂದರ್ಭದಲ್ಲಿ ತಮ್ಮ ಮುಂದೆ ಸ್ಪಷ್ಟಪಡಿಸುತ್ತೇನೆ.

(ಶ್ರೀ ವೀರೇಂದ್ರ ಪಾಟೀಲ್)

ಇನ್ನೊಂದು ವಿಷಯ. ಒಬ್ಬರು ಮಾನ್ಯ ಸದಸ್ಯರು ಒಂದು ಮಾತನ್ನು ಹೇಳಿದರು. ಅದೇನೆಂದರೆ, ಮೊದಲು ಒಂದು ಪ್ರಾಜೆಕ್ಟ್‌ನ ಕೆಲಸವನ್ನು ತೆಗೆದುಕೊಂಡು ಮುಗಿಸಿ, ಆಮೇಲೆ ಅದರಿಂದ ರಿಟರ್ನ್ ಬಂದಮೇಲೆ ಇನ್ನೊಂದು ಪ್ರಾಜೆಕ್ಟ್ ಕೆಲಸವನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಅದು ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನ ತಾವೇ ಯೋಚನೆ ಮಾಡಬೇಕಾಗಿದೆ.

ಆಮೇಲೆ ಶ್ರೀಮಾನ್ ದೇವೇಗೌಡರು ಮತ್ತು ವಿರೋಧ ಪಕ್ಷದ ನಾಯಕರು ಹೇಳಿದರು, ಅನೇಕ ಬಾಬುಗಳಲ್ಲ ಹೆಚ್ಚು ಖರ್ಚಾಗುತ್ತಿದೆ. ಅದನ್ನು ಡೈವರ್ಟ್ ಮಾಡಿ ಇರಿಗೇಷನ್ ಪ್ರಾಜೆಕ್ಟಿಗೆ ಉಪಯೋಗಿಸಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆದರೆ ಅದರಲ್ಲಿ ಅವಕಾಶ ಬಹಳ ಕಡಿಮೆ ಇದೆ ಎಂದು ನಾನು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಇವೊತ್ತು ವಿದ್ಯಾ ಖಾತೆಗೆ 29-30 ಕೋಟಿ ರೂಪಾಯಿ ಖರ್ಚಾಗುತ್ತಿದೆ. ಅದನ್ನು 25 ಕೋಟಿಗೆ ಇಳಿಸಿ.

ಶ್ರೀ ವೀರೇಂದ್ರ ಪಾಟೀಲ್.—ಇವೊತ್ತು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗುತ್ತದೆ. ಅದು ಬಹಳ ಕಡಿಮೆ ಅವಕಾಶ. ಅದರಲ್ಲಿ ಎಷ್ಟು ಕಟ್ ಮಾಡಿ ಇರಿಗೇಷನ್ನಿಗೆ ಹಾಕಿಕೊಳ್ಳುವುದಕ್ಕೆ ಸಾಧ್ಯವಿದೆಯೋ ನಾವು ಅಷ್ಟೂ ಪ್ರಯತ್ನ ಮಾಡುತ್ತೇವೆ. ಆಮೇಲೆ ಕಣ್ಣುಮುಚ್ಚಿಕೊಂಡು ಯೋಜನೆಗಳನ್ನು ತಯಾರು ಮಾಡುತ್ತಿದ್ದಾರೆ, ಇರಿಗೇಷನ್ನಿಗೆ ಸ್ವಲ್ಪ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಶ್ರೀ ಬಸಪ್ಪನವರು ಹೇಳಿದರು. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇರಿಗೇಷನ್ ಮತ್ತು ಪವರ್ ಪ್ರಾಜೆಕ್ಟಿಗೆ 41 ಪರ್ಸೆಂಟ್ ಹಣವನ್ನು ಖರ್ಚುಮಾಡುತ್ತೇವೆ. ಮತ್ತು ಅಗ್ರಿಕಲ್‌ಚರಲ್ ಹಾಗೂ ಕಮ್ಯೂನಿಟಿ ಡೆವಲಪ್‌ಮೆಂಟ್ ಯೋಜನೆಗೆ ಸೇಕಡಾ 28ರಷ್ಟು ಹಣವನ್ನು ಖರ್ಚುಮಾಡಲು ಉದ್ದೇಶಿಸಲಾಗಿದೆ. ಇನ್ನು ಇದರಲ್ಲಿ ಹೆಚ್ಚು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಸೋಷಿಯಲ್ ಸರ್ವೀಸಿಗೆ 20 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಕೈಗಾರಿಕೆಗೋಸ್ಕರ ಏಳು ಪರ್ಸೆಂಟ್ ಹಣವನ್ನು ಒದಗಿಸಲಾಗಿದೆ. ಟ್ರಾನ್ಸ್‌ಪೋರ್ಟ್ ಮತ್ತು ಕಮ್ಯುನಿಕೇಷನ್ ಗೋಸ್ಕರ ಏಳು ಪರ್ಸೆಂಟ್ ಹಣವನ್ನು ಒದಗಿಸಿದೆ. ಮಿಸಲೇನಿಯಸ್‌ಗಾಗಿ ಮೂರು ಪರ್ಸೆಂಟ್ ಹಣವನ್ನು ಒದಗಿಸಲಾಗಿದೆ. 23 ಕೋಟಿ ರೂಪಾಯಿಗಳು ಸ್ಪಿಲ್ ಓವರ್ ಕೆಲಸಕ್ಕೆ ಬೇಕಾಗುತ್ತದೆ. ಎರಡನೇ ಯೋಜನೆ ಮತ್ತು ಮೂರನೇ ಯೋಜನೆಯಲ್ಲಿ ಪ್ರಾರಂಭಮಾಡಿರತಕ್ಕ ಕೆಲಸ ಕಾರ್ಯಗಳನ್ನು ಮುಗಿಸುವುದಕ್ಕೆ ನಾಲ್ಕನೇ ಯೋಜಯಲ್ಲಿ 80-90 ಪರ್ಸೆಂಟ್ ಹಣವನ್ನು ಒದಗಿಸಲು ಪ್ರಾವಿಜನ್ ಮಾಡಿದ್ದೇವೆ. ಇದರಲ್ಲಿ ಖೋತಾ ಮಾಡಿ ಕಟ್ ಮಾಡುವುದಕ್ಕೆ ಸ್ವಲ್ಪ ಮಟ್ಟಿಗೆ ಅವಕಾಶ ಇದ್ದರೆ ಅದನ್ನು ನಾವು ವಿಚಾರಮಾಡುತ್ತೇವೆ. ಆ ಹಣವನ್ನು ನೀರಾವರಿಗೆ ಡೈವರ್ಟ್ ಮಾಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ನಾವು ವಿಚಾರ ಮಾಡುತ್ತೇವೆ. ಪವರ್ ಪ್ರಾಜೆಕ್ಟ್ ಸಲುವಾಗಿ ನಾಲ್ಕನೆಯ ಪಂಚವಾರ್ಷಿಕ ಯೋಜಯಲ್ಲಿ 106 ಕೋಟಿ ರೂಪಾಯಿಗಳನ್ನು ಒದಗಿಸಿದೆ. ಅದರಲ್ಲಿ ಬೇಕಾದರೆ ಸ್ವಲ್ಪ ಖೋತಾ ಮಾಡಿ ಆ ಹಣವನ್ನು ನೀರಾವರಿ ಯೋಜನೆಗೆ ಉಪಯೋಗಿಸಿಕೊಳ್ಳಬಹುದು. ಅದೂ ಕೂಡ ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಅದರಲ್ಲಿಯೂ ಸಹ ಸ್ಕೋಪ್ ಬಹಳ ಕಡಿಮೆ ಇದೆ. ಈಗ ಶರಾವತಿಯಿಂದ ನಮಗೆ ಎರಡು ಯೂನಿಟ್‌ಗಳಿಂದ ವಿದ್ಯುಚ್ಛಕ್ತಿ ಬಂದಿದೆ. ಇನ್ನು ಎಂಟು ಯೂನಿಟ್‌ಗಳು ಬರಬೇಕು. ಅದಕ್ಕೆ ಬೇಕಾದ ಮೆಷನರಿಯನ್ನ ಕೊಂಡುಕೊಳ್ಳಲು ಹಣವನ್ನು ತೆಗೆದಿಡಬೇಕು. ಮೆಷನರಿಯನ್ನು ಪರದೇಶದಿಂದ ತರುವುದಕ್ಕೆ ದುಡ್ಡು ಇಲ್ಲ ಎಂದು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದನ್ನ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಶರಾವತಿ ಯೋಜನೆಯನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿ ಮುಗಿಸಬೇಕೆಂದು ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಅಲ್ಲಿ ಪವರ್ ಜನರೇಟರುಗಳನ್ನು ಸ್ಥಾಪನೆ ಮಾಡುವುದಕ್ಕೆ ಮತ್ತು ಪವರ್ ಕನ್‌ಸ್ಯೂಮ್ ಮಾಡುವುದಕ್ಕೆ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಇಷ್ಟೊಂದು ಹಣವನ್ನು ಖರ್ಚುಮಾಡಿ ಪವರ್ ಪ್ರಾಜೆಕ್ಟನ್ನ ಕಟ್ಟಿ ಟ್ರಾನ್ಸ್‌ಮಿಷನ್ ಲೈನ್ ಹಾಕದಿದ್ದರೆ ವ್ಯರ್ಥವಾಗುತ್ತದೆ. ಅದಕ್ಕಾಗಿ ಹೆಚ್ಚಿನ ಟ್ರಾನ್ಸ್‌ಫಾರಂಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಟ್ರಾನ್ಸ್‌ಮಿಷನ್ ಲೈನ್ ಹಾಕಿ ಪ್ರತಿಯೊಂದು ಕಡೆಯಲ್ಲಿಯೂ ಪವರ್ ತೆಗೆದುಕೊಂಡು ಉಪಯೋಗ ಮಾಡಬೇಕಾಗಿದ್ದರೆ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ 58 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಟ್ರಾನ್ಸ್‌ಮಿಷನ್ ಲೈನ್, ಹಾಕುವುದಕ್ಕೆ ಸ್ಟೆಪ್‌ಡೌನ್ ಸ್ಟೇಷನ್ ಕಟ್ಟುವುದರ ಸಲುವಾಗಿ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಇಷ್ಟೆಲ್ಲಾ ಖರ್ಚು ಮಾಡಿದಮೇಲೆ ಇದರಲ್ಲಿ ಆರು-ಏಳು ಕೋಟಿ ರೂಪಾಯಿಗಳು ಮಿಗಬಹುದು. ಅದಕ್ಕಿಂತ ಹೆಚ್ಚು ಸಿಕ್ಕುವು

ದಿಲ್ಲ. ಅದನ್ನು ತಪಶೀಲಾಗಿ ಇನ್ನೂ ವರ್ಕ್‌ಔಟ್ ಮಾಡಿಲ್ಲ. ಒಂದು ವೇಳೆ ಅದರಲ್ಲಿ ಹಣ ಸಿಕ್ಕುವುದಾದರೆ ಆ ಹಣದಿಂದ ವರಾಹಿ ನದಿ ಮತ್ತು ಕಾಳೀನದಿಗಳ ಯೋಜನೆಯನ್ನು ತೆಗೆದು ಕೊಳ್ಳಬೇಕೆಂದಿದ್ದೇವೆ. ಈ ರೀತಿಯಾಗಿ ಪವರ್ ಪ್ರಾಜೆಕ್ಟಿಗೆ ಒದಗಿಸಿರತಕ್ಕ ಹಣವನ್ನು ಉಳಿಸಿ ಅದನ್ನು ಇರಿಗೇಷನ್ನಿಗೆ ಡೈವರ್ಟ್ ಮಾಡಬೇಕೆಂದು ಮನಸ್ಸು ಮಾಡಿಕೊಂಡಿದ್ದೇವೆ. ಇದರ ಜೊತೆಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಐದು ಸಾವಿರ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸ ಬೇಕೆಂದು ವಿಚಾರವನ್ನು ಇಟ್ಟುಕೊಂಡಿದ್ದೇವೆ. ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡಬೇಕೆಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ ಈ ಎಲ್ಲಾ ಕಾರ್ಯಕ್ರಮಗಳೂ ಮುಗಿಯಬೇಕಾದರೆ 106 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಹೆಚ್ಚೇನು ಅಲ್ಲ. ಇರತಕ್ಕ ವಿಚಾರಗಳನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಕಾವೇರಿ ನದಿಯ ನೀರನ್ನು ನಾವು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು ಎಂದು ನಾವು ಮನಸ್ಸು ಮಾಡಿದರೆ ನಮ್ಮ ದೇಶದ ರೈತರು ಜನತೆ ಹೆಚ್ಚು ಹೆಚ್ಚು ತೆರಿಗೆಯನ್ನು ಕೊಡಲು, ತ್ಯಾಗ ಮಾಡಲು ಸಿದ್ಧರಾಗಿದ್ದೇವೆ ಎಂದು ಅವರು ಒಂದೇ ಸ್ವರದಲ್ಲಿ ಹೇಳಬೇಕು. ತಾವು ಇಲ್ಲಿ ಒಂದು ಮಾತನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮಲ್ಲಿ ಏನೇನು ಇರಿಗೇಷನ್ನು ಪ್ರಾಜೆಕ್ಟುಗಳು ಆಗುತ್ತಿವೆಯೋ ಅವುಗಳಲ್ಲೆಲ್ಲಾ ಲಾಭ ಬರುವುದಕ್ಕಾಗಿಯೇ ಮಾಡು ತ್ತಿದ್ದೇವೆ ಎಂದು ಶ್ರೀ ಬಸಪ್ಪನವರು ಹೇಳಿದಂತೆ ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಅಪರ್ ಕೃಷ್ಣಾ ಪ್ರಾಜೆಕ್ಟಿನಲ್ಲಿ ಒಂದು ಎಕರೆಗೆ ಕಾಸ್ಟು ಏನಾಗುತ್ತದೆ ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಸರಾಸರಿ 2,000ರಿಂದ 2,500 ರೂಪಾಯಿಗಳವರೆಗೆ ಹೋಗುತ್ತದೆ. ನಮ್ಮ ಮಾನ್ಯ ಸದಸ್ಯರುಹೇಳುವ ಸುವರ್ಣಾವತಿ ಪ್ರಾಜೆಕ್ಟ್ ತೆಗೆದುಕೊಂಡರೆ ಸರಾಸರಿ ಒಂದು ಎಕರೆಗೆ ಅಲ್ಲಿ ಖರ್ಚು ಸುಮಾರು 2,800 ರೂಪಾಯಿಗಳವರೆಗೆ ಬರುತ್ತದೆ. ನಾವು ರೆಮ್ಯುನರೇಟೀವ್ ಆಗಿರುವ ಕೆಲಸಗಳನ್ನು ತೆಗೆದುಕೊಂಡು ಮಾಡಬೇಕು; ಅನ್‌ರೆಮ್ಯೂನರೇಟೀವ್ ಆಗಿರುವ ಕೆಲಸಗಳನ್ನು ನಾವು ಈಗಿನ ಪರಿಸ್ಥಿತಿಯಲ್ಲಿ ಮಾಡಬೇಕಂದರೆ ಬಹಳ ಕಷ್ಟವಾಗುತ್ತದೆ. ನೀರಾವರಿಗೆ ಎಷ್ಟು ನೀರು ಸಿಗುತ್ತದೋ ಅದನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು. ಇದಕ್ಕಾಗಿ ನಾವು ಹೆಚ್ಚು ಹಣವನ್ನು ಇಷ್ಟು ದಿವಸಗಳಿಂದ ಖರ್ಚುಮಾಡುತ್ತಿದ್ದೇವೆ. ಉದಾಹರಣೆಯಾಗಿ ಹೇಳುವಾಗ ಕೆ.ಆರ್. ಸಾಗರದ ಕೆಳಗಡೆ ನೀರಾವರಿ ಕೆಲಸಗಳನ್ನು ಮಾಡುತ್ತಿರುವುದರಿಂದ ಲಾಭ ಬರುತ್ತದೆ ಎಂದು ಹೇಳಬಹುದು. ಆದರೆ ಇವೊತ್ತು ಅಲ್ಲಿ ಮಾಡಿರುವ ಪ್ರಾಜೆಕ್ಟುಗಳಿಗಾಗಿ ಅಲ್ಲಿ ಬರುತ್ತಿರುವ ವಾಟರು ರೇಟು, ಹಾಗೂ ಇತರ ಕಾಂಟ್ರಿಬ್ಯೂಷನ್ನುಗಳನ್ನು ವಸೂಲು ಮಾಡಿದರೂ ಅದರಿಂದ ಇಲ್ಲಿ ಮೇಂಟೆನೆನ್ಸ್ ಚಾರ್ಜು ಕೂಡ ಆಗುವಷ್ಟು ಹಣ ಬರುವುದಿಲ್ಲ. ಇಂತಹ ಸ್ಥಿತಿಯಲ್ಲಿ ನಾವು ಕೆ.ಆರ್. ಸಾಗರದ ಕೆಳಗೆ ಇರಿಗೇಷನ್ ಪ್ರಾಜೆಕ್ಟುಗಳನ್ನು ಮಾಡಬೇಕಾಗಿ ಬಂದಿದೆ. ಇಲ್ಲಿ 1965-66ನೇ ಸಾಲಿನಲ್ಲಿ ಕೆ.ಆರ್. ಸಾಗರದಲ್ಲಿ ವಾಟರ್ ರೇಟು ಇತ್ಯಾದಿಗಳಿಂದ ಬಂದ ರೆವೆನ್ಯೂ ಎಷ್ಟು ಎಂದರೆ ಸುಮಾರು 20 ಲಕ್ಷ. ಇಲ್ಲಿ ಡಿವಿಜನ್ನುಗಳು ಇತ್ಯಾದಿಗಳನ್ನು ಮಾಡುತ್ತಿರುವುದರಿಂದ ಇಲ್ಲಿ ಮೇಂಟೆನೆನ್ಸ್‌ಗಾಗಿ ಎಷ್ಟು ಖರ್ಚು ಬರುತ್ತದೆ ಸುಮಾರು 18,80,000 ರೂಪಾಯಿಗಳಷ್ಟು ಬರುತ್ತಿದೆ. ನಮಗೆ ಇಲ್ಲಿ ಇನ್‌ಕಂ ಏನು ಬಂದಿದೆ ಎಂದರೆ ಸುಮಾರು 1,20,000. ಇದರೊಳಗೆ ವಾಟರು ರೇಟು ಮತ್ತು ಕಾಂಟ್ರಿಬ್ಯೂಷನ್ನು ಎಲ್ಲವೂ ಸೇರಿದೆ. ಇದರಲ್ಲಿ ಎಕರೆಯೊಂದಕ್ಕೆ ಕಬ್ಬಿನ ಮೇಲೆ 45 ರೂಪಾಯಿ, ಭತ್ತಕ್ಕೆ ಒಂದು ಎಕರೆಗೆ 15 ರೂಪಾಯಿಗಳು, ಡ್ರೈ ಕಂ ವೆಟ್‌ಗಾಗಿ ಏಳೂವರೆ ರೂಪಾಯಿಗಳು ಎಂದು ಹಾಕಿದರೂ ಕೂಡ ಸರಾಸರಿ ಒಂದು ಎಕರೆಗೆ ಖರ್ಚು ಎಷ್ಟು ಬರುತ್ತದೆ ಎಂದು ನೋಡಿದರೆ 2,000 ದಿಂದ 2,800 ರೂಪಾಯಿಗಳವರೆಗೆ ಬರುತ್ತದೆ. ಇಷ್ಟು ಖರ್ಚು ಬರುತ್ತಿದ್ದರೆ ಸರಕಾರದಲ್ಲಿ ಹಣ ಸಾಲದೆ ಮುಂದೆ ಸಾಲ ತರಬೇಕಾಗುತ್ತದೆ, ಸಾಲವನ್ನು ಕೇಂದ್ರದಿಂದರೋ ಇಲ್ಲವೇ ಬೇರೆ ಎಲ್ಲಿಂದರಾದರೂ ತರಬೇಕಾಗುತ್ತದೆ. ನಮಗೆ ಬರುತ್ತಿರುವ ರಿಟರ್ನ್ ಕೂಡ ಸರಿಯಾಗಿ ಬರುತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—20 ಲಕ್ಷ ರೂಪಾಯಿಗಳು ಹಿಂದೆ ಇದ್ದ ವಾಟರು ರೇಟಿನ ಪ್ರಕಾರ ಬರುತ್ತಿತ್ತು ಎಂದು ತೋರುತ್ತದೆ. ಈಚೆಗೆ ವಾಟರು ರೇಟನ್ನು ರಿವೈಸು ಮಾಡಿರುವುದರಿಂದ ಹೆಚ್ಚು ಹಣ ವಾಟರು ರೇಟಿನಿಂದ ಈಗ ವಸೂಲಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ರೇಟುಗಳು ಈಗ ರಿವೈಸು ಆಗಿರುವುದರಿಂದ ಈ ಬಾಬಿನಲ್ಲಿ ಸ್ವಲ್ಪ ಹೆಚ್ಚಾಗಿ ಬರುತ್ತದೆ. ಆದರೂ ಡೆವಲಪ್‌ಮೆಂಟು ಕೆಲಸಗಳಿಗಾಗಿ ಇದು ಸಾಲುವುದಿಲ್ಲ. ಇದಕ್ಕಾಗಿ ಸಾಲ ತರಬೇಕು. ಇವೊತ್ತು ಎರಡು ಸಾವಿರ ಎಕರೆಗಳಷ್ಟು ಡೆವಲಪ್ ಮಾಡಬೇಕಾದರೆ ಖರ್ಚು ಏನಾಗುತ್ತೆ ಅದನ್ನು ನೋಡಿಕೊಂಡು ಒಂದು ಎಕರೆಯ ಮೇಲೆ ಬಡ್ಡಿ ಬೇರೆ ಕೊಡಬೇಕಾಗಿ ಬರುತ್ತದೆ. ಇಂತಹ ಬಡ್ಡಿ ನಾರ್ಮಲ್ ಆಗಿ ಏನು ಬರುತ್ತದೆ ಎಂದರೆ, ಸುಮಾರು ಒಂದು ಎಕರೆಗೆ 2,000 ರೂಪಾಯಿಗಳು ಖರ್ಚು ಬಂದರೆ 90 ರೂಪಾಯಿಗಳು ಬಡ್ಡಿಯಾಗಿ ಕೊಡಬೇಕಾಗಿ ಬರು ತ್ತದೆ. ಇದರ ಸರಾಸರಿ ನೋಡಿದರೆ ನೂರಕ್ಕೆ 15 ರೂಪಾಯಿಗಳಂತೆ ಬರುತ್ತದೆ. ಇದರ ಮೇಲೆ

(ಶ್ರೀ ವೀರೇಂದ್ರ ಪಾಟೀಲ್)

ಇಂಡೈರೆಕ್ಟ್ ಟ್ಯಾಕ್ಸು ಬೇರೆ ಇದೆ ಎಂದು ಲೆಕ್ಕ ಹಾಕಿಕೊಂಡರೂ ನಮಗೆ ಮಾಡುತ್ತಿರುವ ಖರ್ಚಿಗೆ ಸಾಕಷ್ಟು ಲಾಭ ಬರುತ್ತಿಲ್ಲ ಎಂದು ಇಲ್ಲಿ ಕಳಕಳಿಯಿಂದ ಹೇಳುತ್ತೇನೆ. ನಾವು ಇದುವರೆಗೆ ಎಷ್ಟು ಪ್ರಾಜೆಕ್ಟುಗಳನ್ನು ಮಾಡಿದ್ದೇವೋ ಅದರಲ್ಲಿ ಸುಮಾರು ಶೇಕಡಾ 20 ರಿಂದ 25 ರಷ್ಟು ಲಾಭ ಕೂಡ ಬರುತ್ತಿಲ್ಲ. ಶೇಕಡಾ 25 ರಷ್ಟು ಲಾಭ ಪಡೆಯಬೇಕಾದರೆ ಶೇಕಡಾ 75 ಜನರು ಸ್ವಲ್ಪಮಟ್ಟಿಗೆ ತ್ಯಾಗ ಮಾಡಬೇಕಾಗಿ ಬರುತ್ತದೆ. ಈ ರೀತಿಯಾಗಿ ತ್ಯಾಗ ಮಾಡುವ ಜನ ಬೇಕು. ನಮ್ಮಲ್ಲಿ ಯಾರು ಲಾಭ ಮಾಡುತ್ತಿದ್ದಾರೋ ಅವರುಗಳು ದೊಡ್ಡ ಮನಸ್ಸು ಮಾಡಿ ನಮ್ಮ ಅಣ್ಣತಮ್ಮಂದಿರು ಕಷ್ಟದಲ್ಲಿದ್ದಾರೆ ಎಂದು ಅವರ ಲಾಭದಲ್ಲಿ ಸ್ವಲ್ಪ ದೇಶಕ್ಕಾಗಿ ಬಿಟ್ಟುಕೊಟ್ಟರೆ ನಮಗೆ ಇದರಲ್ಲಿ ಅಷ್ಟು ಕಷ್ಟ ಬರಲಾರದು. ಆ ರೀತಿಯಾಗಿ ಒಂದು ತ್ಯಾಗ ಮಾಡುವ ಸಾಹಸ ನಮ್ಮ ಜನರಲ್ಲಿ ಇಲ್ಲ ಎಂದು ಹೇಳುತ್ತೇನೆ. ನಮಗೆ ಎಲ್ಲ ಕಡೆಯಲ್ಲಿಯೂ ಬೇಗ ಪ್ರಾಜೆಕ್ಟುಗಳು ಆಗಬೇಕು. ಅದೇನೋ ಆವಶ್ಯಕ ಎಂದು ನಾವು ತೆಗೆದುಕೊಳ್ಳಬಹುದು.

Sri S. SIVAPPA (Shravanabelagola).—No begging.

ಶ್ರೀ ವೀರೇಂದ್ರ ಪಾಟೀಲ್.—ನಾವು ಬೆಗ್ ಮಾಡಬೇಕೆಂದು ಹೇಳುತ್ತಿಲ್ಲ. ಅವರೇ ತಯಾರಾಗುತ್ತಿದ್ದಾರೆ. ನಾವೂ ಕೂಡ ಅದರಂತೆ ತಯಾರಾಗುತ್ತಿದ್ದೇವೆ. ಇನ್ನೂ ಹೆಚ್ಚು ಕೊಡುವುದಕ್ಕೂ ಹೆಚ್ಚು ತ್ಯಾಗ ಮಾಡಲೂ ಜನ ಹೆಚ್ಚುಹೆಚ್ಚಾಗಿ ಮುಂದೆ ಬರಬೇಕು. ನಮ್ಮ ದೇಶದಲ್ಲಿರುವ ಜನರೂ ಅವರ ಅಣ್ಣತಮ್ಮಂದಿರ ಹಾಗೆ ಇರುವವರು, ಅದಕ್ಕಾಗಿ ಅವರ ಅನುಕೂಲಕ್ಕಾಗಿ ಅವಕಾಶ ಮಾಡಿಕೊಡಲು ಸ್ವಲ್ಪ ಹೆಚ್ಚು ಮಟ್ಟಿನ ತ್ಯಾಗವನ್ನು ಮಾಡಲು ಸಿದ್ಧರಾಗಿರಬೇಕು. ಇದರ ಬಗ್ಗೆ ದೇಶದ ಜನತೆಯಲ್ಲಿ ತಿಳುವಳಿಕೆಯನ್ನುಂಟುಮಾಡಿಕೊಡಬೇಕಾಗಿದೆ ಮತ್ತು ಇದರ ಬಗ್ಗೆ ಜನರಲ್ಲಿ ಆಸಕ್ತಿಯನ್ನು ಹೆಚ್ಚು ಮಾಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಪ್ರಾಜೆಕ್ಟನ್ನು ಮಾಡುವುದಕ್ಕೋಸ್ಕರ ಎಸ್ಟಾಬ್ಲಿಷ್‌ಮೆಂಟು ಹಾಗೂ ಮೇಂಟೆನೆನ್ಸ್‌ಗಾಗಿ ಬೇಕಾದಷ್ಟು ವೆಚ್ಚ ಮಾಡುತ್ತಿದ್ದೀರಿ ಇದು ಹೇಗಿದೆ ಎಂದರೆ ಮೂಗಿಗಿಂತ ಮೂಗುತಿ ಭಾರ ಎಂದಂತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ತಮಗೆ ಹಾಗೆ ಅನಿಸುತ್ತದೆ. ತಾವು ಇಲ್ಲಿ ಎಲ್ಲವನ್ನೂ ಲೆಕ್ಕಹಾಕಿ ನೋಡಿದರೆ ಒಂದು ಪ್ರಾಜೆಕ್ಟ್‌ಗಾಗಿ ಏನು ಬರುತ್ತದೆ ಎನ್ನುವುದು ತಿಳಿಯುತ್ತದೆ. ಅಲ್ಲದೆ ರೈತರಿಗೆ ನೀರು ಉಪಯೋಗ ಮಾಡಿಕೊಳ್ಳಲು ಸರಕಾರದವರೇ ಕ್ಯಾಷು ಕೊಟ್ಟು ಸಹಾಯ ಮಾಡಬೇಕು ಮತ್ತು ಅವರಿಗೆ ಭೂಮಿ ಎಲ್ಲಿದೆಯೋ ಅಲ್ಲಿಯವರೆಗೆ ಫೀಡರು ಚಾನಲ್ಲುಗಳನ್ನು ಹಾಕಿಸಿಕೊಡಬೇಕು, ಇದನ್ನು ರೈತರು ತಾವೇ ತೆಗೆದುಕೊಳ್ಳಲು ಮುಂದೆ ಬರುವುದಿಲ್ಲ. ಅಲ್ಲದೆ ಅವರಿಗೆ ಬೇಕಾಗುವ ಗೊಬ್ಬರಗಳಿಗಾಗಿ, ಬೀಜಗಳಿಗಾಗಿ ತಕಾವಿ ಸಾಲಗಳನ್ನು ಕೊಡಬೇಕು ಮತ್ತು ಫರ್ಟಿಲೈಸರುಗಳನ್ನು ಒದಗಿಸಿ ಕೊಡಬೇಕು. ಈ ರೀತಿಯಾಗಿ ಅಭಿವೃದ್ಧಿ ಮಾಡಿಕೊಡಲು ಸುಮಾರು ನೂರಾರು ಕೋಟಿಯಷ್ಟು ಖರ್ಚು ಬರುತ್ತಿರುವುದರಿಂದ ನಾವು ಯಾವ ಹೊಸದಾದ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಲು ನಮ್ಮಲ್ಲಿ ದುಡ್ಡು ಇರುವುದಿಲ್ಲ. ಇದರಿಂದ ಹೇಗೆ ಲಾಭ ಬರುತ್ತದೆ ಎನ್ನುವುದನ್ನು ತಾವೇ ಪರೀಕ್ಷೆ ಮಾಡಿ ನೋಡಬಹುದು. ಇಂತಹ ಒಂದು ಪರಿಸ್ಥಿತಿ ಇರುವುದರಿಂದ ಜನರು ತಾವಾಗಿಯೇ ಸ್ವಲ್ಪ ತ್ಯಾಗ ಮಾಡುವ ಪರಿಸ್ಥಿತಿಗೆ ಬರಬೇಕು ಮತ್ತು ಅಂತಹ ಒಂದು ವಾತಾವರಣವನ್ನು ನಾವು ಕಲ್ಪಿಸಿಕೊಡಬೇಕು. ಇದಕ್ಕಾಗಿ ಸ್ವಲ್ಪಮಟ್ಟಿನ ಅನುಕೂಲಗಳನ್ನು ಬಿಟ್ಟುಕೊಡಬೇಕಾಗಿ ಬರುತ್ತದೆ. ಇನ್ನು ಇಲ್ಲಿ ಸುಮಾರು ಎರಡೂವರೆ ಅಥವಾ ಮೂರು ಕೋಟಿಯಷ್ಟು ಇನ್‌ಕಂ ಬರುತ್ತಿರುವ ನಮ್ಮ ಪ್ರಾಜೆಕ್ಟುಗಳನ್ನು ಮಾಡುವುದರಿಂದ ಜನಕ್ಕೆ ಅನುಕೂಲವಾಗುತ್ತದೆ ಇದಕ್ಕಾಗಿ ರಸ್ತೆಗಳ ಕಾರ್ಯವನ್ನು ಮಾಡುವುದನ್ನು ಸ್ವಲ್ಪ ಕಾಲ ಬಿಡಬೇಕೆಂದು ಹೇಳಿದರು.

ಶ್ರೀ ಎಸ್. ಶಿವಪ್ಪ.—ಕಂಟ್ರಾಕ್ಟರುಗಳಿಗಾಗಿ ಏಕೆ ಅಷ್ಟು ದುಡ್ಡು ತುಂಬುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಕಂಟ್ರಾಕ್ಟರುಗಳು ಯಾರು ಇರಬೇಕೆಂದು ಚುನಾಯಿತರಾಗಿದ್ದಾರೋ ಅಂತಹವರು ಕಾನೂನು ಪ್ರಕಾರ ಏನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತಾರೆ. ಅದರಲ್ಲಿ ಲೋಪವಾಗಿದ್ದರೆ ಅದನ್ನು ವಿಚಾರ ಮಾಡೋಣ. ಅದು ಬೇರೆ ವಿಚಾರ. ಆದರೆ ಈಗ ಕಾವೇರಿ ನದಿಯ ನೀರನ್ನು ಇಲ್ಲಿಯವರೆಗೆ ಯಾರು ಹೆಚ್ಚು ಉಪಯೋಗ ಮಾಡಿಕೊಂಡಿದ್ದಾರೋ ಮತ್ತು ಹೆಚ್ಚು ಬೆಳೆ ಬೆಳೆಯುವವರಾಗಿದ್ದಾರೋ ಅಂತಹವರಿಂದ ದೇಶಕ್ಕೆ ಸ್ವಲ್ಪಮಟ್ಟಿನ ಹಣ ನಮ್ಮ ದೇಶಕ್ಕೆ ಬರುತ್ತಿದೆ ಎನ್ನುವುದೂ ಒಂದು ಕಾರಣ ಇರಬಹುದು. ಕೊನೆಯದಾಗಿ ಎಷ್ಟು ಮಟ್ಟಿಗೆ ನಿಮಗೆ ಕಾವೇರಿ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕೆಂದು ಆತುರವಿದೆಯೋ

ಅಷ್ಟೇ ಆತುರ ಮತ್ತು ಆಸಕ್ತಿ ಈ ನೀರನ್ನು ಉಪಯೋಗವಾಡಬೇಕೆಂದು ನಮಗೂ ಇದೆ. ಇದನ್ನು ವಿಚಾರ ಮಾಡುತ್ತಿದ್ದೇವೆ. ಇದರ ಸಲುವಾಗಿ ಈಗಾಗಲೇ ನಾವೇ ಒಂದು ಎಕ್ಸ್‌ಪರ್ಟ್ ಟೆಕ್ನಿಕಲ್ ಕಮಿಟಿ ಎಂದು ನೇಮಕ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ನೀರಿನ ಉಪಯೋಗದ ಬಗ್ಗೆ 1924ರ ಅಗ್ರಿಮೆಂಟಿನಲ್ಲಿ ನಮಗೆ ಏನೇನು ಅನುಕೂಲತೆಗಳಿವೆ ಮತ್ತು ಯಾವ ಯಾವ ರೀತಿಯ ಲೋಪದೋಷಗಳು ಕಂಡುಬರುತ್ತವೆ ಇದನ್ನು ಸಂಪೂರ್ಣವಾಗಿ ಕೂಲಂಕಷವಾಗಿ ವಿಚಾರ ಮಾಡಿ 1974ರಲ್ಲಿ ನಮ್ಮ ನಿಯಮಕ್ಕೆ ವಿರುದ್ಧವಾಗಿ ಏನಾದರೂ ದುರುಪಯೋಗವಾಗಿದ್ದರೆ ಅದನ್ನೂ ಪರಿಶೀಲನೆ ಮಾಡುವ ಉದ್ದೇಶದಿಂದ ಒಂದು ಕಮಿಟಿಯನ್ನು ರಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಇದ್ದೇವೆ. ಇದು ಬರೀ ಒಂದು ಟೆಕ್ನಿಕಲ್ ಕಮಿಟಿ ರೀತಿಯಲ್ಲಿ ಮಾಡಬೇಕೆಂದು ಇದೆ. ಇದರಲ್ಲಿ ನಾನ್ ಅಫಿಷಿಯಲ್‌ಗಳಿರುವುದಿಲ್ಲ. ಇದರೊಳಗೆ ಚೀಫ್ ಇಂಜನಿಯರು ಎಂದು ಯಾರಿದ್ದಾರೆ ಅವರನ್ನು ಇವರ ಅಧ್ಯಕ್ಷರಾಗಿ ಮಾಡಿ ಇದರೊಳಗೆ ಮೀಡಿಯಂ ಹಾಗೂ ಮೇಜರು ಪ್ರಾಜೆಕ್ಟುಗಳ ಚೀಫ್ ಇಂಜನಿಯರುಗಳು ಎಂದು ಯಾರಿದ್ದಾರೆ ಅವರನ್ನೂ ಇದರಲ್ಲಿ ಸೇರಿಸಿ ಒಬ್ಬರು ಚೀಫ್ ಇಂಜನಿಯರನ್ನು ಛೇರ್ಮನ್ನರನ್ನಾಗಿ ಮಾಡಬೇಕೆಂದು ಇದೆ. ಇವರುಗಳು ಮಾಡುವ ಕೆಲಸಗಳು ಯಾವುವು ಇರಬೇಕು ಎನ್ನುವುದರಲ್ಲಿ ಈ ರೀತಿ ಟರ್ಮ್ಸ್ ಆಫ್ ರೆಫರೆನ್ಸ್‌ಗಳು ಇರಬೇಕೆಂದು ಮಾಡಲಾಗಿದೆ :

> to review the agreement and prepare Mysore's stand at the time of revision of the agreement.

1974ರೊಳಗೆ ನಮ್ಮಲ್ಲಿ ನೀರನ್ನು ಪೂರ್ತಿ ಉಪಯೋಗ ಮಾಡಿಕೊಳ್ಳಲು ಎಷ್ಟೆಷ್ಟು ಸ್ಕೀಮನ್ನು ತಯಾರು ಮಾಡಿದ್ದಾರೆ, ಅವುಗಳಲ್ಲಿ ಎಷ್ಟು ಪೆಂಡಿಂಗ್‌ನಲ್ಲಿ ಬಿದ್ದಿವೆ ಎನ್ನುವುದನ್ನೂ ನೋಡಿ ಅವರು ವರದಿ ತಯಾರು ಮಾಡಿ ಸರಕಾರಕ್ಕೆ ತಿಳಿಸಿದರೆ ಅದರಮೇಲೆ ಯಾವುದನ್ನು ತೆಗೆದುಕೊಳ್ಳಬೇಕು ಎನ್ನುವುದನ್ನೂ ಪರಿಶೀಲನೆ ಮಾಡಿ ಮಾಡಬಹುದು. ಇದಕ್ಕೆ ಹಣದ ಕೊರತೆಯೇನೂ ಬರುವುದಿಲ್ಲ. ನಮ್ಮಲ್ಲಿ ಎಷ್ಟೋ ಕಡೆಗಳಲ್ಲಿ ಕೆಲವು ಬಾಬುಗಳಲ್ಲಿ ಹಣ ಉಳಿಯುವ ಸನ್ನಿವೇಶಗಳಿವೆ. ಅದರಿಂದ ಇಲ್ಲಿಗೆ ಡೈವರ್ಟ್ ಮಾಡಬೇಕೆಂದೂ ಯೋಚನೆ ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿದರೂ ಈ ಸಮಸ್ಯೆ ಬಹಳ ಭೀಕರವಾಗಿರುವುದರಿಂದ ನಮ್ಮ ರೈತರು ಸ್ವಲ್ಪಮಟ್ಟಿನ ತ್ಯಾಗ ಮಾಡುವುದಕ್ಕೆ ತಯಾರಾಗಿರಬೇಕು, ಮತ್ತು ಹಾಗೆ ತ್ಯಾಗ ಮಾಡುವ ದೊಡ್ಡ ಮನಸ್ಸು ಮಾಡದೇ ಇದ್ದರೆ ಸಾಧ್ಯವಾಗುವುದಿಲ್ಲ. ಇಲ್ಲಿ ಈ ನಿರ್ಣಯವನ್ನು ವಿರೋಧ ಮಾಡಬೇಕು ಎಂದು ಹೇಳುತ್ತಿಲ್ಲ ಮತ್ತು ಆ ಉದ್ದೇಶವೂ ಇಲ್ಲ. ಇದನ್ನು ತತ್ವಶಃ ಒಪ್ಪುತ್ತೇನೆ ಮತ್ತು ದೇಶದ ಹಿತದೃಷ್ಟಿಯಿಂದ ಸರಕಾರವೂ ಒಪ್ಪುತ್ತದೆ ಎಂದು ಸಂತೋಷವಾಗಿ ಹೇಳುತ್ತೇನೆ ಮತ್ತು ಕಾವೇರಿ ನೀರಿನ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರಯತ್ನ ಮಾಡಿ ಅದನ್ನು ಹೆಚ್ಚಿಸಬೇಕು ಎನ್ನುವುದೇ ನಮ್ಮ ಉದ್ದೇಶ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮೀ, ಹೊಗೇನಕಲ್ ಯೋಜನೆಯ ಬಗ್ಗೆ ಮೊನ್ನೆ ಇಲ್ಲಿ ಒಂದು ಪ್ರಶ್ನೆ ಬಂದಾಗ ಇದನ್ನು ನಮ್ಮ ಸರಕಾರ ಒಪ್ಪಲು ಕೇಂದ್ರದವರು ಬಹಳವಾದ ಪ್ರೆಷರ್ ತರುತ್ತಿದ್ದಾರೆ ಎಂದು ಕೇಳಿದೆವು. ಮದರಾಸಿನವರು ಕಾವೇರಿ ನದಿಯಿಂದ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕೋ ಅದಕ್ಕೂ ಮೀರಿ ಹೊಗೇನಕಲ್ ಯೋಜನೆಗಾಗಿ ಉಪಯೋಗಿಸಿಕೊಂಡು ಎಲೆಕ್ಟ್ರಿಕ್ ಪವರು ತಯಾರು ಮಾಡಬೇಕೆಂದು ಇದ್ದಾರೆ. ಇಂತಹ ಸಂದರ್ಭದಲ್ಲಿ ನಮ್ಮ ಸರಕಾರ ಯಾವ ರೀತಿಯಾಗಿ ನಡೆದುಕೊಳ್ಳುತ್ತಿದ್ದಾರೆ. ಮೈಸೂರು ರಾಜ್ಯದವರು ಅಗ್ರಿಮೆಂಟು ಪ್ರಕಾರ ಎಲ್ಲ ಸವಲತ್ತುಗಳನ್ನೂ ಪಡೆಯುತ್ತಿದ್ದಾರೆಯೇ ? ಯಾವ ರೀತಿಯಾಗಿ ಅಗ್ರಿಮೆಂಟನ್ನು ವಿರೋಧ ಮಾಡಿ ಮದ್ರಾಸಿನವರು ಮಾಡುತ್ತಾರೆ ಎನ್ನುವುದನ್ನು ಜನತೆ ಕೇಳುತ್ತಿದ್ದಾರೆ ಮತ್ತು ಇಲ್ಲಿರುವ ಎಲ್ಲ ಪಕ್ಷದ ಸದಸ್ಯರುಗಳೂ ಕೂಡ ಇದುವರೆಗೆ ಯಾವ ಪ್ರಯತ್ನಗಳು ನಡೆದಿವೆ ಎಂದು ಕೇಳಿದ್ದರು. ಹೊಗೇನಕಲ್ ಯೋಜನೆ ಮಾಡುವುದರಿಂದ ಕಾವೇರಿ ನೀರಿನ ಉಪಯೋಗ ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಏನೂ ಹೇಳಲಿಲ್ಲ. ಇದರ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಾಜೆಕ್ಟ್ ಬಗ್ಗೆ ಒಂದೆರಡು ಸಲ ಪ್ರಶ್ನೋತ್ತರಗಳ ಕಾಲದಲ್ಲಿ ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಅವರು ತಯಾರು ಮಾಡಿದಂತೆ ಈ ಪ್ರಾಜೆಕ್ಟನ್ನು ಒಪ್ಪಿಕೊಳ್ಳುವುದಕ್ಕೆ ನಿಜವಾಗಿಯೂ ಮೈಸೂರು ಸರ್ಕಾರಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಕಾವೇರಿಯಲ್ಲಿರುವಂತಹ

(ಶ್ರೀ ವೀರೇಂದ್ರ ಪಾಟೀಲ್)

ನೀರನ್ನು ನೀರಾವರಿಗೆ ಉಪಯೋಗ ಮಾಡಿಕೊಳ್ಳುವಂತಹದು ಹೆಚ್ಚಿನ ಮಹತ್ವದ್ದು ಇದೆ. ಅದಕ್ಕೆ ಮೊದಲನ ಆದ್ಯತೆ ಕೊಡಬೇಕೆಂದು ಇದೆ. ಅದಾದ ಮೇಲೆ ಅವರ ಬಾರ್ಡರ್‌ನಲ್ಲಿ ನಮ್ಮ ನೀರಿನ ಹಕ್ಕು ಪೂರ್ಣ ಸಿಕ್ಕಮೇಲೆ ಎಷ್ಟುಮಟ್ಟಿಗೆ ಈ ಪ್ರಾಜೆಕ್ಟ್‌ನಿಂದ ಪವರ್ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಷ್ಟುಮಟ್ಟಿಗೆ ಅದನ್ನು ತಯಾರು ಮಾಡುವುದಕ್ಕೆ ತಯಾರಾಗಿದ್ದೇವೆ; ಎಂಬ ಮಾತನ್ನು ಹೇಳಿದ್ದೇವೆ. ಅವರು ಒಂದು ಪ್ರಾಜೆಕ್ಟನ್ನು ಮಾಡಿದ್ದರು, ನಾವು ಮಾಡುವುದರ ಸಲುವಾಗಿ ಸಂಪೂರ್ಣ ಡೇಟಾ ಶೇಖರಣೆ ಮಾಡಬೇಕೆಂದು ಇದ್ದೆವು, ಅವರಿಂದ ಕೆಲವು ಅಂಕಿ ಸಂಖ್ಯೆಗಳು ಬರುವುದು ತಡವಾಗಿರುವುದರಿಂದ ನಮ್ಮ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡುವುದು ತಡವಾಗಿದೆ ಎಂಬ ಮಾತನ್ನು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸಿದ್ದೇವೆ. ನಮಗೆ ಬೇಕಾದ ಅಂಕಿ ಸಂಖ್ಯೆಗಳು ಅವರಿಂದ ಬರುವವರೆಗೂ ನಮ್ಮ ಪ್ರಾಜೆಕ್ಟ್ ರಿಪೋರ್ಟನ್ನು ಫೈನಲೈಸ್ ಮಾಡುವುದಕ್ಕಾಗುವುದಿಲ್ಲ. ಇದರ ಜವಾಬ್ದಾರಿ ಮದರಾಸಿಗೆ ಹೋಗುತ್ತದೆಯೇ ಹೊರತು ನಮಗೆ ಆ ದೋಷಾರೋಪಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದೂ ಕೂಡ ತಿಳಿಸಿದ್ದೇವೆ. ಎಷ್ಟು ತೀವ್ರವಾಗಿ ಅವರಿಂದ ಆ ಸಮಾಚಾರ ಬರುತ್ತದೆ ಅಷ್ಟು ತೀವ್ರವಾಗಿ ನಾವು ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಿ ಕೇಂದ್ರಕ್ಕೆ ಸಲ್ಲಿಸುತ್ತೇವೆ. ಆಮೇಲೆ ಎರಡು ಸರ್ಕಾರಗಳ ಪ್ರತಿನಿಧಿಗಳೂ ಸೇರಿ ವಿಚಾರ ವಿನಿಮಯ ಮಾಡಿ ನಿರ್ಣಯ ತೆಗೆದುಕೊಳ್ಳಬೇಕು. ಇದು ಎರಡು ಸಂಸ್ಥಾನಗಳಿಗೆ ಸಂಬಂಧಪಟ್ಟ ಪ್ರಾಜೆಕ್ಟ್ ಇರುವುದರಿಂದ ಯಾವುದೇ ಒಂದು ಸ್ಟೇಟ್ ಆಗಲಿ ಸಿ.ಪಿ.ಡಬ್ಲ್ಯು.ಸಿ. ಅವರನ್ನಾಗಲಿ, ಪ್ಲಾನಿಂಗ್ ಕಮಿಷನ್‌ನವರನ್ನಾಗಲಿ, ಅವರ ಮೇಲೆ ಪ್ರಭಾವ ಬೀರಿ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಪಡೆದುಕೊಂಡು ಬರುತ್ತಾರೆ ಎನ್ನುವುದರಲ್ಲಿ ಅರ್ಥವಿಲ್ಲ, ಆ ರೀತಿಯಿಂದ ಆಗುವುದಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಹೇಮಾವತಿ ಪ್ರಾಜೆಕ್ಟನ್ನು ಕೈಬಿಟ್ಟಿದ್ದೀರಿ, ಇದನ್ನು ಸ್ವಲ್ಪ ವಿವರವಾಗಿ ಹೇಳಿ, ಏಕೆಂದರೆ ನಮಗೆ ಈ ರೀತಿ ಕೈಬಿಟ್ಟಿರುವುದನ್ನು ನೋಡಿ ಗಾಬರಿಯಾಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಪುಸ್ತಕದಲ್ಲಿ ಏನು ಇದೆಯೋ ಅದನ್ನು ನಾನು ನೋಡಿಲ್ಲ. ಹೇಮಾವತಿಯನ್ನು ಕೈಬಿಡುವಂತಹ ಪ್ರಶ್ನೆಯೇ ಇಲ್ಲ. ಒಂದು ಮಾತನ್ನು ಮಾತ್ರ ಹೇಳಬೇಕಾಗಿದೆ, ಇವತ್ತು ನಮ್ಮಲ್ಲಿ ಶಕ್ತಿ ಎಷ್ಟು ಇದೆಯೋ ಅಷ್ಟು ಪ್ರಾರಂಭ ಮಾಡಬೇಕೆಂಬ ವಿಚಾರ ಇದೆ. ಹೇಮಾವತಿ, ಹಾರಂಗಿ ಇವುಗಳ ಪ್ರಿಲಿಮಿನರಿ ವರ್ಕ್ಸ್ ಈ ವರ್ಷದಿಂದ ಪ್ರಾರಂಭ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಟೆಂಡರ್ಸ್‌ನ್ನು ಕರೆದಿದ್ದೇವೆ. ಹೇಮಾವತಿಗೂ ಟೆಂಡರ್ ಇದೆ. ಹೆಚ್ಚು ದುಡ್ಡು ಖರ್ಚು ಮಾಡಿ ಅದಕ್ಕೆ ತಕ್ಕಷ್ಟು ಲಾಭ ಬರುವಂತಹ ಒಂದು ರೀತಿಯಲ್ಲಿ ಪ್ರಾಜೆಕ್ಟ್ ಕಟ್ಟಬೇಕೆಂಬ ವಿಚಾರ ಸರ್ಕಾರದ ಮುಂದೆ ಇದೆ.

ಶ್ರೀ ಎಂ. ಸಿ. ಬಸಪ್ಪ.—ಈಗಾಗಲೇ ಕಾವೇರಿಯಲ್ಲಿ ನಡೆಯುತ್ತಾ ಇರತಕ್ಕ ಕೆಲವು ಪ್ರಾಜೆಕ್ಟ್‌ಗಳಿಗೆ ಬಡ್ಜೆಟ್ ಅಲಾಟ್‌ಮೆಂಟ್ ಮಾಡಿದ್ದೀರಿ. ಆದರೆ ಅದನ್ನು ಖರ್ಚು ಮಾಡುವುದಕ್ಕೆ ಆಗುತ್ತಾ ಇಲ್ಲ. ಇದಕ್ಕೆ ಮುಖ್ಯವಾದ ಕೊರತೆ ಏನೆಂದರೆ, ಕನ್‌ಸ್ಟ್ರಕ್ಷನ್ ಸರ್ಕಲ್ ಇಲ್ಲ, ಇದನ್ನು ಮಾಡಬೇಕೆಂದು ನಾನು ಸಲಹೆ ಮಾಡಿದೆ ಈ ವಿಷಯ ತಾವು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ಕನ್‌ಸ್ಟ್ರಕ್ಷನ್ ಸರ್ಕಲ್ ಬೇಕು ಎನ್ನುವ ಪ್ರಪೋಸಲ್ ಸರ್ಕಾರದ ಮುಂದೆ ಇದೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಕೊಟ್ಟ ದುಡ್ಡು ಖರ್ಚಾಗುತ್ತಾ ಇಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಖರ್ಚು ಮಾಡಿಲ್ಲ ಎಂದು ಅಲ್ಲ, ಖರ್ಚು ಮಾಡುವುದಕ್ಕೆ ಅವಕಾಶವಾಗಿಲ್ಲ ಆದ್ದರಿಂದ ಆ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ಕಾರ್ಯಕ್ರಮ ಕೈಕೊಂಡು ಹೆಚ್ಚಿನ ದುಡ್ಡು ಖರ್ಚು ಮಾಡಬೇಕಾದರೆ ಒಂದು ಕನ್‌ಸ್ಟ್ರಕ್ಷನ್ ಸರ್ಕಲ್ ಮಾಡಬೇಕು, ಸರ್ಕಾರದ ಮುಂದೆ ಆ ಒಂದು ಪ್ರಪೋಸಲ್ ಇದೆ.

Mr. DEPUTY SPEAKER.—I will put the motion to the vote of the House.

The question is :—

"That this House urges on the Government to device all ways and means of ultilising fully before 1974 the waters of the Cauvery basin."

(The motion was adopted unanimously.)

(Loud applause)

The House will now rise to meet again at 3-00 P.M.

The House adjourned at Twenty-five Minutes past Twelve of the Clock, and reassembled at Fifteen Minutes past Three of the Clock.

[MR. DEPUTY SPEAKER in the Chair].

FOURTH FIVE YEAR PLAN

General Discussion

MR. DEPUTY SPEAKER.—Now we will take up the Discussion on the Fourth Five Year Plan.

SRI S. SIVAPPA.—Some Minister must say something about the details of the Plan before we could participate in the debate.

SRI H. R. KESHAVA MURTHY.—Is it the Opposition or the Government who is launching the fourth Five Year Plan ?

SRI C. J. MUCKANNAPPA.—They have to set the ball in motion.

SRI K. S. SURYANARAYANA RAO.—They must tell us what is the size of the plan, what are the resources, etc.

MR. DEPUTY SPEAKER.—The concerned Minister will intervene in the course of the debate.

SRI C. J. MUCKANNAPPA.—There must be some data for us to speak on the plan. We should know what is the money provided, what are the projects to be taken up, what is the assistance required from the Government of India, what are the resources proposed, etc.

MR. DEPUTY SPEAKER.—Copies of the Preliminary Memorandum has already been distributed to members.

SRI K. S SURYANARAYANA RAO.—What are the targets fixed, what is the spillover, all these matters should be explained to us before the debate begins.

SRI K. NAGAPPA ALVA (Minister for Health).—The Preliminary Memorandum on the Fourth Five Year Plan, Mysore, has been published and distributed to all members. Unless it is to embarrass Government, I do not think there is actually any meaning in saying that these things must be explained. Everything is there before the House and we have now only to discuss.